ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

JSS MAHAVIDYAPEETHA, MYSURU


# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

*Monthly Magazine*


ಸಂಪುಟ 10 ಸಂಚಿಕೆ 10 ಅಕ್ಟೋಬರ್ 2025




ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಗೌರವಾನ್ವಿತ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮುರವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಗೌರವಿಸಿ ಅಭಿನಂದಿಸಿದರು. ಕೇಂದ್ರ ಸಚಿವರಾದ ಶ್ರೀ ಎಚ್.ಡಿ. ಕುಮಾರಸ್ವಾಮಿಯವರು ಚಿತ್ರದಲ್ಲಿದ್ದಾರೆ. (11 ಸೆಪ್ಟೆಂಬರ್ 2025)



ಅಮೆರಿಕದ ಮೇರಿಲ್ಯಾಂಡ್‌ನಲ್ಲಿರುವ ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರಕ್ಕೆ ಲೆಫ್ಟಿನೆಂಟ್ ಗವರ್ನರ್ ಶ್ರೀಮತಿ ಅರುಣಾ ಮಿಲ್ಲರ್‌ರವರು ಹಾಗೂ ಅವರ ಪತಿ ಶ್ರೀ ಡೇವಿಡ್ ಮಿಲ್ಲರ್‌ರವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಸನ್ಮಾನಿಸಿ ಅಭಿನಂದಿಸಿದರು. ಶ್ರೀ ಸೆಲ್ವ ಜಯರಾಮನ್, ಶ್ರೀ ಆರ್. ಮಹೇಶ್ ಮೊದಲಾದವರಿದ್ದಾರೆ. (21 ಸೆಪ್ಟೆಂಬರ್ 2025)



ಮೈಸೂರಿನ ಶ್ರೀ ಸುತ್ತೂರು ಮಠಕ್ಕೆ ವಿಜಯದಶಮಿಯಂದು ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಭೇಟಿ ನೀಡಿದ್ದಾಗ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವದಿಸಿ ಸನ್ಮಾನಿಸಿದರು. ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ ಮೊದಲಾದವರುಗಳಿದ್ದಾರೆ. (2 ಅಕ್ಟೋಬರ್ 2025)

## ಜೆಎಸ್‌ಎಸ್ ಸಂಸ್ಥೆಗಳಲ್ಲಿ ಶ್ರೀ ರಾಜೇಂದ್ರ ಶ್ರೀಗಳವರ ಶತೋತ್ತರ ದಶಮಾನೋತ್ಸವ (110ನೇ ಜಯಂತಿ)

### ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಪೂಜ್ಯ ರಾಜೇಂದ್ರ ಶ್ರೀಗಳು ಸೇವೆ ಮತ್ತು ಮಹಾಕರುಣೆಯ ಪ್ರತೀಕದಂತೆ ಇದ್ದರು ಎಂದು ಶ್ರೀ ಕುಂದೂರು ಮಠಾಧ್ಯಕ್ಷರಾದ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳವರು ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ದಿನಾಂಕ 15.9.2025 ರಂದು ನಡೆದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೇ ಜಯಂತಿ ಕಾರ್ಯಕ್ರಮದಲ್ಲಿ ನುಡಿನಮನ ಸಲ್ಲಿಸಿದ ಅವರು ಮಹಾಕರುಣೆ ಯಾರಲ್ಲಿರುತ್ತದೆಯೋ ಅವರೇ ನಿಜವಾದ ಶರಣರು. ರಾಜೇಂದ್ರ ಶ್ರೀಗಳವರಲ್ಲಿದ್ದ ಕರುಣೆ ಎಂಬ ಮೂಲಗುಣವನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಅಗತ್ಯವಿದೆ. ಸಮಾಜಸೇವೆಗೆ ತಾಳ್ಮೆ ಅತ್ಯಂತ ಅಗತ್ಯ. ಸೇವೆ ಎಂಬ ಪದಕ್ಕೆ ನಿಜಾರ್ಥದಲ್ಲಿ ಗೌರವ ತಂದುಕೊಟ್ಟವರು ಪೂಜ್ಯ ರಾಜೇಂದ್ರ ಶ್ರೀಗಳವರು. ಸಮಾಜಸೇವೆಯನ್ನು ಒಂದು ವ್ರತವಾಗಿ ಅವರು ಪರಿಗಣಿಸಿದ್ದರು. ಸಮಾಜದಲ್ಲಿ ಎಲ್ಲರೂ ಚೆನ್ನಾಗಿರಬೇಕೆಂಬ ಮನೋಧರ್ಮವನ್ನು ಹೊಂದಿದ್ದರು. ಎಲ್ಲರನ್ನೂ ನಗುವಿನಿಂದಲೇ ಗೆಲ್ಲುತ್ತಿದ್ದರು. ಸಂತರಾದವರು ಲಾಭ–ನಷ್ಟಗಳಿಗೆ ಅತೀತರಾಗಿರಬೇಕೆಂಬ ನಿಟ್ಟಿನಲ್ಲಿ ಪೂಜ್ಯ ರಾಜೇಂದ್ರ ಶ್ರೀಗಳು ದೇವರ ಸಮಾನವಾಗಿದ್ದರು ಎಂದರು.

ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣರು ಧರ್ಮವನ್ನು ಜನಕಲ್ಯಾಣಕ್ಕಾಗಿ, ಸಮಾಜದ ಉನ್ನತಿಗಾಗಿ ಬಳಸಿಕೊಂಡರು. ಪೂಜ್ಯ ರಾಜೇಂದ್ರ ಶ್ರೀಗಳು ಧರ್ಮವನ್ನು ಸಮಾಜದ ಉನ್ನತಿಗಾಗಿ ಪ್ರಾಯೋಗಿಕವಾಗಿ ಬಳಸಿಕೊಂಡರು. ಎಲ್ಲರಿಗೂ ಸಂಸ್ಕಾರವನ್ನು ಹೇಳಿಕೊಟ್ಟರು, ಸಮಾಜದ ಬಗೆಗಿನ ಅವರ ಕಳಕಳಿ

ತಾಯಿಯ ತ್ಯಾಗಕ್ಕೆ ಸಮನಾದುದು. ಅವರು ಇಲ್ಲದಿದ್ದರೆ, ಕರ್ನಾಟಕದ ಶೈಕ್ಷಣಿಕ ಮಟ್ಟ ಯಾವ ರೀತಿಯಲ್ಲಿರುತ್ತಿತ್ತು ಎಂಬುದನ್ನು ಊಹಿಸಲೂ ಸಾಧ್ಯವಿಲ್ಲ ಎಂದು ನುಡಿದರು.


ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಪೂಜ್ಯ ರಾಜೇಂದ್ರ ಶ್ರೀಗಳವರ ಕುರಿತು ಮಾತನಾಡುತ್ತಾ, ಬಹುಮುಖ ವ್ಯಕ್ತಿತ್ವವುಳ್ಳ ಪೂಜ್ಯರು ಅಪರೂಪದ ಸಾಧನೆಗಳನ್ನು ಮಾಡಿದವರು. ಶಿಕ್ಷಣ, ಅನ್ನ, ವಸತಿ, ಕಲೆ, ಸಾಹಿತ್ಯ ಮುಂತಾದ ಕ್ಷೇತ್ರಗಳಿಗೆ ಪೂಜ್ಯರು ಪೋಷಕರಾಗಿದ್ದರು. ಸತ್ಯಶುದ್ಧ ಕಾಯಕದ ಮೂಲಕ ಸಮಾಜದ ಬೆಳವಣಿಗೆಗೆ ಕಾರಣೀಭೂತರಾಗಿದ್ದವರು. ಶ್ರೀ ಸುತ್ತೂರು ಮಠ ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠಗಳ ಸೇವೆ ಜಗತ್ತಿನಾದ್ಯಂತ ಪಸರಿಸಲು ಬಹುಮುಖ್ಯ ಕಾಣಿಕೆಯನ್ನು ನೀಡಿದ್ದಾರೆ. ಪೂಜ್ಯ ರಾಜೇಂದ್ರ ಶ್ರೀಗಳು ಮಾನವೀಯ ಗುಣಗಳಿಂದ ಜನರ ಮನಸ್ಸಿನಲ್ಲಿ ಸದಾಕಾಲ ಉಳಿಯುವಂಥವರು ಎಂದು ಹೇಳಿದರು.

ಅರಕಲಗೂಡು ತಾಲ್ಲೂಕು ಕೆಸವತ್ತೂರು ಮಠದ ಪೂಜ್ಯ ಶ್ರೀ ಬಸವರಾಜೇಂದ್ರ ಸ್ವಾಮಿಗಳು, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್ ಹಾಗೂ ಶ್ರೀ ಎಸ್. ಶಿವಕುಮಾರಸ್ವಾಮಿ, ವಿವಿಧ ವಿಭಾಗಗಳ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಶ್ರೀಮತಿ ಎಂ.ವಿ. ಲಲಿತಾ ಮತ್ತು ಶ್ರೀ ಷಣ್ಮುಖ ಅವರುಗಳನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಶ್ರೀಮತಿ ಗೀತಾ ಮತ್ತು ತಂಡದವರು ಹಾಗೂ ಶ್ರೀ ಮಲ್ಲಿಕಾರ್ಜುನಸ್ವಾಮಿಯವರು ಪ್ರಾರ್ಥನೆಯನ್ನು ನಡೆಸಿಕೊಟ್ಟರು. ಸಾಮಾನ್ಯ ಆಡಳಿತ ವಿಭಾಗದ ನಿರ್ದೇಶಕರಾದ ಶ್ರೀ ಶಂಕರಪ್ಪನವರು ಸ್ವಾಗತಿಸಿದರು. ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ಬಿ. ನಿರಂಜನಮೂರ್ತಿಯವರು ವಂದನಾರ್ಪಣೆ ಮಾಡಿದರು. ಶ್ರೀ ಎ.ಎಂ. ಶಿವಪ್ರಕಾಶ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು.

## ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಮಾಲೂರು

ಮಾಲೂರಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವವನ್ನು ದಿನಾಂಕ 9.9.2025ರಂದು ಆಚರಿಸಲಾಯಿತು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ. ಪ್ರವೀಣ್. ಪಿ. ಬಾಗೇವಾಡಿರವರು ಮಾತನಾಡಿ, ಸಮಾಜದ ಸಾವಿರಾರು ಜನರಿಗೆ ಅನ್ನ, ಆಶ್ರಯ ಕೊಟ್ಟು ಕೆಲಸ ಮಾಡುತ್ತಿರುವ ಈ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದು ನನಗೆ ಹೆಮ್ಮೆಯೆನಿಸುತ್ತಿದೆ. ಈ ಶಿಕ್ಷಣ ಸಂಸ್ಥೆಯಲ್ಲಿ 2000ಕ್ಕೂ ಹೆಚ್ಚು ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇಂತಹ ಸಂಸ್ಥೆಗೆ ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರು ಭೇಟಿ ಕೊಟ್ಟಿದ್ದನ್ನು ತಿಳಿದು ಬಹಳ ಖುಷಿಯಾಯಿತು. ಕಲಾಂರವರು ಹೇಳಿದ ಹಾಗೇ ಮಲಗಿ ಕನಸು ಕಾಣುವುದಲ್ಲ, ನಮ್ಮ ಜೀವನವೇ ಒಂದು ಕನಸು ಎಂದು ತಿಳಿದು ನಮ್ಮ ಗುರಿ ಮುಟ್ಟಲು ದೊಡ್ಡ ಕನಸು ಕಾಣಬೇಕು. ಆಗ ಮಾತ್ರ ಉನ್ನತ ಹುದ್ದೆಯನ್ನು ಪಡೆಯಬಹುದು. ಇದು ಡಿಜಿಟಲ್ ಪ್ರಪಂಚವಾಗಿದೆ. ಬಹಳಷ್ಟು ಜನ ಮೊಬೈಲ್, ಕಂಪ್ಯೂಟರ್, ಯೂಟ್ಯೂಬ್‌ಗಳ ಪ್ರಭಾವಕ್ಕೆ ಒಳಗಾಗಿದ್ದಾರೆ. ಇಂದು ಎ.ಐ. ಬಹಳಷ್ಟು ಪ್ರಭಾವ ಬೀರುತ್ತಿದೆ. ಇದರಿಂದ ಬಹಳಷ್ಟು ಕಲಿಯುತ್ತಿದ್ದೇವೆ. ಮಕ್ಕಳು ಅತಿಯಾಗಿ ಮೊಬೈಲ್ ಬಳಕೆ ಮಾಡುವುದನ್ನು ಬಿಟ್ಟು ಪಠ್ಯಪುಸ್ತಕಗಳನ್ನು ಓದಿ ತಮ್ಮ ಗುರಿ ಸಾಧಿಸಿಕೊಳ್ಳಬೇಕು. ಉತ್ತಮ ಸಮಾಜ ನಿರ್ಮಾಣ




ಮಾಡುವಲ್ಲಿ ಶಿಕ್ಷಕರು ತಮ್ಮ ಪಾತ್ರವನ್ನು ಸರಿಯಾಗಿ ನಿರ್ವಹಿಸಬೇಕು. ಸೋಲೋಮನ್‌ರವರು ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರಿಗೆ ಕೃಷ್ಣ ಕೇಶವ್‌ರವರು ಅಂಬೇಡ್ಕರ್‌ರವರಿಗೆ ಗುರುಗಳಾಗಿ ಅವರನ್ನು ಸಮಾಜದ ಮಹಾನ್ ವ್ಯಕ್ತಿಗಳನ್ನಾಗಿ ಮಾಡಿದರು. ಹಾಗೆಯೇ ಶಿಕ್ಷಕರು ವಿದ್ಯಾರ್ಥಿಗಳಿಗೆ ಮೌಲ್ಯಾಧಾರಿತ ಶಿಕ್ಷಣ ನೀಡಿ ಎಂದು ಕರೆ ನೀಡಿ.

ಸಾಹಿತಿಗಳಾದ ಶ್ರೀ ಎಸ್. ಚಂದ್ರಶೇಖರ್ ಉಷಾಲರವರು ನುಡಿನಮನ ಸಲ್ಲಿಸುತ್ತಾ, ಸಹಸ್ರ ವರ್ಷಗಳ ಇತಿಹಾಸ ಹೊಂದಿರುವ ಶ್ರೀಮತ್ಸುತ್ತೂರು ಮಠದ ಜಗದ್ಗುರು ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಸಮಾಜದ ಸಮಸ್ಯೆಗಳ ಮೂಲ ಕಾರಣ ಅವಿದ್ಯೆ ಎಂದು ಅರಿತಿದ್ದರು. ಗ್ರಾಮೀಣ ಭಾಗದ ಜನರನ್ನು ಅಕ್ಷರ ಸಂಸ್ಕೃತಿ ಎಡೆಗೆ ಸೆಳೆದರು. ಜನ ಸಮುದಾಯದ ಭಾಗ್ಯಜ್ಯೋತಿಯಾದರು. ಅನ್ನ, ಅರಿವು, ಆಶ್ರಯ, ಆಧ್ಯಾತ್ಮಿಕ ಸೇವಾಕಾರ್ಯಗಳಿಗೆ ಭದ್ರ ಬುನಾದಿ ಹಾಕಿದರು. ಇವರ ದಿವ್ಯ ಸ್ಮರಣೆ ಸಂಸ್ಮರಿಸಿ ಕೊಳ್ಳುವ ನೆಪದಲ್ಲಿ ಮಾನವೀಯ ಗುಣಗಳನ್ನು ನಮ್ಮೊಳಗೆ ಸ್ವಲ್ಪವಾದರು ಮೈಗೂಡಿಸಿಕೊಳ್ಳೋಣ. ಇವರ ಸ್ಮರಣೆ ನಮ್ಮ ನಡೆ ನುಡಿಗಳಲ್ಲಿ ಪ್ರಕಟವಾಗಬೇಕು. ತನುವಿನಲ್ಲಿ ನಿರ್ಮೋಹ ಎಂಬ ಆದಯ್ಯನವರ ವಚನದಂತೆ ತಮ್ಮ ಜೀವನವೇ ಜೀವಂತ ಸಂದೇಶ ಎಂಬಂತೆ ಬದುಕಿದವರು ಪೂಜ್ಯ ಶ್ರೀಗಳವರು. ಶ್ರೀಗುರುಗಳ ಸ್ಮರಣೆಯಷ್ಟೇ ಸಾಕು ನಮ್ಮ ಹೃದಯ ತುಂಬಿ ಬರುತ್ತದೆ. ಹನ್ನೆರಡನೆಯ ವಯಸ್ಸಿನಲ್ಲಿ ಶ್ರೀಮಠದ ಜವಾಬ್ದಾರಿ ಪಡೆದ ಪೂಜ್ಯಶ್ರೀಗಳವರು ಹಸಿದ ವಿದ್ಯಾರ್ಥಿಯೊಬ್ಬನ ಹಸಿವನ್ನು ನೋಡಲಾರದೆ ವಿದ್ಯಾರ್ಥಿನಿಲಯ ಪ್ರಾರಂಭಿಸುವ ಮೂಲಕ ಜೆಎಸ್‌ಎಸ್ ಸಂಸ್ಥೆಯನ್ನು ಕಟ್ಟಿ ಬೆಳೆಸಿದ ರೀತಿ, ಅದಕ್ಕಾಗಿ ಶ್ರೀಗಳು ಮಾಡಿದ ತ್ಯಾಗ ಶ್ರಮ ಅಪಾರವಾದುದು. “ನಹಿ ಜ್ಞಾನೇನ ಸದೃಶಂ” ಎಂಬಂತೆ ವಿದ್ಯೆಗಿಂತ ಪವಿತ್ರವಾದುದು ಬೇರೊಂದಿಲ್ಲ, ಶಿಕ್ಷಣದಿಂದಲೇ ವ್ಯಕ್ತಿಯ, ಸಮಾಜದ ಏಳ್ಗೆ ಸಾಧ್ಯ ಎಂದರಿತ ಶ್ರೀಗಳು ಸಾಮಾನ್ಯ ಶಿಕ್ಷಣದ ಜೊತೆಜೊತೆಗೆ ತಾಂತ್ರಿಕ, ವೈದ್ಯಕೀಯ ಮುಂತಾದ ಶಿಕ್ಷಣವನ್ನು ಜನತೆಗೆ ಉಣಬಡಿಸಿದರು. ಶಿಕ್ಷಣ, ಸಾಹಿತ್ಯ ಕ್ಷೇತ್ರಗಳ ಜೊತೆಗೆ ಸಂಗೀತಸಭಾ, ಗ್ರಂಥಮಾಲೆಗಳನ್ನೂ ಆರಂಭಿಸಿದರು ಎಂದರು.

ಸಂಯೋಜನಾಧಿಕಾರಿಗಳಾದ ಶ್ರೀ ಎಸ್.ಹೆಚ್. ಮಹೇಶ್ವರಪ್ಪನವರು, ವೃಕ್ಷದ ಫಲ ವೃಕ್ಷಕ್ಕಲ್ಲ, ನದಿಯ ನೀರು ನದಿಗಲ್ಲ ಎಂಬ ಕಬೀರರ ದೋಹೆಯಂತೆ ಲೋಕದ ಹಿತಕ್ಕೆ ಬದುಕಿದವರು ರಾಜೇಂದ್ರಗಳವರು ಎಂದರು. ಬೆಳ್ಳಾವಿ ಶ್ರೀ ಬೆಳ್ಳನಪುರಿ ಸಂಸ್ಥಾನ ಮಠದ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ತಾವು ಬೇಲಿಮಠದಲ್ಲಿ ವಿದ್ಯಾರ್ಥಿಯಾಗಿದ್ದಾಗ ಬೇಲಿ ಮಠದ ಪೂಜ್ಯರಿಗೂ ರಾಜೇಂದ್ರ ಶ್ರೀಗಳಿಗೂ ಇದ್ದ ಅವಿನಾಭಾವ ಸಂಬಂಧವನ್ನು ಕಣ್ಣಾರೆ ಕಂಡವನು ನಾನು. ಪೂಜ್ಯ ಶ್ರೀಗಳವರ ಆಶೀರ್ವಾದಕ್ಕೆ ಪಾತ್ರವಾದವನು ನಾನು. ಮೈಸೂರು ಜಿಲ್ಲೆಯಲ್ಲಿ ಪ್ರಾರಂಭವಾದ ಜೆಎಸ್‌ಎಸ್ ಸಂಸ್ಥೆ ಲಕ್ಷಾಂತರ ಕುಟುಂಬಗಳಿಗೆ ಬದುಕು ಕಟ್ಟಿಕೊಟ್ಟಿದೆ. ಮಳವಳ್ಳಿ, ಕನಕಪುರ ಮತ್ತು ಟಿ.ನರಸೀಪುರ ಭಾಗದ ಜನರ ಪ್ರತಿಯೊಂದು ಮನೆಯಲ್ಲಿ ದೇವರ ಫೋಟೋ ಜೊತೆಯಲ್ಲಿ ಪೂಜ್ಯಶ್ರೀಗಳವರ ಭಾವಚಿತ್ರ ಇಟ್ಟು ಪೂಜೆ ಮಾಡುವುದನ್ನು ಕಣ್ಣಾರೆ ಕಂಡಿದ್ದೇನೆ. ಉತ್ತಮ ಸಮಾಜ ನೀಡಲು ದೂರದೃಷ್ಟಿ ಹೊಂದಿದ್ದ ಶ್ರೀಗಳವರು ತಮ್ಮ ಕಷ್ಟ ಕಾಲದಲ್ಲೂ ಅನ್ನ, ಅಕ್ಷರ, ಆರೋಗ್ಯ, ಆಶ್ರಯ ಮುಂತಾದ ಸೇವೆಗಳನ್ನು ಕೈಗೊಂಡರು, ಈ ದಿನ ಸಂಸ್ಥೆಯು ಬೆಳೆದು ದೇಶ–ವಿದೇಶಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಸ್ತರಿಸಿದೆ. ಗುಣ ಮಟ್ಟದ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ನೀಡುವ ಸಂಸ್ಥೆಯೆಂದರೆ ಅದು ಜೆಎಸ್‌ಎಸ್ ಸಂಸ್ಥೆ ಎಂದರು. ಶ್ರೀ ನಾಗಲಾಪುರ ಸಂಸ್ಥಾನ ಮಠದ ಶ್ರೀ ತೇಜೇಶಲಿಂಗ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಶಿಸ್ತು, ಸಂಯಮ ನೈತಿಕತೆಯನ್ನು ಸಮಾಜಕ್ಕೆ ನೀಡುತ್ತಿದೆ. ದಾಸೋಹದ ದಿನಸಿಗೆ ಹಣವಿಲ್ಲದಿದ್ದ ಸಂದರ್ಭದಲ್ಲಿ ಕೊರಳಿನ ಬಂಗಾರದ ಕರಡಿಗೆಯನ್ನು ಪೂಜ್ಯಶ್ರೀಗಳು ಅಡವಿಟ್ಟು ವಿದ್ಯಾರ್ಥಿಗಳಿಗೆ ಅನ್ನದಾಸೋಹ ಮಾಡಿದ್ದಾರೆ. ಈ ಸಂಸ್ಥೆಯಲ್ಲಿ ಓದಿದ ಪ್ರತಿಯೊಬ್ಬ ವಿದ್ಯಾರ್ಥಿಯು ಉನ್ನತ ಸ್ಥಾನಮಾನ ಗಳಿಸಿದ ಮೇಲೆ ಬಡವರಿಗೆ ಉಪಕಾರವನ್ನು ಮಾಡಬೇಕು. ಮಕ್ಕಳ ಭವಿಷ್ಯವನ್ನು ಕಟ್ಟುವಲ್ಲಿ ಜೊತೆಗೆ ಶಿಸ್ತು, ಸಂಯಮ, ವಿನಯ, ಸಂಸ್ಕಾರಗಳನ್ನು ಬೆಳೆಸುವಲ್ಲಿ ಪೋಷಕರ ಪಾತ್ರವೂ ಗಣನೀಯವಾದುದು ಎಂದರು.

ಪಬ್ಲಿಕ್ ಶಾಲಾ ಮಕ್ಕಳು ಹಾಗೂ ಸಂಗೀತ ಶಿಕ್ಷಕರಾದ ಶ್ರೀಮತಿ ವಿನೋದರವರು ವಚನ ಗಾಯನ ನಡೆಸಿಕೊಟ್ಟರು. ಪಬ್ಲಿಕ್ ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶಿಕ್ಷಕರಾದ ಶ್ರೀಮತಿ ಮೈನಾ ಸ್ವಾಗತಿಸಿದರು. ಶ್ರೀ ವಿಜಯಕುಮಾರ್‌ರವರು ವಂದಿಸಿದರು. ಶ್ರೀಮತಿ ಮಂಜುಳ ಹಾಗೂ ಶ್ರೀಮತಿ ರಾಣಿರವರು ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು

ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಗಳ ವತಿಯಿಂದ ದಿನಾಂಕ 10.9.2025 ರಂದು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೇ ಜಯಂತಿ ಮಹೋತ್ಸವ ಹಾಗೂ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಎನ್.ಕೆ. ಲೋಕನಾಥ್‌ರವರು ಮಾತನಾಡಿ, ಜೆಎಸ್‌ಎಸ್ ಸಂಸ್ಥೆ ಇಂದು ಅಕ್ಷರ ದಾಸೋಹ, ಆರೋಗ್ಯ ದಾಸೋಹ, ಅನ್ನದಾಸೋಹ ಸೇವೆಯನ್ನು ಸಮಾಜಕ್ಕೆ ಕರುಣಿಸಿದೆ. ಪೂಜ್ಯ ರಾಜೇಂದ್ರ ಶ್ರೀಗಳವರ ಮಾತೃ ಹೃದಯದಿಂದಾಗಿ ಹಲವಾರು ದೀನದುರ್ಬಲರು ತಮ್ಮ ಬದುಕನ್ನು ರೂಪಿಸಿಕೊಂಡಿದ್ದಾರೆ. ಪೂಜ್ಯ ಶ್ರೀಗಳವರ ಆದರ್ಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಹಾಗೆಯೇ ಮಹಾನ್ ತತ್ವಜ್ಞಾನಿ ಶ್ರೇಷ್ಠ ಶಿಕ್ಷಣ ತಜ್ಞರಾದ ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರು ತಮ್ಮಲ್ಲಿದ್ದ ಅಪಾರವಾದ ಜ್ಞಾನದಿಂದಾಗಿ ಪ್ರಪಂಚದಲ್ಲೇ ಗೌರವಿತರಾದರು. ವಿದ್ಯಾರ್ಥಿಗಳು ವ್ಯಾಸಂಗದ ಜೊತೆಗೆ, ಸಂಗೀತ, ಕಲೆ, ಕ್ರೀಡೆಗಳಲ್ಲಿ ಕೌಶಲಗಳನ್ನು ವೃದ್ಧಿಸಿಕೊಂಡು




ಬದಲಾಗುತ್ತಿರುವ ಸಮಾಜದಲ್ಲಿ ಮುನ್ನಡೆಯಬೇಕು ಎಂದು ನುಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀ ವಿ.ಎಂ ಪ್ರಭುಸ್ವಾಮಿರವರು, ಶ್ರೀಮಠದ ಸೇವೆಯು ಅನನ್ಯವಾದುದು, ಪೂಜ್ಯ ಶ್ರೀಗಳವರ ಆಶೀರ್ವಾದದಿಂದ ಲಕ್ಷಾಂತರ ವಿದ್ಯಾರ್ಥಿಗಳು ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಈ ದಿನ ಮಠದ ಕೈಂಕರ್ಯವು ರಾಜ್ಯ, ದೇಶ ವ್ಯಾಪ್ತಿಯನ್ನು ದಾಟಿ ವಿದೇಶದಲ್ಲಿ ವಿಸ್ತರಿಸಿರುವುದು ಇದಕ್ಕೆ ಸಾಕ್ಷಿಯಾಗಿದೆ. ಶಿಕ್ಷಕರು ವಿದ್ಯಾರ್ಥಿ ಜೀವನದ ನಿಜವಾದ ನಾಯಕರು. ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರ ಆದರ್ಶ ಜೀವನ ನಮ್ಮೆಲ್ಲರಿಗು ಮಾದರಿಯಾಗಬೇಕು ಎಂದು ತಿಳಿಸಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಸಂಯೋಜನಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕರವರು, ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ನಾಡಿನಲ್ಲಿ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕ್ರಾಂತಿ ಮಾಡಿದ ಮಹಾಪುರುಷರು. ಗ್ರಾಮೀಣ ಜನರ ಬದುಕಿಗೆ ಬೆಳಕಾಗಿ, ದಾಸೋಹದ ಪರಿಕಲ್ಪನೆಯನ್ನು ಆರೋಗ್ಯ, ಶಿಕ್ಷಣ ಕ್ಷೇತ್ರಕ್ಕೆ ವಿಸ್ತರಿಸಿದ ಮಹಾನ್ ಸಂತರು ಎಂದು ನುಡಿದರು.

ಪ್ರಾತಃಕಾಲ ಶ್ರೀಗದ್ದುಗೆಯಲ್ಲಿ ಪೂಜೆ ಕಾರ್ಯ ನೆರವೇರಿಸಿ ರೋಬೋಟಿಕ್ ಆನೆಯಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳವರ ಮೂರ್ತಿಯನ್ನು ಇರಿಸಿ ಶಾಲಾ ಆವರಣದಲ್ಲಿ ವಿವಿಧ ಕಲಾ ತಂಡಗಳೊಂದಿಗೆ ವಿಜೃಂಭಣೆಯಿಂದ ಮೆರವಣಿಗೆ ನೆರವೇರಿಸಲಾಯಿತು. ಕಾರ್ಯಕ್ರಮದಲ್ಲಿ ಆಡಳಿತಾಧಿಕಾರಿಗಳು, ಸಂಯೋಜನಾಧಿಕಾರಿಗಳು ಹಾಗೂ ಸಂಸ್ಥೆಯ ಎಲ್ಲಾ ಸಿಬ್ಬಂದಿ ವರ್ಗದವರು ಶ್ರದ್ಧಾಭಕ್ತಿ, ಉತ್ಸಾಹದಿಂದ ಪಾಲ್ಗೊಂಡಿದ್ದರು.

ತಾಲ್ಲೂಕು ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿದ್ದ ಸಂಸ್ಕೃತ ಪಾಠಶಾಲೆಯ ಮುಖ್ಯಶಿಕ್ಷಕರಾದ ಶ್ರೀ ಎಸ್. ಚಂದ್ರಮೌಳೇಶ್ವರರವರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ವತಿಯಿಂದ ಮುಖ್ಯಸ್ಥರುಗಳಿಗೆ ಹಾಗೂ ನೌಕರರಿಗೆ ಆಯೋಜಿಸಿದ್ದ ಸಾಂಸ್ಕೃತಿಕ ಸ್ಪರ್ಧೆಗಳು ಹಾಗೂ ವಿವಿಧ ಕ್ರೀಡಾಕೂಟಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ಉತ್ತಮ ಸಾಧನೆಗೈದ ಶಾಲಾ ವಿದ್ಯಾರ್ಥಿಗಳಿಗೆ ವಿವಿಧ ದತ್ತಿಗಳ ವತಿಯಿಂದ


ಬಹುಮಾನಗಳನ್ನು ವಿತರಿಸಲಾಯಿತು.

ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಪಿ. ಉದಯಶಂಕರ್ ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶ್ರೀಮಠದ ಶ್ರೀ ಎಸ್. ಶಿವಸ್ವಾಮಿರವರು, ಜೆಎಸ್‌ಎಸ್ ಸಂಸ್ಥೆಗಳ ಮುಖ್ಯಸ್ಥರುಗಳಾದ ಶ್ರೀ ವೀರಭದ್ರಯ್ಯ, ಡಾ. ಜ್ಞಾನೇಶ್, ಡಾ. ಹೆಚ್.ಎಂ. ಮಹೇಶ್, ಶ್ರೀ ಎಂ. ರಾಜಶೇಖರಮೂರ್ತಿ, ಶ್ರೀ ಜಿ. ಶಿವಮಲ್ಲು, ಶ್ರೀ ಮ.ಗು. ಬಸವಣ್ಣ, ಶ್ರೀ ಜಿ.ಎಂ. ಷಡಕ್ಷರಿ, ಶ್ರೀ ಜಿ. ಶಿವಸ್ವಾಮಿ, ಶ್ರೀ ಮಹದೇವಪ್ರಸಾದ್, ಶ್ರೀಮತಿ ಸುಶೀಲ ಮೊದಲಾದವರು ಉಪಸ್ಥಿತರಿದ್ದರು.

ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀ ಜಿ. ಎನ್. ಮಂಜುನಾಥ್ ಸ್ವಾಗತಿಸಿದರು. ಶ್ರೀ ಎಂ. ರಾಜಶೇಖರಮೂರ್ತಿರವರು ಪ್ರತಿಜ್ಞಾವಿಧಿ ಬೋಧಿಸಿದರು. ಶ್ರೀಮತಿ ಕೆ.ಎಸ್. ಮಮತ ವಂದಿಸಿದರು. ಶ್ರೀಮತಿ ಡಿ.ಎಸ್. ಅಂಬಿಕ ನಿರೂಪಿಸಿದರು.

□

## ಜೆಎಸ್‌ಎಸ್ ಪಬ್ಲಿಕ್ ಶಾಲೆ, ಜೆ.ಪಿ. ನಗರ, ಮೈಸೂರು




ಮೈಸೂರಿನ ಜೆ.ಪಿ.ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಶ್ರೀಮತ್ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ 23ನೇ ಜಗದ್ಗುರುಗಳಾದ ಶ್ರೀ ಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವವನ್ನು ದಿನಾಂಕ 11.9.2025ರಂದು ಶಾಲೆಯ ಆವರಣದಲ್ಲಿ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿದ್ದ ಡಾ. ನಂದೀಶ್ ಹಂಚೆರವರು ಮಾತನಾಡಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಸ್ಥಾಪನೆ ಸಾಧನೆಯ ಬಗ್ಗೆ ವಿವರಿಸುತ್ತಾ ಜಾತಿ ಮತಗಳನ್ನು ಮೀರಿದಂತಹ ವ್ಯಕ್ತಿತ್ವ ನಮ್ಮ ಶ್ರೀಗಳದು. ಕಷ್ಟಪಡುತ್ತಿದ್ದ ವಿದ್ಯಾರ್ಥಿಗಳನ್ನು ಕಂಡು ಅವರಿಗೆ ಅನ್ನ ಆಶ್ರಯವಿಟ್ಟು ಪೋಷಿಸಿದ ಮಾತೃಹೃದಯಿಗಳು ಎಂದರು.

8 ಮತ್ತು 9ನೇ ತರಗತಿಯ ವಿದ್ಯಾರ್ಥಿಗಳು ಶ್ರೀಗಳ ಕುರಿತಾದ ನೃತ್ಯ ರೂಪಕವನ್ನು ಪ್ರದರ್ಶಿಸಿದರು. 5 ಮತ್ತು

8ನೇ ತರಗತಿಯ ವಿದ್ಯಾರ್ಥಿಗಳು ಸಮೂಹಗಾಯನದ ಮೂಲಕ ಶ್ರೀಗಳಿಗೆ ನುಡಿನಮನ ಸಲ್ಲಿಸಿದರು. ಕನ್ನಡ ಶಿಕ್ಷಕರಾದ ಶ್ರೀ ಅಶೋಕ್‌ರವರು ಶ್ರೀಗಳ ಸಾಧನೆ ಹಾಗೂ ಅವರ ನಿಸ್ವಾರ್ಥ ಸೇವೆಯನ್ನು ಪರಿಚಯಿಸಿದರು. 8ನೇ ತರಗತಿಯ ವಿದ್ಯಾರ್ಥಿನಿಯರು ಪ್ರಾರ್ಥನೆ ಸಲ್ಲಿಸಿದರು. ಶಿಕ್ಷಕರಾದ ಶ್ರೀಮತಿ ಲತಾ ಸುಬ್ಬಣ್ಣನವರು ಸ್ವಾಗತಿಸಿದರು. ಕು. ವಿಂದ್ಯಾರಾಜ್ ವಂದನಾರ್ಪಣೆ ಮಾಡಿದರು. ಕು. ಚೈತನ್ಯ ಮಹೇಶ್ ಹಾಗೂ ಕು. ಎಂ. ಶ್ರಾವ್ಯ ಕಾರ್ಯಕ್ರಮ ನಿರೂಪಿಸಿದರು.

□

## ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆ, ಮೇಟಗಳ್ಳಿ




ಮೈಸೂರಿನ ಮೇಟಗಳ್ಳಿಯ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ದಿನಾಂಕ 11.9.2025ರಂದು ಶ್ರೀಮತ್ಸುತ್ತೂರು ವೀರಸಿಂಹಾಸನ ಮಠದ ಶ್ರೀಮನ್ಮಹಾರಾಜ 'ರಾಜಗುರುತಿಲಕ' ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವ ಹಾಗೂ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ಗಣ್ಯರು ಜ್ಯೋತಿ ಬೆಳಗಿಸಿ ಪೂಜ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶಿರಮಳ್ಳಿ ಶ್ರೀ ಇಮ್ಮಡಿ ಮುರಘ ಸ್ವಾಮಿಗಳು ಪರಮಪೂಜ್ಯ ರಾಜೇಂದ್ರ ಶ್ರೀಗಳವರು ತ್ರಿವಿಧ ದಾಸೋಹಿಗಳಾಗಿದ್ದು, ಅನ್ನ, ಅಕ್ಷರ, ವಸತಿಯನ್ನು ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಕಲ್ಪಿಸಿ ಅವರ ಬದುಕಿಗೆ ಆಶಾಕಿರಣವಾಗಿದ್ದರು. ನಿಸ್ವಾರ್ಥ ಮನೋಭಾವನೆ ಉಳ್ಳವರಾಗಿದ್ದು, ಸಂಸ್ಥೆಯನ್ನು ಬೃಹತ್ತಾಗಿ ಕಟ್ಟಿ ಬೆಳೆಸಿದರು ಎಂದು ತಿಳಿಸಿದರು.

ಶರಣು ವಿಶ್ವವಚನ ಫೌಂಡೇಶನ್ನಿನ ಶ್ರೀ ವಚನ ಕುಮಾರಸ್ವಾಮಿ ಪೂಜ್ಯರಿಗೆ ನುಡಿನಮನ ಸಲ್ಲಿಸುತ್ತಾ 'ಸುತ್ತೂರು ಮಠದ ಆದಿ ಜಗದ್ಗುರುಗಳಾದ ಶ್ರೀ ಶಿವರಾತ್ರೀಶ್ವರರು ಚೋಳರು ಹಾಗೂ ಗಂಗರ ನಡುವಿನ ಯುದ್ಧವನ್ನು ನಿಲ್ಲಿಸಿದ ಪ್ರಸಂಗವನ್ನು ವಿವರಿಸಿದರು. ಶ್ರೀಮಠದ 23ನೇ ಜಗದ್ಗುರುಗಳಾಗಿ ಶ್ರೀ ರಾಜೇಂದ್ರ ಮಹಾಸ್ವಾಮಿಗಳವರು ಅಧಿಕಾರವನ್ನು ವಹಿಸಿಕೊಂಡು ಧಾರ್ಮಿಕ, ಶೈಕ್ಷಣಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಕೇಂದ್ರಗಳನ್ನು ಸ್ಥಾಪಿಸುವುದರ ಮೂಲಕ ಸಮಾಜಕ್ಕೆ ಅತ್ಯುನ್ನತ

ಕೊಡುಗೆಯನ್ನು ನೀಡಿದ್ದಾರೆ. ಶ್ರೇಷ್ಠ ಸಾಹಿತಿಗಳಾದ ರಾಷ್ಟ್ರಕವಿ ಕುವೆಂಪು, ಸಿದ್ದಯ್ಯ ಪುರಾಣಿಕ, ಜಿ.ಎಸ್. ಶಿವರುದ್ರಪ್ಪನವರು ರಾಜೇಂದ್ರ ಶ್ರೀಗಳವರ ಬಗ್ಗೆ ಅಭಿಮಾನ ವ್ಯಕ್ತಪಡಿಸಿದ್ದಾರೆ ಎಂದರು. ಶ್ರೀಮತಿ ರೂಪ ಕುಮಾರಸ್ವಾಮಿಯವರು ಮಾತನಾಡಿ ಎಲ್ಲರ ಚಿತ್ತ ಸುತ್ತೂರಿನತ್ತ ಮಾಡಿದ ಕೀರ್ತಿ ರಾಜೇಂದ್ರ ಶ್ರೀಗಳವರಿಗೆ ಸಲ್ಲುತ್ತದೆ ಎಂದರು. ಇದೇ ಸಂದರ್ಭದಲ್ಲಿ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ 14 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ನಂತರ 2024–25ನೇ ಸಾಲಿನಲ್ಲಿ ವಿಷಯವಾರು ಶೇ. 100 ರಷ್ಟು ಫಲಿತಾಂಶ ನೀಡಿದ ಶಿಕ್ಷಕರನ್ನು ಸನ್ಮಾನಿಸಲಾಯಿತು. ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಸಂಗೀತ ಶಿಕ್ಷಕರಾದ ಶ್ರೀಮತಿ ಸುಮಂಗಲ ಜಂಗಮಶೆಟ್ಟಿ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎನ್.ಪಿ. ಸತೀಶ್‌ರವರು ಸ್ವಾಗತಿಸಿದರು. ಪ್ರಾಥಮಿಕ ಶಾಲಾ ಶಿಕ್ಷಕರಾದ ಶ್ರೀ ಸುನೇಶ್ ಕುಮಾರ್ ನಿರೂಪಿಸಿದರು. ಶ್ರೀಮತಿ ಎಂ.ವಿ. ಅಮೃತವಾಣಿ ವಂದಿಸಿದರು.

## ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಹಾಗೂ ಅಕ್ಷರ ದಾಸೋಹ ಕೇಂದ್ರ, ಯಳಂದೂರು



ಯಳಂದೂರಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಹಾಗೂ ಅಕ್ಷರ ದಾಸೋಹ ಕೇಂದ್ರದ ವತಿಯಿಂದ ದಿನಾಂಕ 4.9.2025ರಂದು ರಾಜಗುರುತಿಲಕ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವ (110ನೇ ಜಯಂತಿ) ವನ್ನು ಆಚರಿಸಲಾಯಿತು. ಬೆಳಗ್ಗೆ 9 ಗಂಟೆಗೆ ಪೂಜ್ಯ ರಾಜೇಂದ್ರ ಶ್ರೀಗಳವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡುವ ಮೂಲಕ ವೈದ್ಯರಾದ ಶ್ರೀ ಶ್ರೀಕಂಠ ಮೂರ್ತಿಯವರು ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆಯು 110 ಕಳಶಗಳನ್ನು ಹಿಡಿದ ವಿದ್ಯಾರ್ಥಿನಿಯರೊಂದಿಗೆ ಮಂಗಳವಾದ್ಯ, ಬ್ಯಾಂಡ್ ಸೆಟ್, ವೀರಗಾಸೆ ತಂಡಗಳೊಂದಿಗೆ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಆವರಣದಿಂದ ಹೊರಟು ಬಳೆಮಂಟಪದ ಬಳೇಪೇಟೆ, ಯಳಂದೂರು ಬಸ್ ನಿಲ್ದಾಣದ ಮೂಲಕ ಕಾಲೇಜನ್ನು ತಲುಪಿತು. ಅನಂತರ ವೇದಿಕೆ ಕಾರ್ಯಕ್ರಮ ಆರಂಭವಾಯಿತು.

ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನ ಕನ್ನಡ ಅಧ್ಯಾಪಕರಾದ ಶ್ರೀ ಎಚ್.ಎಸ್. ಸಿದ್ದಮಲ್ಲಿಕಾರ್ಜುನ ಸ್ವಾಮಿಯವರು ನುಡಿ ನಮನವನ್ನು ಸಲ್ಲಿಸುತ್ತಾ

ರಾಜೇಂದ್ರ ಶ್ರೀಗಳವರ ಬಗ್ಗೆ ತಿಳಿಸುವ ಪ್ರಯತ್ನ ಸಮುದ್ರದ ಜಲವನ್ನು ಕೊಡದಲ್ಲಿ ತುಂಬಿ ತಂದು ಸುರಿದಂತೆ, ಕಾಳಿದಾಸ ಹೇಳುವಂತೆ ಒಂದು ನಾಡ ದೋಣಿಯನ್ನು ಹಿಡಿದು ಸಮುದ್ರವನ್ನು ದಾಟುವ ಹೆಡ್ಡನಂತೆ ಆಗಿರುತ್ತದೆ. ಶ್ರೀಮಠದ ಧಾರ್ಮಿಕ ಪ್ರಕ್ರಿಯೆಗಳ ಗಡಿಯನ್ನು ಸಮಾಜಮುಖಿಯಾಗಿ ವಿಸ್ತರಿಸಿ, ಮಠದ ಪರಂಪರೆಗೆ ವಿಶಿಷ್ಟ ಭಾಷ್ಯವನ್ನು ಬರೆದ ಕೀರ್ತಿ ರಾಜೇಂದ್ರ ಶ್ರೀಗಳವರಿಗೆ ಸಲ್ಲುತ್ತದೆ. ಅಂತಹ ಮಹಾತ್ಮರನ್ನು ನೆನೆಯುವುದು ಪುಣ್ಯದ ಕೆಲಸ ಮತ್ತು ನಮ್ಮ ಜನ್ಮದ ಸಾರ್ಥಕ್ಯ. ಶಾಂತಿ, ಸಮನ್ವಯತೆ, ತ್ಯಾಗ ಸೇವೆಗಳ ಮೂಲಕ ಬದುಕನ್ನು ಸಮಾಜದ ಉದ್ಧಾರಕ್ಕಾಗಿ, ಮನುಕುಲದ ಒಳಿತಿಗಾಗಿ ಸಮರ್ಪಿಸಿಕೊಳ್ಳುತ್ತಾ ಬರುತ್ತಿರುವ ಸುತ್ತೂರು ಶ್ರೀಮಠ ಗುರು ಪರಂಪರೆಯನ್ನು ನಾವೆಲ್ಲರೂ ಸ್ಮರಿಸಿಕೊಳ್ಳಬೇಕು. ಈ ಗುರು ಪರಂಪರೆಯ ಕಳಶದಂತೆ ರಾಜೇಂದ್ರ ಶ್ರೀಗಳು. ಯಾವುದೇ ಕಾರಣಕ್ಕೂ ರಾಜೇಂದ್ರ ಶ್ರೀಗಳವರನ್ನು ಯಾರಿಗೂ ಹೋಲಿಕೆ ಮಾಡಲು ಸಾಧ್ಯವಿಲ್ಲ. ಪರಮಪೂಜ್ಯರು ಸಮರಸದ ನೆಲೆಯಲ್ಲಿ ಒಳ ಹೊರ ಬದುಕನ್ನು ಪಾರದರ್ಶಕವಾಗಿಸಿಕೊಂಡವರು ಎಂದು ಹೇಳಿದರು.

ಕೆಸ್ತೂರಿನ ಶ್ರೀ ಪಟ್ಟದ ಮಠದ ಅಧ್ಯಕ್ಷರಾದ ಶ್ರೀ ತೋಂಟದಾರ್ಯ ಸ್ವಾಮಿಗಳವರು ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭ ಸಂದೇಶವನ್ನು ನೀಡುತ್ತಾ ಪೂಜ್ಯ ರಾಜೇಂದ್ರ ಶ್ರೀಗಳವರು ನಾಡಿಗೆ ಮತ್ತು ದೇಶಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸುವ ಮೂಲಕ ಕಾಯಕವೇ ಕೈಲಾಸ ಎಂಬ ತತ್ವವನ್ನು ಮನದಲ್ಲಿ ಅಳವಡಿಸಿಕೊಂಡವರು. ವಿದ್ಯಾಸಂಸ್ಥೆಯನ್ನು ನಿರ್ಮಾಣ ಮಾಡಿ ಉತ್ತಮವಾದ ಗುಣಮಟ್ಟದ ಶಿಕ್ಷಣವನ್ನು ನೀಡುವ ಮೂಲಕ ಸಮಾಜಕ್ಕೆ ನೂರಾರು ಕೊಡುಗೆಗಳನ್ನು ನೀಡಿದ್ದಾರೆ. ಅವರ ಪುಣ್ಯ ಸ್ಮರಣೆಯನ್ನು ಅತ್ಯಂತ ಭಕ್ತಿಯಿಂದ, ಪ್ರೀತಿಯಿಂದ ಮಾಡಿದರೆ ನಾವು ಉತ್ತಮವಾದ ಬದುಕನ್ನು ಕಾಣಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಅಭಿವೃದ್ಧಿ ವಿಭಾಗದ ನಿರ್ದೇಶಕರಾದ ಶ್ರೀ ರೇವಣ್ಣಸ್ವಾಮಿಯವರು ಮಾತನಾಡುತ್ತಾ, ಪೂಜ್ಯ ರಾಜೇಂದ್ರ ಶ್ರೀಗಳವರು ವಾರಕ್ಕೊಮ್ಮೆ ವಸತಿ ನಿಲಯಗಳಿಗೆ ಭೇಟಿ ನೀಡಿದಾಗ ಪ್ರತಿಯೊಬ್ಬ ವಿದ್ಯಾರ್ಥಿಯ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದರು. ದಯಾಮಯಿ ಮತ್ತು ಮಾತೃಹೃದಯಿ ಗುಣವುಳ್ಳವರು. ನಾನು ಚಾಮರಾಜನಗರದಲ್ಲಿ ವಿದ್ಯಾರ್ಥಿಯಾಗಿದ್ದಾಗ ರಾಜೇಂದ್ರ ಶ್ರೀಗಳವರನ್ನು ಹತ್ತಿರದಿಂದ ನೋಡಿದ ಸೌಭಾಗ್ಯ ನನ್ನದಾಗಿದೆ. ಒಮ್ಮೆ ಜ್ವರದಿಂದ ಪ್ರಸಾದ ಸ್ವೀಕರಿಸದೆ ಕುಳಿತಿದ್ದಾಗ ರಾಜೇಂದ್ರ ಶ್ರೀಗಳವರು ವಿಚಾರಿಸಿ ಮುದ್ದೆಯ ಒಂದು ತುತ್ತನ್ನು ತಿನ್ನಿಸಿದರು. ಅನಂತರ ನಾನು ಊಟ ಮಾಡಿದೆ. ಅವರ ಸ್ಪರ್ಶದಿಂದ ಜ್ವರವೇ ಇಲ್ಲವಾಯಿತು. ನಾನು ಎಷ್ಟು ವರ್ಣಿಸಿದರೂ ಅವರ ವ್ಯಕ್ತಿತ್ವವನ್ನು ಕಟ್ಟಿಕೊಡುವುದು ಕಷ್ಟ. ರಾಜೇಂದ್ರ ಶ್ರೀಗಳವರನ್ನು ವರ್ಷಕ್ಕೊಮ್ಮೆ ಸ್ಮರಿಸುವುದಲ್ಲ, ಪ್ರತಿದಿನವೂ ಪೂಜೆ ಮಾಡುವಾಗ ಸ್ಮರಿಸಬೇಕೆಂದು ತಿಳಿಸಿದರು.

ಗೌಡಹಳ್ಳಿಯ ಶ್ರೀ ವಿರಕ್ತ ಮಠದ ಅಧ್ಯಕ್ಷರಾದ ಶ್ರೀ ಮರಿತೋಂಟದಾರ್ಯ ಸ್ವಾಮಿಗಳವರು ಸಮ್ಮುಖವನ್ನು ಅನುಗ್ರಹಿಸಿ ಮಾತನಾಡುತ್ತಾ, ಸುತ್ತೂರು ಮಠವು ಸಾವಿರ ವರ್ಷಗಳ ಭವ್ಯ ಇತಿಹಾಸವನ್ನು ಒಳಗೊಂಡಿದೆ. ಮಠದ ಪರಂಪರೆಯಲ್ಲಿ ಬಂದ ರಾಜೇಂದ್ರ ಶ್ರೀಗಳವರು ಬಹುದೊಡ್ಡ ಸೇವೆಯನ್ನು ಸಲ್ಲಿಸಿದ್ದಾರೆ. ಅಂತಹ ಮಹಾತ್ಮರ ಸ್ಮರಣೆಯನ್ನು ಮಾಡಿಕೊಳ್ಳುವ ಮೂಲಕ ನಮ್ಮ ಬದುಕನ್ನು ಹಸನು ಮಾಡಿಕೊಳ್ಳಬೇಕು. ರಾಜೇಂದ್ರ ಶ್ರೀಗಳವರು ಶಿಕ್ಷಣ ಸಂಸ್ಥೆಗಳನ್ನು, ಪ್ರಸಾದ ನಿಲಯಗಳನ್ನು ಪ್ರಾರಂಭಿಸುವ ಮೂಲಕ ಮನೆ ಮನಗಳ ದೀಪವಾಗಿದ್ದಾರೆ. ಅವರ ಸಮಾಜ ಸೇವಾ ಕಾರ್ಯಗಳನ್ನು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಸಂಸ್ಥೆಯಲ್ಲಿ ಓದುತ್ತಿರುವ ನೀವೆಲ್ಲರೂ ಚೆನ್ನಾಗಿ ವಿದ್ಯಾಭ್ಯಾಸವನ್ನು ಪಡೆದು ಹೆತ್ತವರಿಗೆ ಗೌರವ ತರಬೇಕೆಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಮಾಜ ಸೇವಕರು, ತಾಲ್ಲೂಕು ಬೋರ್ಡ್‌ನ ಮಾಜಿ ಅಧ್ಯಕ್ಷರಾದ ಶ್ರೀ ಪಿ. ವೀರಭದ್ರಪ್ಪನವರು ಮಾತನಾಡುತ್ತಾ, ತಾಲ್ಲೂಕು ಬೋರ್ಡಿನ ಅಧ್ಯಕ್ಷನಾಗಿದ್ದಾಗ ಬಂದ ಗೌರವ ಹಣದಿಂದ ಬಡ ಮಕ್ಕಳ ಪ್ರೋತ್ಸಾಹಕ್ಕೆ ದತ್ತಿಯನ್ನು ಆರಂಭಿಸಿದ್ದೇನೆ. ಹಾಗೆ ನೀವು ಕೂಡ ಬಡ ಮಕ್ಕಳಿಗಾಗಿ ದತ್ತಿಯನ್ನು ಪ್ರಾರಂಭಿಸಬೇಕು. ರಾಜೇಂದ್ರ ಶ್ರೀಗಳು ಈ ಭಾಗಕ್ಕೆ ಭೇಟಿ ಕೊಟ್ಟಾಗ ನಮ್ಮ ಮನೆಗೆ ಬರುತ್ತಿದ್ದರು. ನಿಮ್ಮ ಕಾರ್ಯಗಳನ್ನೆಲ್ಲ ಮಕ್ಕಳಿಗೆ ವಹಿಸಿ ನಮ್ಮ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿ ಎಂದು ಹೇಳುತ್ತಿದ್ದರು. ಇಂದು ಸಂಸ್ಥೆಯು ಪ್ರೌಢಶಾಲೆ, ಕಾಲೇಜು ಹಾಗೂ ಅಕ್ಷರ ದಾಸೋಹವನ್ನು ಪ್ರಾರಂಭಿಸುವ ಮೂಲಕ ಸಮಾಜ ಸೇವೆಯನ್ನು ಮಾಡುತ್ತಿದೆ. ಇದಕ್ಕೆಲ್ಲ ರಾಜೇಂದ್ರ ಶ್ರೀಗಳವರ ಮುಂದಾಲೋಚನೆ ಕಾರಣವಾಗಿದೆಯೆಂದರು.

ಕಾರಾಪುರದ ಶ್ರೀ ವಿರಕ್ತ ಮಠದ ಶ್ರೀ ಬಸವರಾಜ ಸ್ವಾಮಿಗಳು ಒಡೆಯರು ಅವರು ಆಶೀರ್ವಚನವನ್ನು ದಯಪಾಲಿಸುತ್ತಾ, ಹತ್ತಾರು ಜನಗಳ ಶಕ್ತಿ ಒಂದು ಎತ್ತಿಗೆ, ಹತ್ತಾರು ಎತ್ತುಗಳ ಶಕ್ತಿ ಒಂದು ಆನೆಗೆ, ನೂರಾರು ಆನೆಗಳ ಶಕ್ತಿ ಒಂದು ಜೆಸಿಬಿಗೆ, ಅಂತ ಸಾವಿರಾರು ಜೆಸಿಬಿಗಳ ಶಕ್ತಿ ಜೆಎಸ್‌ಎಸ್ ಸಂಸ್ಥೆಗೆ ಇದೆಯೆಂಬುದು ನನ್ನ ಭಾವನೆ. ರಾಜೇಂದ್ರ ಶ್ರೀಗಳವರ ಬದುಕು ಮತ್ತು ಸಾಧನೆಯನ್ನು ತಿಳಿಸುವುದು ಕರಿಯನ್ನು ಕನ್ನಡಿಯಲ್ಲಿ ಹಿಡಿದಂತೆ. ರಾಜೇಂದ್ರ ಶ್ರೀಗಳವರು ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಶಿಕ್ಷಣ ಕ್ಷೇತ್ರಕ್ಕೆ ಅಮೂಲ್ಯ, ಅಮೋಘ, ಅನರ್ಘ್ಯವಾದ ಕೊಡುಗೆಯನ್ನು ನೀಡಿದ್ದಾರೆ. ರಾಜೇಂದ್ರ ಶ್ರೀಗಳವರ ಕನಸುಗಳನ್ನು ದೇಶಿಕೇಂದ್ರ ಶ್ರೀಗಳು ನನಸು ಮಾಡಿದ್ದಾರೆ. ಶ್ರೀಗಳವರು ದೂರ ದೃಷ್ಟಿಯುಳ್ಳವರು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ನಡೆಯೋಣವೆಂದರು.

ಕು. ಕುಮುದವಲ್ಲಿ ಮತ್ತು ತಂಡದವರು ಪ್ರಾರ್ಥಿಸಿದರು. ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಶ್ರೀಮತಿ ವಿ. ಚಂದ್ರಕಲಾರವರು ಸ್ವಾಗತಿಸಿದರು. ಪ್ರಾಂಶುಪಾಲರಾದ ಶ್ರೀ ಎಚ್.ಎಸ್. ಚಂದ್ರಶೇಖರರವರು ವಂದಿಸಿದರು. ಶಿಕ್ಷಕರಾದ ಶ್ರೀ ಎಲ್. ವಿಶ್ವನಾಥ್ ರವರು ನಿರೂಪಿಸಿದರು. ಕಾರ್ಯಕ್ರಮದಲ್ಲಿ ಅಧ್ಯಾಪಕ-ಅಧ್ಯಾಪಕೇತರರು, ವಿದ್ಯಾರ್ಥಿನಿಯರು, ಶ್ರೀಮಠದ ಭಕ್ತರು ಹಾಗೂ ಸಾರ್ವಜನಿಕರು ಭಾಗವಹಿಸಿ ಶ್ರೀಗಳವರ ಕೃಪೆಗೆ ಪಾತ್ರರಾದರು.

ಜಯಂತಿ ಮಹೋತ್ಸವದ ಅಂಗವಾಗಿ ಪ್ರೌಢಶಾಲೆ ಮತ್ತು ಪದವಿಪೂರ್ವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ದತ್ತಿ ಬಹುಮಾನಗಳನ್ನು ನೀಡಲಾಯಿತು. ಜೆಎಸ್‌ಎಸ್ ಪ್ರೌಢಶಾಲೆಯ ಹಿರಿಯ ವಿದ್ಯಾರ್ಥಿನಿಯರಾದ ಮೈಸೂರಿನ ಕನ್ನಡ ಭಾಷಾ ಸಂಸ್ಥಾನದಲ್ಲಿ ಹಿರಿಯ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಉಷಾರಾಣಿ ಅವರನ್ನು ಮತ್ತು ಹುಬ್ಬಳ್ಳಿಯ ಹೆಗ್ಗೇರಿಯಲ್ಲಿ ಆಯುರ್ವೇದ ವೈದ್ಯರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ತೇಜಸ್ವಿನಿ ಯವರನ್ನು ಸನ್ಮಾನಿಸಲಾಯಿತು.

## ಜೆಎಸ್‌ಎಸ್ ಕಾಲೇಜು, ಊಟಿ ರಸ್ತೆ, ಮೈಸೂರು

"ಪರಮಪೂಜ್ಯ ರಾಜೇಂದ್ರ ಶ್ರೀಗಳವರನ್ನು ನೆನೆಯುವುದೇ ಪುಣ್ಯದ ಕೆಲಸ. ಅವರು ಮಾಡಿದ ಸಾಧನೆಯಿಂದ ಎಂದೆಂದಿಗೂ ನಮ್ಮ ಜೊತೆ ಇದ್ದಾರೆ. ಬಸವಣ್ಣನವರು ಭಕ್ತಿ ಕಲ್ಯಾಣವನ್ನು ಕಟ್ಟಿದಂತೆ, ಪೂಜ್ಯ ರಾಜೇಂದ್ರ ಶ್ರೀಗಳವರು ಭಕ್ತಿ ಕಲ್ಯಾಣಮಯವಾದ ಸಮಾಜವನ್ನು ಕಟ್ಟಿದರು. ಭಕ್ತಿಯಿಂದ ಸಾಧಿಸಲಾಗದೆ ಇರುವುದು ಯಾವುದೂ ಇಲ್ಲ ಎಂಬ ಅಚಲವಾದ ನಂಬಿಕೆಯಿಂದ ಲೋಕ ಕಲ್ಯಾಣದ ಕಾರ್ಯದಲ್ಲಿ ಪೂಜ್ಯರು ನಿರತರಾಗಿದ್ದರು. ಅವರ ಪ್ರತಿಯೊಂದು ಸಾಧನೆಯ ಹೆಜ್ಜೆಯಲ್ಲಿ ಭಕ್ತಿ ಎಂಬುದೇ ಪ್ರಧಾನವಾಗಿದೆ" ಎಂದು ಗೌರವ ಪ್ರಾಧ್ಯಾಪಕರಾದ ಪ್ರೊ. ಹೆಚ್.ಬಿ. ದೇವಣ್ಣನವರು ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ,



ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ದಿನಾಂಕ 12.9.2025ರಂದು ನಡೆದ ಸುತ್ತೂರು ಶ್ರೀಮಠದ 23ನೆಯ ಪೀಠಾಧಿಪತಿಗಳಾದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೇ ಜಯಂತಿ ಕಾರ್ಯಕ್ರಮದಲ್ಲಿ ನುಡಿನಮನ ಸಲ್ಲಿಸಿ ಅವರು ಮಾತನಾಡಿದರು. "ಪೂಜ್ಯರು ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ ಗಮನಾರ್ಹವಾದುದು. ಜನರ ಶೈಕ್ಷಣಿಕ ಅಗತ್ಯವನ್ನು ಪೂರೈಸಲು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದರು. ಸರಳತೆ, ಮಹಾಮಾನವತಾವಾದಿ ಗುಣಗಳನ್ನು ಸದಾ ಬಿಡದೆ ಪಾಲಿಸುತ್ತಾ ಬಂದ ಪೂಜ್ಯರು, ಲೌಕಿಕ ಮತ್ತು ಅಧ್ಯಾತ್ಮ ಬದುಕಿನಲ್ಲಿ ಆದರ್ಶವಿರಬೇಕು ಪ್ರದರ್ಶನವಿರಬಾರದು ಎಂದು ನಡೆದು ತೋರಿಸಿದವರು. ಘನತೆ ಎಂಬುದು ಸ್ಥಾನದಿಂದ ಬರುವುದಿಲ್ಲ, ಅದು ನಾವು ಮಾಡುವ ಕಾರ್ಯದಿಂದ ಬರುವಂತಹುದು ಎಂಬ ಅವರ ತತ್ವ ನಮಗೆಲ್ಲರಿಗೂ ಆದರ್ಶವಾಗಬೇಕು. ಮನುಷ್ಯ ಜ್ಞಾನವಂತನಾಗಬೇಕು, ಅರಿವು ಮೂಡಿಸಿಕೊಳ್ಳಬೇಕು ಎಂದು ಪೂಜ್ಯರು ಸದಾ ಬಯಸುತ್ತಿದ್ದರು. ಕಾಯಕ, ಜವಾಬ್ದಾರಿಗಳನ್ನು ನಾವು ಸರಿಯಾಗಿ ನಿರ್ವಹಿಸುವುದೇ ಪೂಜ್ಯರಿಗೆ ನಾವು ಅರ್ಪಿಸುವ ಭಕ್ತಿಯ ಕೃತಜ್ಞತೆಯಾಗಿದೆ" ಎಂದು ಹೇಳಿದರು.

ಬೆಟ್ಟದಪುರದ ಸಲಿಲಾಖ್ಯ ಮಠದ ಶ್ರೀ ಚೆನ್ನಬಸವ ದೇಶಿಕೇಂದ್ರ ಸ್ವಾಮಿಗಳು ದಿವ್ಯ ಸಮ್ಮುಖವನ್ನು ವಹಿಸಿ ಆಶೀರ್ವಚನ ನೀಡುತ್ತಾ, ಮಹಾತ್ಮರನ್ನು ನೆನೆಯುವುದೇ ಘನವಾದ ಮುಕ್ತಿಯಾಗಿದೆ. ಅದರಂತೆ ಪೂಜ್ಯ ಡಾ. ರಾಜೇಂದ್ರ ಶ್ರೀಗಳವರನ್ನು ನೆನೆಯುವುದು, ಸ್ಮರಿಸುವುದು ಮುಕ್ತಿಯ ಮಾರ್ಗವಾಗಿದೆ. ಪೂಜ್ಯ ರಾಜೇಂದ್ರ ಶ್ರೀಗಳವರಲ್ಲಿ ಸಹನೆ, ಔದಾರ್ಯ ಮತ್ತು ತ್ಯಾಗ ಎಂಬ ಮೂರು ಮುಖ್ಯ ಗುಣಗಳು ಘನೀಕರಿಸಿದ್ದವು. ಈ ಗುಣಗಳಿಂದ ಅವರ ಆಧ್ಯಾತ್ಮಿಕ ಮತ್ತು ಸಾಮಾಜಿಕ ಸೇವೆ ನಡೆಯುತ್ತಿತ್ತು. ಇಂದು ನಾವೆಲ್ಲರೂ ಈ ಗುಣಗಳನ್ನು ಬದುಕಿನುದ್ದಕ್ಕೂ ಅನುಸರಿಸಿಕೊಂಡು ಬದುಕಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಪ್ರಾಸ್ತಾವಿಕ ಮಾತುಗಳನ್ನಾಡಿ, "ಮಹಾಚೇತನದಂತೆ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು. ಪೂಜ್ಯರು ಹೊತ್ತಿಸಿದ ಅರಿವಿನ ಬೆಳಕಿನಲ್ಲಿ ಹಲವು ಕುಟುಂಬಗಳು ಸುಂದರವಾದ

ಬದುಕನ್ನು ಕಂಡುಕೊಂಡಿವೆ. ಆ ಮೂಲಕ ಶ್ರೀಗಳವರು ಜನಮಾನಸದಲ್ಲಿ ಸದಾ ಹಸಿರಾಗಿದ್ದಾರೆ. ರಾಜೇಂದ್ರ ಶ್ರೀಗಳವರು ಅಕ್ಷರ, ಅನ್ನ, ಆರೋಗ್ಯ ಮತ್ತು ಸಾಂಸ್ಕೃತಿಕ ಲೋಕಕ್ಕೆ ನೀಡಿದ ಕೊಡುಗೆ ಅನನ್ಯವಾದುದು. ಅಕ್ಷರ ದಾಸೋಹಕ್ಕೆ ತಮ್ಮ ಇಡೀ ಬದುಕನ್ನೇ ಮುಡುಪಾಗಿಟ್ಟರು. ಶ್ರೀಗಳು ಬಡಜನರ ಬಗ್ಗೆ ಅಪಾರ ಕಳಕಳಿಯನ್ನು ಹೊಂದಿದ್ದರು. ಶಿಕ್ಷಣದಿಂದ ನಾಡಿನ ಪ್ರಗತಿ ಸಾಧ್ಯವೆಂದು ನಂಬಿದ್ದರು. ನಗರ ವಲಯದಲ್ಲಿ ಕೇಂದ್ರೀಕೃತವಾಗಿದ್ದ ಶಿಕ್ಷಣ ವ್ಯವಸ್ಥೆಯನ್ನು ಗ್ರಾಮೀಣ ವಲಯಕ್ಕೂ ವಿಸ್ತರಿಸಿದರು. ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ನಗರ ವಲಯಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ತೆರೆದರು. ಈ ಎಲ್ಲಾ ಬೆಳವಣಿಗೆಗಳ ಹಿಂದೆ ಪೂಜ್ಯರ ಅಂತಃಕರಣ ಮತ್ತು ದೂರದೃಷ್ಟಿಯಿದೆ. ಸಮಾಜದ ಹಿತಕ್ಕಾಗಿ ಸದಾ ತುಡಿದ ಮಾತೃ ಹೃದಯವಿದೆ. ಈ ಸುಸಂದರ್ಭದಲ್ಲಿ ಸೇರಿರುವ ನಾವು ಪೂಜ್ಯರ ಆದರ್ಶಗಳನ್ನು ನೆನೆದು ನಡೆಯಬೇಕಿದೆ. ಉತ್ತಮ ಶಿಕ್ಷಣವನ್ನು ನಾವು ಇಲ್ಲಿ ಪಡೆಯುತ್ತಿದ್ದೇವೆ ಎಂದರೆ ಅದರ ಹಿಂದೆ ಪೂಜ್ಯರ ಆಶೀರ್ವಾದವಿದೆ. ಉತ್ತಮ ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ನಾಡಿನ ಪ್ರಗತಿಗಾಗಿ ಶ್ರಮಿಸಬೇಕು. ರಾಜೇಂದ್ರ ಶ್ರೀಗಳು ನೆಟ್ಟ ಮರದ ಫಲ ನಾಡಿನ ಗಡಿ ದಾಟಿ ವಿಸ್ತರಿಸಿದೆ. ರಾಷ್ಟ್ರ ಮತ್ತು ಅಂತಾರಾಷ್ಟ್ರ ಮಟ್ಟದಲ್ಲಿ ಸಂಸ್ಥೆಯನ್ನು ವಿಸ್ತರಿಸುವ ಮೂಲಕ ತಮ್ಮ ಧಾರ್ಮಿಕ ಮತ್ತು ಸಾಮಾಜಿಕ ಸೇವೆಯನ್ನು ವಿಸ್ತರಿಸಿದರು. ರಾಜೇಂದ್ರ ಶ್ರೀಗಳು ಸ್ಥಾಪಿಸಿದ ಎಲ್ಲಾ ಸಂಸ್ಥೆಗಳ ಜೊತೆಗೆ ಇನ್ನೂ ಹೆಚ್ಚಿನ ಸಂಸ್ಥೆಗಳು ಸ್ಥಾಪನೆಗೊಂಡು ಇಂದಿನ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳವರು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ವಿವಿಧ ದತ್ತಿ ಬಹುಮಾನಗಳನ್ನು ವಿತರಿಸಲಾಯಿತು. ಪೂಜ್ಯ ಡಾ. ರಾಜೇಂದ್ರ ಶ್ರೀಗಳವರ ಜಯಂತಿ ಸ್ಮರಣಾರ್ಥ ನಡೆಸಿದ ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಕ್ರೀಡಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನವನ್ನು ವಿತರಿಸಲಾಯಿತು. ಪರೀಕ್ಷಾ ನಿಯಂತ್ರಣಾಧಿಕಾರಿಗಳಾದ ಡಾ. ಬಿ. ಪ್ರಭುಸ್ವಾಮಿ ಅವರು ಉಪಸ್ಥಿತರಿದ್ದರು. ಪ್ರಾಂಶುಪಾಲರಾದ ಡಾ. ಎಂ. ಪ್ರಭು ಸ್ವಾಗತಿಸಿದರು. ಕು. ಕ್ಷೀರಾ ಶಾನುಭೋಗ್ ಮತ್ತು ಕು. ಅದಿತಿ ಹೆಗ್ಡೆ ಪ್ರಾರ್ಥಿಸಿದರು. ಡಾ. ಎನ್. ರಾಜೇಂದ್ರ ಪ್ರಸಾದ್ ನಿರೂಪಿಸಿದರು. ಶ್ರೀ ಎಸ್. ನಂಜುಂಡಸ್ವಾಮಿ ವಂದಿಸಿದರು.

## ಜೆಎಸ್‌ಎಸ್ ಬಾಲಕಿಯರ ಪದವಿಪೂರ್ವ ಕಾಲೇಜು, ಬೋಗಾದಿ

ಮೈಸೂರಿನ ಬೋಗಾದಿಯಲ್ಲಿರುವ ಜೆಎಸ್‌ಎಸ್ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ದಿನಾಂಕ 13.9.2025 ರಂದು ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೇ ಜಯಂತಿ ಮಹೋತ್ಸವವನ್ನು ಆಚರಿಸಲಾಯಿತು. ಕಾರ್ಯಕ್ರಮದ ಪ್ರಾರಂಭದಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳು ಪ್ರಾರ್ಥನೆ ಗೀತೆಯನ್ನು ಹಾಡಿದರು. ನಂತರ ಶ್ರೀಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪ್ರಾಂಶುಪಾಲರು, ಸಿಬ್ಬಂದಿ ವರ್ಗದವರು ಮತ್ತು ಎಲ್ಲಾ ವಿದ್ಯಾರ್ಥಿಗಳು ಸೇರಿ ಪುಷ್ಪಾರ್ಚನೆ ಮಾಡಿ, ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಕು. ಸ್ಫೂರ್ತಿರವರು ಡಾ. ರಾಜೇಂದ್ರ ಶ್ರೀಗಳ ಜೀವನ, ಸುತ್ತೂರು ಗುರುಪರಂಪರೆ ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠ ಬೆಳೆದು ಬಂದ ದಾರಿಯನ್ನು ವಿವರಿಸಿದರು. ಪ್ರಾಂಶುಪಾಲರಾದ ಶ್ರೀ ಸಿ.ಜೆ. ಗಣೇಶ್‌ರವರು ಅಧ್ಯಕ್ಷೀಯ ನುಡಿಗಳನ್ನಾಡುತ್ತಾ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಸಂಸ್ಥೆಯನ್ನು ಆರಂಭಿಸಲು ಶ್ರಮಪಟ್ಟಿದಾರೆ. ಚಿಕ್ಕ ಸಂಸ್ಥೆಯಿಂದ ಈಗ ದೇಶವಿದೇಶದಲ್ಲಿ ಸಂಸ್ಥೆಯು ದೊಡ್ಡಮಟ್ಟಿಗೆ ಬೆಳೆದಿದೆ. ಶ್ರೀಗಳು ಮಾತೃಹೃದಯಿಗಳವರು, ಅವರು ನಮ್ಮಂತಹ ಎಷ್ಟೋ ಜನರಿಗೆ ಕೆಲಸ ನೀಡಿದ್ದಾರೆ ಮತ್ತು ಶಿಕ್ಷಣ ಪಡೆಯಲು ಬಂದ ಎಲ್ಲಾ ವಿದ್ಯಾರ್ಥಿಗಳಿಗೂ ಯಾವುದೇ ಭೇದ ಭಾವವಿಲ್ಲದೆ ಸಮನಾಗಿ ಸಂಸ್ಥೆಯಲ್ಲಿ ಶಿಕ್ಷಣ, ಊಟ,

ವಸತಿಯನ್ನು ನೀಡುತ್ತಾ ಬರುತ್ತಿದ್ದಾರೆ. ಇಂತಹ ಸಂಸ್ಥೆಯಲ್ಲಿ ನಮಗೆ ಕೆಲಸ ಮಾಡಲು ಮತ್ತು ವಿದ್ಯಾರ್ಥಿಗಳಾದ ನೀವು ಶಿಕ್ಷಣ ಪಡೆಯಲು ಅವಕಾಶ ದೊರಕಿದ್ದು ಪುಣ್ಯವಾಗಿದೆ. ನೀವು ಒಳ್ಳೆಯ ಅಂಕಗಳನ್ನು ಪಡೆದು ನಿಮ್ಮ ಪೋಷಕರಿಗೆ ಹಾಗೂ ಸಂಸ್ಥೆಗೆ ಒಳ್ಳೆಯ ಹೆಸರನ್ನು ತರಬೇಕೆಂದು ಹೇಳಿದರು. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳು ನಡೆಸಿಕೊಟ್ಟರು. □

## ಜೆಎಸ್‌ಎಸ್ ಪದವಿಪೂರ್ವ ಕಾಲೇಜು, ಜಯನಗರ, ಬೆಂಗಳೂರು



ಬೆಂಗಳೂರಿನ ಜಯನಗರದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಮುಚ್ಚಯದಲ್ಲಿ ದಿನಾಂಕ 11.9.2025 ರಂದು ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೇ ಜಯಂತಿ ಮಹೋತ್ಸವವನ್ನು ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿ ನುಡಿನಮನ ಸಲ್ಲಿಸಿ ಮಾತನಾಡಿದ ಬೆಂಗಳೂರಿನ ಸಿರಿ ಕಲರ್ ಲ್ಯಾಬ್‌ನ ಉದ್ಯಮಿಗಳು ಮತ್ತು ಸಂಸ್ಥೆಯ ಹಿರಿಯ ವಿದ್ಯಾರ್ಥಿನಿಯಾದ ಶ್ರೀಮತಿ ಶೈಲಜಾ ಪ್ರದೀಪ್‌ರವರು, ಲಕ್ಷಾಂತರ ಜನರ ಜ್ಞಾನದಾಹ ನೀಗಿಸಿದ ಪೂಜ್ಯರು ಭವಿಯಲ್ಲೂ ಅಭವನನ್ನು ಕಂಡವರು. ಪೂಜ್ಯರು ಈ ಜಗತ್ತಿಗೆ ಪುಣ್ಯದ ಫಲದಿಂದ ಬಂದವರು. ಲೋಕದ ಕಲ್ಯಾಣದ ಜೊತೆಗೆ ಮುಕ್ತಿಯನ್ನು ಸಾಧಿಸಿಕೊಂಡು ಅಂತೆಯೆ ಸಾರ್ಥಕ್ಯಭಾವದಿಂದ ಈ ಜಗತ್ತಿನಿಂದ ನಿರ್ಗಮಿಸಿದರು. ಪ್ರಸಾದ ನಿಲಯಗಳ ಮೂಲಕ ಅನ್ನ ದಾಸೋಹವನ್ನು, ಶೈಕ್ಷಣಿಕ ಸಂಸ್ಥೆಗಳ ಮೂಲಕ ಜ್ಞಾನ ದಾಸೋಹವನ್ನು, ವೈದ್ಯಕೀಯ ಸಂಸ್ಥೆಗಳ ಮೂಲಕ ಆರೋಗ್ಯ ದಾಸೋಹವನ್ನು ನೀಡಿದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಮೂಲಕ ಶರಣ ಮಹಾಮನೆಯನ್ನು ಕಟ್ಟಿದರು. ಧಾರ್ಮಿಕ ಹಾಗೂ ಆಧ್ಯಾತ್ಮಿಕ ಸಂಸ್ಥೆಗಳ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಆಧಾರ ಸ್ಥಂಭವಾದರು. ಅವರ ಆಶೀರ್ವಾದದ ಫಲದಿಂದ ಜೆಎಸ್‌ಎಸ್ ಸಂಸ್ಥೆಗಳು ಚಾಮರಾಜನಗರದಿಂದ ಅಮೇರಿಕದವರೆಗೆ ವಿಸ್ತರಿಸಿವೆ. ಪ್ರಸ್ತುತ ಪರಮ ಪೂಜ್ಯ ಜಗದ್ಗುರುಗಳಾದ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಬಹಳ ಯಶಸ್ವಿಯಾಗಿ ಸಂಸ್ಥೆಗಳನ್ನು ಮತ್ತಷ್ಟು ವಿಸ್ತರಿಸಿ ಸಮಾಜದ ಸುಧಾರಣೆಗೆ ಕಾರಣರಾಗಿದ್ದಾರೆ. ಇಂತಹ ಸಂಸ್ಥೆಯಲ್ಲಿ ಓದುವ ಭಾಗ್ಯ

ನನ್ನದಾಗಿತ್ತು. ಪೂಜ್ಯರ ಆಶೀರ್ವಾದವು ನಿಮಗೂ ದೊರೆತು ಭವಿಷ್ಯದ ಉತ್ತಮ ಪ್ರಜೆಗಳಾಗಿ ಮತ್ತು ತಂದೆ ತಾಯಿಗಳಿಗೆ ಯೋಗ್ಯ ಮಕ್ಕಳಾಗಿ ಉನ್ನತ ಸ್ಥಾನವನ್ನು ಪಡೆದು ಸಂಸ್ಥೆಗೆ ಕೀರ್ತಿ ತರಬೇಕೆಂದು ಶುಭ ಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಬೆಂಗಳೂರಿನ ಬಸವನಗುಡಿ ವಿಭಾಗದ ರೋಟರಿ ಸಂಸ್ಥೆಯ ಕಾರ್ಯದರ್ಶಿಗಳು ಮತ್ತು ವಿಶ್ರಾಂತ ಇಸ್ರೋ ವಿಜ್ಞಾನಿಗಳಾದ ಶ್ರೀ ರಾಜಶೇಖರ್‌ಕೃಷ್ಣನ್‌ರವರು, ಪರಮಪೂಜ್ಯ ಜಗದ್ಗುರು ಡಾ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಲಕ್ಷಾಂತರ ವಿದ್ಯಾರ್ಥಿಗಳ ಬದುಕಿಗೆ ಆಸರೆಯಾಗಿ ಅನೇಕ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದರು. ಇಂತಹ ಸಂಸ್ಥೆಯಲ್ಲಿ ಓದಿದ ವಿದ್ಯಾರ್ಥಿಗಳು ಇಂದು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧ ವ್ಯಕ್ತಿಗಳಾಗಿ ದೇಶದ ಕೀರ್ತಿ ಪತಾಕೆಯನ್ನು ಹಾರಿಸಿದ್ದಾರೆ. ಉತ್ತಮ ನಾಗರಿಕರಾಗಿ ಸನ್ನಡತೆಯನ್ನು ರೂಪಿಸಿಕೊಳ್ಳಲು ಅನುಕೂಲವಾಗುವಂತೆ ಎಲ್ಲಾ ರೀತಿಯ ವ್ಯಕ್ತಿತ್ವದ ಬೆಳವಣಿಗೆಗೆ ಪೂರಕವಾಗಿ ಸಂಸ್ಥೆಗಳನ್ನು ರೂಪಿಸಿದ್ದಾರೆ. ಪ್ರಸ್ತುತ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಆಶೀರ್ವಾದದಲ್ಲಿ ಸಂಸ್ಥೆಯು ಮುಂದುವರಿಯುತ್ತಿದೆ. ಇದನ್ನು ಸದುಪಯೋಗ ಪಡಿಸಿಕೊಂಡು ನೀವು ಸಹ ಸಂಸ್ಥೆಗೆ ಕೀರ್ತಿ ತರುವುದರ ಜೊತೆಗೆ ತಂದೆ ತಾಯಿಗಳ ಕನಸನ್ನು ಈಡೇರಿಸಬೇಕೆಂದು ಶುಭ ಹಾರೈಸಿದರು.

ಈ ಶುಭ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ದತ್ತಿ ಬಹುಮಾನಗಳನ್ನು ವಿತರಿಸಲಾಯಿತು. ಕು. ಹರ್ಷಿಕ ವಚನಾಧಾರಿತ ನೃತ್ಯ ಪ್ರದರ್ಶಿಸಿದರು. ಚಿ. ದಿಶಾಂತ್ ಪೂಜ್ಯ ರಾಜೇಂದ್ರ ಶ್ರೀಗಳಂತೆಯೇ ಕಾಷಾಯ ವಸ್ತ್ರ ಧರಿಸಿ ಸಭಿಕರಲ್ಲಿ ಭಕ್ತಿ ಭಾವ ಮೂಡಿಸಿದರು.

ಕು. ತಾಯಮ್ಮ ಮತ್ತು ತಂಡದವರು ಪ್ರಾರ್ಥಿಸಿದರು. ಪ್ರಾಂಶುಪಾಲರಾದ ಶ್ರೀ ಬಿ.ಆರ್. ಪ್ರಸನ್ನಕುಮಾರ್ ಸ್ವಾಗತಿಸಿದರು.

ಜನಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ಡಿ.ಎಂ. ಶಶಿಕಲಾ ಮತ್ತು ಕಾರ್ಯಕ್ರಮಾಧಿಕಾರಿ ಶ್ರೀ ಅಶೋಕ್ ಮುಖ್ಯ ಅತಿಥಿಗಳನ್ನು ಪರಿಚಯಿಸಿದರು. ಶ್ರೀ ಎನ್.ಎಸ್. ಲಿಂಗಪ್ಪ ರವರು ವಂದಿಸಿದರು. ಶ್ರೀಮತಿ ಆರ್.ವಿ. ಆರತಿದೇಶಪಾಂಡೆ ನಿರೂಪಣೆ ಮಾಡಿದರು. ಎಲ್ಲಾ ವಿಭಾಗದ ಮುಖ್ಯಸ್ಥರುಗಳು, ಕಾಯಕ ಬಂಧುಗಳು, ಪೋಷಕರು ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಜೆಎಸ್‌ಎಸ್ ಪ್ರೌಢಶಾಲೆ, ತೆರಕಣಾಂಬಿ

ತೆರಕಣಾಂಬಿಯ ಜೆಎಸ್‌ಎಸ್ ಪ್ರೌಢಶಾಲೆ, ಸಂಸ್ಕೃತ ಪಾಠಶಾಲೆ ಹಾಗೂ ಅನಾಥಾಲಯಗಳ ಸಂಯುಕ್ತಾಶ್ರಯದಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೇ ಜಯಂತಿ ಮಹೋತ್ಸವವನ್ನು ದಿನಾಂಕ 10.9.2025ರಂದು ಆಚರಿಸಲಾಯಿತು. ಬೆಳಗ್ಗೆ ಶ್ರೀಗಳವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರ ಮೂಲಕ ಮೆರವಣಿಗೆಗೆ ಚಾಲನೆ ನೀಡಲಾಯಿತು. ತೆರಕಣಾಂಬಿಯ ಪ್ರಮುಖ ಬೀದಿಗಳಲ್ಲಿ ಶ್ರೀಗಳವರ ಭಾವಚಿತ್ರ ಮೆರವಣಿಗೆಯನ್ನು ಪೂರ್ಣಕುಂಭದೊಂದಿಗೆ ನಡೆಸಲಾಯಿತು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾರ್ವಜನಿಕರು ಪೂಜೆ ಸಲ್ಲಿಸಿ, ಶ್ರೀಗಳವರ ಕೃಪೆಗೆ ಪಾತ್ರರಾದರು.

ನಿವೃತ್ತ ಶಿಕ್ಷಕರಾದ ಶ್ರೀ ಬಿ. ಗುರುಸ್ವಾಮಿಯವರು ರಾಜೇಂದ್ರ ಶ್ರೀಗಳವರ ಜನ್ಮ ವೃತ್ತಾಂತ ಮತ್ತು ಬಾಲ್ಯ ಜೀವನ ಕುರಿತು ಸಾಕಷ್ಟು ವಿಚಾರಗಳನ್ನು ತಿಳಿಸಿದರು. ಮಾತೃ ಹೃದಯಿಗಳಾದ ರಾಜೇಂದ್ರ ಶ್ರೀಗಳವರು ಬಾಲ್ಯದಲ್ಲಿಯೇ ಪಟ್ಟಾಭಿಷೇಕರಾಗಿ ಸಮಾಜ ಕಟ್ಟುವ ಮತ್ತು ತಿದ್ದುವ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಗ್ರಾಮೀಣ ಜನರ ಜೀವನ ತುಂಬಾ ಕಷ್ಟಕರವಾಗಿತ್ತು. ಶಿಕ್ಷಣ, ಊಟ–ವಸತಿ, ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರು. ಅಂತಹ ಸಂದರ್ಭದಲ್ಲಿ ಶ್ರೀಗಳವರು




ಜನರ ನೋವಿಗೆ ಸ್ಪಂದಿಸಿ ಅನ್ನ, ಅರಿವು, ಆರೋಗ್ಯಕ್ಕೆ ಆದ್ಯತೆ ಕೊಟ್ಟು ತ್ರಿವಿಧ ದಾಸೋಹಿಗಳು ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಪೂರ್ವ ಪ್ರಾಥಮಿಕ ಶಿಕ್ಷಣದಿಂದ ವಿಶ್ವವಿದ್ಯಾಲಯದವರೆಗೆ ಶಿಕ್ಷಣ ಪಡೆಯಲು ದೇಶ–ವಿದೇಶಗಳಲ್ಲಿ ಶಾಲಾ–ಕಾಲೇಜುಗಳು, ತಾಂತ್ರಿಕ ಶಿಕ್ಷಣ ಸಂಸ್ಥೆಗಳು, ವಿದ್ಯಾರ್ಥಿನಿಲಯಗಳು, ಅನಾಥಾಲಯಗಳು, ವೃದ್ಧಾಶ್ರಮಗಳು, ಆರೋಗ್ಯ ಕೇಂದ್ರಗಳು, ಆಸ್ಪತ್ರೆಗಳನ್ನು ತೆರೆದು ಲಕ್ಷಾಂತರ ಜನರ ಬದುಕಿಗೆ ದಾರಿದೀಪವಾಗಿದ್ದಾರೆ. ಸಂಸ್ಥೆಯಲ್ಲಿ ಇಂದು ದುಡಿಯುತ್ತಿರುವ ಸಾವಿರಾರು ಕುಟುಂಬಗಳು ಶ್ರೀಗಳವರನ್ನು ಸ್ಮರಿಸಿಕೊಳ್ಳುವುದರ ಜೊತೆಗೆ ಶ್ರೀಗಳ ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು. ಮಹಾತ್ಮರ ಋಣ ತೀರಿಸಲು ಚೆನ್ನಾಗಿ ಓದಬೇಕು, ಅವರು ತೋರಿದ ದಾರಿಯಲ್ಲಿ ನಡೆಯಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಶ್ರೀ ಪಿ. ಮಹದೇವಪ್ಪರವರು, ರಾಜೇಂದ್ರ ಶ್ರೀಗಳವರು ನಮ್ಮ ದೇಶದ ಜೊತೆಗೆ ವಿದೇಶದಲ್ಲೂ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಶಿಕ್ಷಣ, ಆರೋಗ್ಯ, ದಾಸೋಹಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಬಣ್ಣಿಸಿದರು. ಈಗ ಸಾಕಷ್ಟು ಶಾಲಾ ಕಾಲೇಜುಗಳು, ಹಾಸ್ಟೆಲ್‌ಗಳಿವೆ. ಮಕ್ಕಳು ಈ ಸವಲತ್ತುಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು.


ಶ್ರೀ ಗುರುಮಲ್ಲೇಶ್ವರ ಸರ್ವಿಸ್ ಸ್ಟೇಷನ್ ಮಾಲೀಕರಾದ ಶ್ರೀ ಯು. ಎಸ್. ರೇಣುಕಪ್ರಸಾದ್‌ರವರು ಮಾತನಾಡುತ್ತಾ, ರಾಜೇಂದ್ರ ಶ್ರೀಗಳವರು ಬಡ ವಿದ್ಯಾರ್ಥಿಗಳಿಗೆ ಅನ್ನ ದಾಸೋಹ ಮತ್ತು ಅಕ್ಷರ ದಾಸೋಹ ನೀಡಿ ಸಮಾಜದ ಒಳಿತಿಗಾಗಿ ಸಾಕಷ್ಟು ಶ್ರಮಿಸಿದ್ದಾರೆ ಎಂದು ಬಣ್ಣಿಸಿದರು.

ಶ್ರೀ ಬಸಪ್ಪದೇವರುರವರು ಮಾತನಾಡಿ, ರಾಜೇಂದ್ರ ಶ್ರೀಗಳವರು ಶಿಕ್ಷಣ, ಆರೋಗ್ಯ ದಾಸೋಹಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ರಾಜೇಂದ್ರ ಶ್ರೀಗಳವರ ಆಶೀರ್ವಾದದಿಂದ ಮೈಸೂರಿನ ಜಯಚಾಮರಾಜೇಂದ್ರ ಒಡೆಯರ್‌ರವರನ್ನು ನೋಡುವ ಭಾಗ್ಯ ದೊರೆಯಿತೆಂದು ಸ್ಮರಿಸಿದರು.

ಕಬ್ಬಹಳ್ಳಿ ಶ್ರೀ ಗುರುಸಿದ್ಧ ಸ್ವಾಮಿಗಳು, ರಾಜೇಂದ್ರ ಶ್ರೀಗಳವರು ತಮ್ಮ 8ನೇ ವಯಸ್ಸಿನಲ್ಲಿ ಪೀಠಾಧಿಪತಿಗಳಾಗಿ ಶಿಕ್ಷಣ, ದಾಸೋಹ, ಸಮಾಜಸೇವೆಗೆ ತಮ್ಮ ಜೀವನವನ್ನೇ ಸವೆಸಿದ್ದಾರೆ. ಇವರ ಬಗ್ಗೆ ಎಷ್ಟು ಹೇಳಿದರೂ ಸಾಲದು. ಕಷ್ಟದ ಸಮಯದಲ್ಲೂ ಶ್ರೀಗಳವರು 1954 ರಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಸ್ಥಾಪಿಸಿ ವಿದ್ಯಾರ್ಥಿಗಳಿಗೆ, ಅನ್ನ, ವಿದ್ಯೆ, ವಸತಿ ನೀಡಿದ್ದಾರೆ. ದೇಶ–ವಿದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ವಿಶ್ವವಿಖ್ಯಾತರಾಗಿದ್ದಾರೆ. ಮೈಸೂರು ಮಹಾರಾಜರಿಂದ 'ರಾಜಗುರು ತಿಲಕ' ಎಂಬ ಬಿರುದು ಪಡೆದು ಸಮಾಜದ ಒಳಿತಿಗಾಗಿ ತಮ್ಮ

ಜೀವನವನ್ನೇ ಮುಡುಪಾಗಿಟ್ಟರು. ವಿದ್ಯಾರ್ಥಿಗಳು ಓದುವುದರ ಜೊತೆಗೆ ನೈತಿಕ ಮೌಲ್ಯಗಳನ್ನು ಬೆಳೆಸಿಕೊಂಡು ರಾಜೇಂದ್ರ ಶ್ರೀಗಳವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯಬೇಕು. ರಾಜೇಂದ್ರ ಶ್ರೀಗಳವರ ಆದರ್ಶಗಳನ್ನು ಸಮಾಜದ ಎಲ್ಲರಿಗೂ ತಲುಪಿಸಬೇಕೆಂದು ತಿಳಿಸಿದರು. 2024–25ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಕು. ಭವಾನಿಶ್ರೀ ಮತ್ತು ಕು. ದೀಪಿಕಾರವರನ್ನು ಸನ್ಮಾನಿಸಿ, ನಗದು ಬಹುಮಾನ ವಿತರಿಸಲಾಯಿತು. ಜಿಲ್ಲಾ ಹಂತಕ್ಕೆ ಆಯ್ಕೆಯಾದ ಕ್ರೀಡಾ ಸ್ಪರ್ಧಿಗಳಿಗೆ ಪ್ರಶಸ್ತಿ ಮತ್ತು ಪದಕಗಳನ್ನು ವಿತರಿಸಲಾಯಿತು. 8ನೇ ತರಗತಿಯ ಜ್ಯೋತಿ ಮತ್ತು ತಂಡದವರು ಪ್ರಾರ್ಥನೆ ಮಾಡಿದರು. ಮುಖ್ಯ ಶಿಕ್ಷಕರಾದ ಶ್ರೀಮತಿ ಕಮಲಾರವರು ಸ್ವಾಗತಿಸಿದರು. ಶ್ರೀ ಪುಟ್ಟಸ್ವಾಮಿರವರು ವಂದಿಸಿದರು. ಶ್ರೀಮತಿ ಅನ್ನಪೂರ್ಣರವರು ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಪ್ರೌಢಶಾಲೆ, ಹಾಡ್ಯ



ಹಾಡ್ಯದಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ದಿನಾಂಕ 11.9.2025 ರಂದು ಪರಮಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಜೀಯವರ 110ನೇ ಜಯಂತಿ ಮಹೋತ್ಸವವನ್ನು ಹಾಡ್ಯ ಗ್ರಾಮದ ಶ್ರೀ ಈಶಾನೇಶ್ವರ ಮಠದ ಶ್ರೀ ಬಸವರಾಜಸ್ವಾಮಿಜೀಯವರ ಸಮ್ಮುಖದಲ್ಲಿ ಆಚರಿಸಲಾಯಿತು. ಶ್ರೀ ಬಸವರಾಜಸ್ವಾಮಿಜೀಯವರು ರಾಜೇಂದ್ರ ಶ್ರೀಗಳ ಜೀವನಚರಿತ್ರೆ ಹಾಗೂ ಸ್ವಾಮಿಜೀಯವರೊಂದಿಗೆ ಕಳೆದ ಕ್ಷಣಗಳನ್ನು ಸ್ಮರಿಸುತ್ತಾ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿದ್ದ ಶ್ರೀ ನಗರ್ಲೆ ಶಿವಕುಮಾರ್‌ರವರು ಮಾತನಾಡುತ್ತಾ ಸ್ವಾಮಿಜೀಯವರ ಜನಸೇವೆ, ಸಾಮಾಜಿಕ ಕಳಕಳಿ, ವಿದ್ಯಾದಾನ, ಅನ್ನದಾನ ಘನವಾದುದು ಎಂದರು.

ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎಸ್.ಎಸ್. ಶಿವಕುಮಾರ್ ಮಾತಾನಾಡುತ್ತಾ, ಸ್ವಾಮಿಜೀಯವರು ಶಿಕ್ಷಣಕ್ಕೆ ಭದ್ರ ಬುನಾದಿ ಹಾಕಿದವರು. ಶ್ರೀಗಳ ಆದರ್ಶ, ತ್ಯಾಗಮಯ ಜೀವನ, ವಿದ್ಯಾರ್ಥಿಗಳ ಬಗ್ಗೆ ಇದ್ದ ಚಿಂತನೆ ಅಪಾರವಾದುದು ವಿದ್ಯಾರ್ಥಿಗಳು ಸ್ವಾಮಿಜೀಯವರು ಹಾಕಿಕೊಟ್ಟ ದಾರಿಯಲ್ಲಿ ನಡೆದು ಸಮಾಜದ ಉತ್ತಮ ವ್ಯಕ್ತಿಗಳಾಗುವಂತೆ ತಿಳಿಸಿದರು.

ಕನ್ನಡ ಶಿಕ್ಷಕರಾದ ಶ್ರೀ ಎಂ.ಸಿ. ಶಿವಕುಮಾರ್‌ರವರು ಸ್ವಾಗತಿಸಿದರು. ವಿದ್ಯಾರ್ಥಿನಿ ಕು. ಪೂರ್ವಿಕ ಪ್ರಾರ್ಥನೆ ಮಾಡಿದರು. ಆಂಗ್ಲಭಾಷಾ ಶಿಕ್ಷಕರಾದ ಶ್ರೀ ಮಂಜುನಾಥ್‌ರವರು ವಂದಿಸಿದರು. ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಬಿ.ಎಮ್. ಜಗದೀಶ್ ಕಾರ್ಯಕ್ರಮವನ್ನು ನಿರೂಪಿಸಿದರು. ಶಾಲೆಯ ಎಲ್ಲಾ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಜೆಎಸ್‌ಎಸ್ ಪ್ರೌಢಶಾಲೆ, ಮಹದೇವ ನಗರ, ನಂಜನಗೂಡು ತಾಲ್ಲೂಕು

ನಂಜನಗೂಡು ತಾಲ್ಲೂಕಿನ ಮಹದೇವನಗರದ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ದಿನಾಂಕ 9.9.2025ರಂದು ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೇ ಜಯಂತಿಯನ್ನು ಆಚರಿಸಲಾಯಿತು.

ಸಮಾರಂಭವನ್ನು ಉದ್ಘಾಟಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಮಹೇಶ್‌ರವರು ಮಾತನಾಡುತ್ತಾ, ನಾನು ಜೆಎಸ್‌ಎಸ್ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿರುವ ಹಿರಿಯ ವಿದ್ಯಾರ್ಥಿ ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ರಾಜೇಂದ್ರ ಶ್ರೀಗಳಂತಹ ಮಹಾಪುರುಷರ ಹಾಗೂ ಸಾಧು ಸಂತರ ಜಯಂತಿಯಲ್ಲಿ ನಾನು ಭಾಗಿಯಾಗಿರುವುದು ನನ್ನ ಸುದೈವವಾಗಿದೆ. ಈ ಶಾಲೆಯು ತುಂಬಾ ಸ್ವಚ್ಛವಾಗಿದ್ದು, ಇಲ್ಲಿನ ಎಲ್ಲಾ ಗುರುಗಳು, ಶಿಸ್ತಿನಿಂದ ಕರ್ತವ್ಯವನ್ನು ನಿರ್ವಹಿಸಿಕೊಂಡು ಹೋಗುತ್ತಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಈ ರೀತಿಯ ಶಿಸ್ತು ಮತ್ತು ಸ್ವಚ್ಛತೆಯನ್ನು ಕಾಣಲು ಅಸಾಧ್ಯವಾಗಿದೆ ಎಂದರು.

ಶ್ರೀಮತಿ ಜ್ಯೋತಿ ಪರಮೇಶ್ ಪಟೇಲ್‌ರವರು ಮಾತನಾಡಿ, ರಾಜೇಂದ್ರ ಶ್ರೀಗಳು ಚಿಕ್ಕವಯಸ್ಸಿನಲ್ಲಿ ಪಟ್ಟಾಧಿಕಾರಕ್ಕೆ ಬಂದರು. ಅವರು ಯಾವುದೇ ತಾರತಮ್ಯ ಭೇದಭಾವ ಮಾಡುತ್ತಿರಲಿಲ್ಲ. ಇವನಾರವ ಇವನಾರವ ಎನಿಸದಿರಯ್ಯಾ, ಇವನಮ್ಮವ ಇವನಮ್ಮವ, ನಮ್ಮ ಮನೆಯ ಮಗನೆಂದೆನಿಸಯ್ಯಾ ಎಂಬ ಬಸವಣ್ಣನವರ ವಚನದಂತೆ ಬಾಳಿದವರು. ಇವರು ಹಿಂದುಳಿದ ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದರು. ಬಡ ವಿದ್ಯಾರ್ಥಿಗಳ ಶಿಕ್ಷಣ ಮುಂದುವರಿಕೆಗಾಗಿ ಅನಾಥಾಲಯಗಳು, ಪ್ರಸಾದ ನಿಲಯಗಳನ್ನು ಸ್ಥಾಪಿಸಿದರು. ಶಿಕ್ಷಣ ಅರಸಿ ಬಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಅವಕಾಶ ವಂಚಿತರಾಗಬಾರದು ಎಂಬುದು ಶ್ರೀಗಳ ಆಶಯವಾಗಿತ್ತು. ಮಹಿಳೆಯರಿಗಾಗಿಯೇ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಉಚಿತ ಪ್ರವೇಶಾತಿಯನ್ನು ಕಲ್ಪಿಸಿ ಮಹಿಳಾ ಸಬಲೀಕರಣಕ್ಕೆ ಪ್ರೋತ್ಸಾಹ ನೀಡಿದರು. ಶಿಕ್ಷಣ ಕ್ರಾಂತಿಯ ಹರಿಕಾರರಾದರು. ಇಂತಹ ಮಹಾನ್ ಸಂತರಿಗೆ ಮೈಸೂರಿನ ಒಡೆಯರು ನೀಡಿರುವ ರಾಜಗುರು ತಿಲಕ ಎಂಬ ಬಿರುದು ಶ್ರೀಗಳಿಗೆ ಔಚಿತ್ಯ ಪೂರ್ಣವಾಗಿ ಅನ್ವರ್ಥವಾಗಿದೆ ಎಂದರು.

ಮುಖ್ಯೋಪಾಧ್ಯಾಯರಾದ ಶ್ರೀ ಪಿ. ಶಂಭು ಮಾತನಾಡಿ, ಪೂಜ್ಯ ರಾಜೇಂದ್ರ ಶ್ರೀಗಳು ಅನೇಕ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದ್ದರಿಂದ ಅತ್ಯಂತ ಹಿಂದುಳಿದ ಗ್ರಾಮೀಣ ಭಾಗದ ಅನೇಕ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ ಕಲಿಯುವ ಭಾಗ್ಯ ದೊರಕಿತು. ಹಾಗೆ ಅನೇಕ ಸುಶಿಕ್ಷಿತ ಯುವಕರಿಗೆ ಉದ್ಯೋಗದ ಭಾಗ್ಯವು ದೊರೆಕಿತು. ಆ ಮೂಲಕ ಅವರ ಕಷ್ಟಕಾರ್ಪಣ್ಯ ಗಳನ್ನು ನೀಗಲು ಶ್ರೀಗಳು ಕಾರಣೀಭೂತರಾದರು. ಶ್ರೀಗಳ ಆಶೀರ್ವಾದ ಅರಸಿ ಬಂದ ಪ್ರತಿಯೊಬ್ಬ ಭಕ್ತರಿಗೂ ಹಸನ್ಮುಖಿಗಳಾಗಿ ಅವರ ಸಮಸ್ಯೆಗಳನ್ನು ಸಮಾಧಾನ ಚಿತ್ತದಿಂದ ಆಲಿಸಿ ಸೂಕ್ತ ಪರಿಹಾರ ಸೂಚಿಸುತ್ತಿದ್ದರು ಎಂದರು.

ಚಿಕ್ಕತುಪ್ಪೂರು ಶ್ರೀ ಚನ್ನವೀರಸ್ವಾಮಿಗಳು ಮಾತನಾಡಿ, ನನಗೆ ರಾಜೇಂದ್ರ ಶ್ರೀಗಳ ಜೊತೆ ಮೂರು ವರ್ಷಗಳ ಒಡಾನಾಟದ ಪುಣ್ಯ ದೊರೆಕಿತ್ತು. ದೀನ ದಲಿತರ ಆಶಾಕಿರಣವಾಗಿದ್ದ ಶ್ರೀಗಳು ಭಾರತದ ಅತ್ಯಂತ ಹಿಂದುಳಿದ ವಿದ್ಯಾರ್ಥಿಗಳ ಉದರಪೋಷಣೆಗಾಗಿ ಮೊದಲು ವಿದ್ಯಾರ್ಥಿನಿಲಯಗಳನ್ನು, ಜ್ಞಾನಪೋಷಣೆಗಾಗಿ

ಜ್ಞಾನ ದೇಗುಲಗಳನ್ನು ಹಳ್ಳಿ ಹಳ್ಳಿಗಳಲ್ಲಿಯೂ ತೆರೆದರು. ಪ್ರಸ್ತುತ ಭಾರತದ ಹಲವು ರಾಜ್ಯಗಳಲ್ಲಿ ಮಾತ್ರವಲ್ಲದೆ, ಹೊರದೇಶಗಳಲ್ಲಿಯೂ ಶಿಕ್ಷಣ ಸಂಸ್ಥೆಗಳನ್ನು, ಧಾರ್ಮಿಕ ಸಂಸ್ಥೆಗಳನ್ನು ಸ್ಥಾಪಿಸಿದ ಹೆಗ್ಗಳಿಕೆ ಸುತ್ತೂರಿನ ಶ್ರೀಮಠಕ್ಕೆ ಸಲ್ಲುತ್ತದೆ. ತಾವೆಲ್ಲರು ಉತ್ತಮವಾಗಿ ಅಧ್ಯಯನ ಮಾಡಿ ಸುಶಿಕ್ಷಿತರಾಗಿ ಅಖಂಡ ದೇಶವನ್ನು ಬೆಳಗುವ ದಿವ್ಯ ಜ್ಯೋತಿಗಳಾಗಿ ಬೆಳೆದು ನಿಮ್ಮ ಜೀವನವನ್ನು ಪಾವನಗೊಳಿಸಿಕೊಳ್ಳುವುದರ ಜೊತೆಗೆ ಸಂಸ್ಥೆಯ ಕೀರ್ತಿಯನ್ನು ಬೆಳಗಬೇಕೆಂದು ತಿಳಿಸಿದರು.

ರಾಜೇಂದ್ರ ಶ್ರೀಗಳ ಜೀವನ, ಸಾಮಾಜಿಕ ಕಳಕಳಿ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಗಳು ಎಂಬ ವಿಷಯ ಕುರಿತು ಶಾಲಾ ಹಂತದಲ್ಲಿ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ವಿಜೇತರಾದ 8,9 ಮತ್ತು 10 ನೇ ತರಗತಿಯ ವಿದ್ಯಾರ್ಥಿಗಳಿಗೆ ಪೂಜ್ಯ ಶ್ರೀಗಳು ಬಹುಮಾನ ವಿತರಿಸಿದರು. ನಂಜನಗೂಡು ಕಸಬಾ ಹೊಬಳಿ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ವಿಜೇತರಾದ ಶಾಲೆಯ ವಿದ್ಯಾರ್ಥಿಗಳಿಗೆ ಶ್ರೀ ಮಹೇಶ್ ಪಾರಿತೋಷಕ ನೀಡಿ ಸನ್ಮಾನಿಸಿದರು. ಪೂಜ್ಯ ಶ್ರೀಗಳ 110 ನೇ ಜಯಂತಿ ಪ್ರಯುಕ್ತ ಮಹದೇವನಗರದ ನಿವಾಸಿಗಳ ರಸ್ತೆ ಅಕ್ಕ ಪಕ್ಕ ಸ್ವಚ್ಛತಾ ಕಾರ್ಯದ ಮೂಲಕ ಶ್ರಮದಾನವನ್ನು ನಡೆಸಿ ಪರಿಸರ ಸ್ವಚ್ಛತೆಯ ಬಗ್ಗೆ ನಿವಾಸಿಗಳಿಗೆ ಅರಿವುಂಟು ಮಾಡಲಾಯಿತು. ತದನಂತರ ಶಾಲೆಯ ಮುಂಭಾಗದಿಂದ ಮುಖ್ಯ ರಸ್ತೆಯುವರೆಗೂ ಸ್ವಚ್ಛತ ಕಾರ್ಯವನ್ನು ನೆರವೇರಿಸಲಾಯಿತು. 2024–25 ನೇ ಶೈಕ್ಷಣಿಕ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ಕು. ತೇಜಸ್ವಿನಿ ಎಂಬ ವಿದ್ಯಾರ್ಥಿನಿಯುನ್ನು ಈ ಸಮಾರಂಭದಲ್ಲಿ ಸನ್ಮಾನಿಸಲಾಯಿತು. ಕು. ಕವನ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀ ಕೆ.ಎಂ. ನಟರಾಜು ಸ್ವಾಗತಿಸಿದರು. ಶ್ರೀ ಎನ್. ನಟರಾಜು ಕಾರ್ಯಕ್ರಮ ನಿರೂಪಣೆ ಮಾಡಿದರು. ಶ್ರೀ ಎಸ್. ಮಾದಪ್ಪ ವಂದಿಸಿದರು.

## ಜೆಎಸ್‌ಎಸ್ ಮಕ್ಕಳ ವಿದ್ಯಾರ್ಥಿನಿಲಯ, ಬೋಗಾದಿ, ಮೈಸೂರು



ಮೈಸೂರಿನ ಬೋಗಾದಿಯಲ್ಲಿರುವ ಜೆಎಸ್‌ಎಸ್ ಮಕ್ಕಳ ವಿದ್ಯಾರ್ಥಿನಿಲಯದಲ್ಲಿ ದಿನಾಂಕ 7.9.2025 ರಂದು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110 ನೇ ಜಯಂತಿ ಮಹೋತ್ಸವವನ್ನು ಆಚರಿಸಲಾಯಿತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳು–2 ರವರಾದ ಶ್ರೀ ಎಸ್. ಶಿವಕುಮಾರಸ್ವಾಮಿಯವರು ವಹಿಸಿದ್ದರು.

ಶ್ರೀ ನಗರ್ಲೆ ಶಿವಕುಮಾರರವರು ನುಡಿನಮನವನ್ನು ಸಲ್ಲಿಸಿದರು.

ಕಾರ್ಯಕ್ರಮವು ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ನಿಲಯದ ವ್ಯವಸ್ಥಾಪಕರಾದ ಶ್ರೀ ಕೆ.ಎಸ್. ಗೌರಿಶಂಕರಸ್ವಾಮಿಯವರು ಸ್ವಾಗತಿಸಿದರು, ನಿಲಯದ ಕ್ಷೇಮಪಾಲಕರಾದ ಶ್ರೀ ಡಿ.ಎಂ. ಮಧುರವರು ನಿರೂಪಣೆ ಮಾಡಿದರು. ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಬಾಲಿಕಾ ಪ್ರೌಢಶಾಲೆಯ ಇಲ್ಲಿಯ ಮುಖ್ಯೋಪಾಧ್ಯಾಯಿನಿಯವರಾದ ಶ್ರೀಮತಿ ಡಿ.ಆರ್. ಕವಿತಾರವರು ಭಕ್ತಿಗಾಯನದ ಮೂಲಕ ಪೂಜ್ಯರಿಗೆ ನಮನಗಳನ್ನು ಸಲ್ಲಿಸಿದರು. ನಿಲಯದ 10ನೇ ತರಗತಿ ವಿದ್ಯಾರ್ಥಿ ಕು. ದಯಾಸಾಗರ್‌ರವರು ವಂದಿಸಿದರು. ಕಾರ್ಯಕ್ರಮದಲ್ಲಿ ನಾಗರಿಕರು, ವಿದ್ಯಾರ್ಥಿಗಳ ಪೋಷಕರು, ವಸತಿನಿಲಯದವರು ಭಾಗವಹಿಸಿದ್ದರು.

## ಜೆಎಸ್‌ಎಸ್ ಆರೋಗ್ಯ ವಿಜ್ಞಾನ ಸಂಸ್ಥೆಗಳು, ಮೈಸೂರು



ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಕೇವಲ ಧಾರ್ಮಿಕ ನಾಯಕರು ಮಾತ್ರವಲ್ಲ, ಮಾನವೀಯತೆಯ ಶ್ರೇಷ್ಠ ದಾರಿದೀಪ. ಜ್ಞಾನ, ದಂಯೆ, ಸಹನೆ ಇವುಗಳನ್ನು ಜೀವನದ ಧ್ಯೇಯವನ್ನಾಗಿಸಿಕೊಂಡವರು. ಶಿಕ್ಷಣದ ಮೂಲಕ ಸಾವಿರಾರು ಮಕ್ಕಳ ಜೀವನಕ್ಕೆ ಬೆಳಕು ತಂದವರು. ಗ್ರಾಮೀಣ ಸಮಾಜದ ಅಭಿವೃದ್ಧಿ ಬಡವರ ಉದ್ದಾರ, ಅನಾಥರ ಪಾಲನೆ ಇವುಗಳಲ್ಲಿಯೂ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸೇವೆ ಅಪಾರ ಎಂದು ಬಿಳಿಗಿರಿರಂಗನ ಬೆಟ್ಟದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ನುಡಿನಮನದಲ್ಲಿ ತಿಳಿಸಿದರು.

ಜೆಎಸ್‌ಎಸ್ ಆರೋಗ್ಯ ವಿಜ್ಞಾನ ಸಂಸ್ಥೆಗಳ ವತಿಯಿಂದ ದಿನಾಂಕ 12.9.2025 ರಂದು ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ನಡೆದ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೇ ಜಯಂತಿ ಮಹೋತ್ಸವದಲ್ಲಿ ನುಡಿನಮನ ಸಲ್ಲಿಸಿ ಅವರು ಮಾತನಾಡಿದರು. ಇಂದು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿರುವುದು ಹೆಮ್ಮೆಯ ವಿಷಯವಾಗಿದೆ. ಶ್ರೀಗಳು ಅತೀ ಚಿಕ್ಕ ವಯಸ್ಸಿನಲ್ಲಿಯೇ ಲೌಕಿಕ ಬದುಕನ್ನು ತ್ಯಜಿಸಿ ಆಧ್ಯಾತ್ಮದ ಕಡೆ ಒಲವು ತೋರಿಸಿ, ಬಡವರ ಆರ್ಥಿಕ ಸ್ಥಿರತೆಗೆ ಮತ್ತು ಶಿಕ್ಷಣದ ಅಭಿವೃದ್ಧಿಗೆ ಶ್ರಮಿಸಿದರು. ಶರೀರಕ್ಕೆ ಅನ್ನ, ಔಷಧಿ, ತಲೆಗೆ ಜ್ಞಾನ, ಹೃದಯಕ್ಕೆ ಭಕ್ತಿ,

ಪ್ರೀತಿ, ಪ್ರೇಮಗಳು ಎಷ್ಟು ಮುಖ್ಯ ಎಂಬ ತತ್ವವನ್ನು ಪಾಲಿಸುತ್ತಿದ್ದರು ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತರವರು, ಜೆಎಸ್ಎಸ್ ಸಂಸ್ಥೆಯಲ್ಲಿ ಶ್ರೀಗಳ ಜಯಂತ್ಯೋತ್ಸವದಲ್ಲಿ ಭಾಗವಹಿಸಿರುವುದು ಬಹಳ ಹೆಮ್ಮೆ ಹಾಗೂ ಸಂತೋಷವಾಗಿದೆ. ಜೆಎಸ್ಎಸ್ ಸಂಸ್ಥೆಗಳಲ್ಲಿನ ವಿದ್ಯಾರ್ಥಿಗಳ ಶಿಸ್ತು, ಸಂಯಮ, ಸಮಯಪಾಲನೆ ಮೆಚ್ಚುವಂಥದ್ದು. ದಯವೇ ಧರ್ಮದ ಮೂಲವಯ್ಯ, ಕಾಯಕವೇ ಕೈಲಾಸ ಎಂಬ ಬಸವಣ್ಣನವರ ಧ್ಯೇಯೋದ್ದೇಶವನ್ನು ಸಮಾಜಕ್ಕೆ ಸಾರಲು ರೂಪಿಸಿದ ಮಹಾಸಂಸ್ಥೆಯೇ ಜೆಎಸ್ಎಸ್ ಮಹಾವಿದ್ಯಾಪೀಠ. ಜೆಎಸ್ಎಸ್ ವಿದ್ಯಾಸಂಸ್ಥೆಯನ್ನು ಆಯ್ಕೆಮಾಡಿಕೊಂಡಿರುವ ಎಲ್ಲಾ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಿರಲಿ ಎಂದು ಹಾರೈಸಿದರು.

ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್‌ರವರು, ಶಿಕ್ಷಣವೆಂದರೆ ಸರ್ವತೋಮುಖ ಅಭಿವೃದ್ಧಿ ಎಂದು ಪ್ರತಿಪಾದಿಸಿದಂತಹ ಈ ಶತಮಾನದ ಮಹಾಸಂತ ಪರಮಪೂಜ್ಯ ಜಗದ್ಗುರುಗಳು. ಸ್ವಾತಂತ್ರ್ಯ ಪೂರ್ವದಲ್ಲಿಯೇ ಶ್ರೀಗಳು ಶಿಕ್ಷಣಕ್ಕೆ ಹಾಗೂ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ನೀಡಿದ ಪ್ರಾಮುಖ್ಯತೆ ಅಪಾರವಾದುದು. ಪ್ರಾರಂಭದಲ್ಲಿ ತುಂಬಾ ಸರಳವಾಗಿ ಚಾಲನೆಗೊಂಡ ವಿದ್ಯಾಸಂಸ್ಥೆ 1954 ರಲ್ಲಿ ಒಂದು ರೂಪವನ್ನು ಪಡೆದುಕೊಂಡು ಜೆಎಸ್ಎಸ್ ಮಹಾವಿದ್ಯಾಪೀಠ ಎಂಬುದಾಗಿ ಸ್ಥಾಪನೆಯಾಯಿತು. ಶಿಕ್ಷಣ, ಆರೋಗ್ಯ, ಗ್ರಾಮೀಣಭಿವೃದ್ಧಿ ಹೀಗೆ ಇನ್ನೂ ಹಲವಾರು ಕ್ಷೇತ್ರಗಳಲ್ಲಿ ದೇಶ ವಿದೇಶದೆಲ್ಲೆಡೆ ತನ್ನ ಛಾಪನ್ನು ಮೂಡಿಸಿದೆ. ಕೇವಲ ಒಂದು ಸಣ್ಣ ಪ್ರಾಥಮಿಕ ಆರೋಗ್ಯ ಕೇಂದ್ರ ಇಂದು ದೊಡ್ಡ ಮಟ್ಟದ 1800 ಹಾಸಿಗೆಗಳ ಬೃಹತ್ ಆಸ್ಪತ್ರೆಯಾಗಿ ಪರಿವರ್ತನೆಯಾಗಿದೆ. ಜೆಎಸ್ಎಸ್ ಸಂಸ್ಥೆಗಳ ಮೂಲ ಉದ್ದೇಶ ಜನಸೇವೆ ಹಾಗೂ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದು ಎಂದು ತಿಳಿಸಿದರು.

ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತ್ಯೋತ್ಸವದ ಪ್ರಯುಕ್ತ ಅಂತರ ಕಾಲೇಜು ವಿದ್ಯಾರ್ಥಿಗಳಿಗೆ ಪೆನ್ಸಿಲ್ ಸ್ಕೆಚ್, ಪ್ರಬಂಧ ಸ್ಪರ್ಧೆ ಹಾಗೂ ವಚನಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಪ್ರಬಂಧ ಸ್ಪರ್ಧೆಯಲ್ಲಿ ಶಾಲೆಯ ದ್ವಿತೀಯ ವರ್ಷದ ವಿದ್ಯಾರ್ಥಿನಿ ಕು. ತೆಂಜಿನ್ ಯೂಡೋನರವರು ಪ್ರಥಮ ಬಹುಮಾನ ಹಾಗೂ ಕು. ಲಕ್ಷ್ಮಿಯವರು ದ್ವಿತೀಯ ಬಹುಮಾನಕ್ಕೆ ಭಾಜನರಾಗಿರುತ್ತಾರೆ. ವಚನಗಾಯನ ಸ್ಪರ್ಧೆಯಲ್ಲಿ ದ್ವಿತೀಯ ವರ್ಷದ ವಿದ್ಯಾರ್ಥಿನಿಯಾದ ಕು. ನೀಮಾಸೋಮನ್‌ರವರು ಎರಡನೆ ಬಹುಮಾನ ಪಡೆದುಕೊಂಡಿರುತ್ತಾರೆ. ಪೆನ್ಸಿಲ್‌ಸ್ಕೆಚ್ ಸ್ಪರ್ಧೆಯಲ್ಲಿ ತೃತೀಯ ವರ್ಷದ ವಿದ್ಯಾರ್ಥಿನಿಯಾದ ಕು. ಸಾನಿಯಾ ಕತೂನ್‌ರವರು ಮೂರನೆ ಬಹುಮಾನವನ್ನು ಪಡೆದುಕೊಂಡಿರುತ್ತಾರೆ. ಬೋಧಕ ವರ್ಗದವರಿಗೆ ಅಂತರ ಕಾಲೇಜು ಥ್ರೋಬಾಲ್ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಜೆಎಸ್ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ವಿದ್ಯಾರ್ಥಿನಿ ಕು. ವೈಷ್ಣವಿಯವರು ವಚನ ಗಾಯನ ಮಾಡಿದರು. ಕಾರ್ಯಕ್ರಮದ ಅಂಗವಾಗಿ ಸಂಶೋಧನ ಕಾರ್ಯಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಂಡ ಬೋಧಕವರ್ಗದವರನ್ನು ಸನ್ಮಾನಿಸಲಾಯಿತು. ಜೆಎಸ್ಎಸ್ ಸ್ಕೂಲ್‌ಆಫ್ ನರ್ಸಿಂಗ್‌ನ ಪ್ರಾಂಶುಪಾಲರಾದ ಶ್ರೀಮತಿ ಡಿ.ಎನ್. ರೇಣುಕಾದೇವಿ, ಜೆಎಸ್ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ಪ್ರಾಂಶುಪಾಲರಾದ ಡಾ. ಸುಮ, ಜೆಎಸ್ಎಸ್ ಫಿಸಿಯೋಥೆರಪಿ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಶ್ರೀಮತಿ ತೇಜಸ್ವಿನಿ, ಜೆಎಸ್ಎಸ್ ಕಾಲೇಜ್ ಆಫ್ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಅಶ್ವತಿದೇವಿ ಹಾಗೂ ಎಲ್ಲಾ ಅಂಗ ಸಂಸ್ಥೆಯ ಬೋಧಕ, ಬೋಧಕೇತರವರ್ಗ ಹಾಗು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಜೆಎಸ್ಎಸ್ ಕಾಲೇಜ್ ಆಫ್ ನರ್ಸಿಂಗ್‌ನ ಸಹಾಯಕ ಪ್ರಾಧ್ಯಾಪಕರಾದ ಡಾ. ಸುನೀತಾ ಸ್ವಾಗತಿಸಿದರು. ಜೆಎಸ್ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಸಂಕಲ್ಪರವರು ವಂದಿಸಿದರು. ಜೆಎಸ್ಎಸ್ ಸ್ಕೂಲ್ ಆಫ್ ನರ್ಸಿಂಗ್‌ನ ಬೋಧಕರಾದ ಶ್ರೀಮತಿ ಮಾನಸ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಪ್ರೌಢಶಾಲೆ, ಕೋಣನಕುಂಟೆ, ಬೆಂಗಳೂರು



ಬೆಂಗಳೂರಿನ ಕೋಣನಕುಂಟೆಯಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಬೆಂಗಳೂರಿನ ಬೇಲಿಮಠ ಪೀಠಾಧ್ಯಕ್ಷರಾದ ಶ್ರೀ ಶಿವಾನುಭವಚರಮೂರ್ತಿ ಶಿವರುದ್ರ ಮಹಾಸ್ವಾಮಿಗಳವರ ಸಮ್ಮುಖದಲ್ಲಿ ದಿನಾಂಕ 11.9.2025ರಂದು ಪರಮಪೂಜ್ಯ ಜಗದ್ಗುರು ರಾಜೇಂದ್ರ ಶ್ರೀಗಳವರ 110ನೇ ಜಯಂತಿ ಕಾರ್ಯಕ್ರಮ ನೆರವೇರಿತು.

ಮುಖ್ಯ ಅತಿಥಿಗಳಾದ ನಿವೃತ್ತ ಕನ್ನಡ ಉಪನ್ಯಾಸಕರಾದ ಶ್ರೀ ಚಂದ್ರಶೇಖರ ಉಷಾಲರವರು ನುಡಿನಮನ ಸಲ್ಲಿಸುತ್ತ, ಪರಮಪೂಜ್ಯ ರಾಜೇಂದ್ರ ಶ್ರೀಗಳು ಬಸವಣ್ಣನವರ ಎಲ್ಲಾ ಆದರ್ಶಗಳನ್ನೂ ಮೈಗೂಡಿಸಿಕೊಂಡು ಜಗತ್ತಿಗೇ ಬೆಳಕಾದವರು, ಅಷ್ಟೇ ಅಲ್ಲ, ಸದಾಕಾಲ ಈ ಜಗತ್ತಿಗೆ, ಈ ಲೋಕಕ್ಕೆ ಹಲವು ಬಗೆಯಲ್ಲಿ ಬೆಳಕು ನೀಡುವ ಅನೇಕ ವಿಧದ ಕಾಯಕಲ್ಪಗಳ ಸೇವಾವಲಯಗಳನ್ನು ತೆರೆದವರು. ನೊಂದವರ, ಹಸಿದವರ ಹಸಿವು ನೀಗಿಸಲು ತಮ್ಮ ಬಳಿಯಿದ್ದ ಚಿನ್ನದ ಕರಡಿಗೆಯನ್ನೇ ಅಡವಿಟ್ಟವರು. ಬಹುಮುಖ್ಯವಾಗಿ ಗ್ರಾಮೀಣ ಭಾಗದಲ್ಲಿ ಶಿಕ್ಷಣವಂಚಿತರಾದ ಬಡಮಕ್ಕಳ ವಿದ್ಯಾಭ್ಯಾಸಕ್ಕೆ ಬೆಳಕಾದವರು. ಅಂತಹವರಿಗಾಗಿ ಉನ್ನತ ಮಟ್ಟದ ಶಿಕ್ಷಣ ನೀಡುವ ಅವಶ್ಯಕವಾದ ಸಂಸ್ಥೆಗಳನ್ನು ಆರಂಭಿಸಿದವರು ಎಂದರು.

ಅಧ್ಯಕ್ಷತೆ ವಹಿಸಿದ್ದ ಬೆಂಗಳೂರಿನ ರಾಜರಾಜೇಶ್ವರಿ ವೈದ್ಯಕೀಯ ಕಾಲೇಜಿನ ಶಿಕ್ಷಕರೂ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರೂ ಆದ ಶ್ರೀಮತಿ ಡಾ. ಪ್ರೇಮ ಧನರಾಜ್ ಮಾತನಾಡಿ, "ನಾವು ಜೀವನದಲ್ಲಿ ಹಾರ್ಡ್‌ವರ್ಕಿಂಗ್ ಹಾನೆಸ್ಟಿ, ಹೋಲಿನೆಸ್, ಹಂಬಲ್‌ನೆಸ್ ಮತ್ತು ಹ್ಯುಮ್ಯಾನಿಟಿ ಎಂಬ ಈ 5 ಹೆಚ್‌ಗಳನ್ನು ಹ್ಯಾಪಿ ಆಗಿ ರೂಢಿಸಿಕೊಳ್ಳಬೇಕು, ಯಾರ ಮಾತಿಗೂ ಗಮನಕೊಡದೆ, ನಾವು ನಮ್ಮ ಕೆಲಸದ ಕಡೆಗೆ ಮಾತ್ರ ಗಮನಕೊಡಬೇಕು. ಅಷ್ಟು ಮಾತ್ರ ಮಾಡುತ್ತಾ ಹೋದರೆ ನಾವು ಖಂಡಿತಾ ಒಂದಲ್ಲ ಒಂದು ಬಗೆಯ ಸಾಧಕರಾಗಿ ಪರಿವರ್ತನೆಯಾಗಿಬಿಡುತ್ತೇವೆ, ಆದ್ದರಿಂದ ಜೀವನದಲ್ಲಿ ಒಂದು ಗುರಿಯಿರಿಸಿಕೊಳ್ಳಬೇಕು, ಪ್ರಪಂಚಕ್ಕೆ ಒಟ್ಟಾರೆ ಒಳ್ಳೆಯದನ್ನು ಮಾಡಬೇಕು ಅನ್ನೋ ಮನಸ್ಸಿರಬೇಕು. ಯಾರೂ ಸಹ ಯಾರನ್ನೂ ಇತರರಿಗೆ ಹೋಲಿಸಬಾರದು. ತಾರತಮ್ಯ ಮಾಡಬಾರದು. ಆದ್ದರಿಂದ ಪರಿಶ್ರಮ ಮತ್ತು ನಿಷ್ಠೆ ವ್ಯಕ್ತಿಗಳಿಗೆ ಖಂಡಿತಾ ಸಾಧನೆಯ ಹಾದಿ ಗೋಚರಿಸುತ್ತದೆ. ನಾವು ಅದರತ್ತ ಗಮನ ಹರಿಸಬೇಕಿದೆ. ಪರಮಪೂಜ್ಯರ ಆಶೀರ್ವಾದ ಮತ್ತು ದೇವರ ಸಂಕಲ್ಪ ಇದ್ದಲ್ಲಿ ನಾವು ನಿಜಕ್ಕೂ ಅಚ್ಚುಕಟ್ಟಾಗಿ ಗುರಿ ಮುಟ್ಟುತ್ತೇವೆ ಎಂದರು.

ಸಮ್ಮುಖ ದಯಪಾಲಿಸಿದ್ದ ಶ್ರೀ ಶಿವಾನುಭವ ಚರಮೂರ್ತಿ ಶಿವರುದ್ರ ಮಹಾಸ್ವಾಮಿಗಳು ಆಶೀರ್ವಚನವೀಯುತ್ತಾ, ಶಿವರಾತ್ರಿ ರಾಜೇಂದ್ರ ಗುರುಗಳವರನ್ನು ಸ್ಮರಿಸಿಕೊಂಡು ಮಾಡಲು ಹೊರಟ ಯಾವ ಕಾರ್ಯವಾದರೂ ಸರಿಯೇ ನಮಗೆ ಯಶಸ್ಸನ್ನು ಕೊಟ್ಟೇಕೊಡುತ್ತದೆ. ಜಗತ್ತಿನಲ್ಲಿ ನಾವು ನಂಬರ್ ಒನ್ ಆಗಬೇಕಾದ್ರೆ ಬೆಳೆಯುವ ಯುವ ಪೀಳಿಗೆಯನ್ನು ಸರಿಯಾದ ಮಾರ್ಗದಲ್ಲಿ ಕರೆದುಕೊಂಡು ಹೋಗಬೇಕು. ಅಂತಹ ಮಹತ್ವಾದ ಕಾರ್ಯಗಳನ್ನು ಮಾಡುತ್ತಾ ಸದಾ ಮೇಲೆ ಮೇಲೆ 'ಹತ್ತು' 'ಮೇಲೇರು' ಎಂಬ ಭಾವವನ್ನು ಮೂಡಿಸುವ ಸಾಂಕೇತಿಕ ಆಚರಣೆಯೇ ಈ ಪರಮಪೂಜ್ಯರ ನೂರ ಹತ್ತನೇ ಜಯಂತಿ ಆಚರಣೆ ಅನ್ನೋದು ನಮ್ಮ ಭಾವನೆ ಎಂದು ತಿಳಿಸಿದರು.

ಸಭಾ ಕಾರ್ಯಕ್ರಮಕ್ಕೂ ಮೊದಲು ಪ್ರಮುಖ ರಸ್ತೆಗಳಲ್ಲಿ ರಾಜೇಂದ್ರ ಶ್ರೀಗಳವರ ಭಾವಚಿತ್ರ ಮೆರವಣಿಗೆ ಮಾಡಲಾಯಿತು.

ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಕುಮಾರಸ್ವಾಮಿ ಸ್ವಾಗತಿಸಿದರು. ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಡಿ. ನಾಗರಾಜಪ್ಪ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶಿಕ್ಷಕರಾದ ಶ್ರೀ ಭೀಮಪ್ಪ ಬಳೋಬಾಳ್ ಹಾಗೂ ಶ್ರೀ ಎಸ್.ಎ. ವೇದಮೂರ್ತಿ ನಿರೂಪಿಸಿದರು. ಶ್ರೀ ಎಸ್. ಮಧು ಹಾಗೂ ಶ್ರೀ ನಾರಾಯಣಸ್ವಾಮಿ ಅತಿಥಿಗಳ ಪರಿಚಯ ಮಾಡಿದರು. ಶ್ರೀ ಎಂ.ಡಿ. ಗಿರೀಶ್ ವಂದಿಸಿದರು.

## ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಮೈಸೂರು

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜು ಹಾಗೂ ಪದವಿಪೂರ್ವ ಕಾಲೇಜಿನ ವತಿಯಿಂದ ದಿನಾಂಕ 19.9.2025 ರಂದು ರಾಜಗುರುತಿಲಕ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವ (110ನೇ ಜಯಂತಿ) ಕಾರ್ಯಕ್ರಮವನ್ನು ಆಚರಿಸಲಾಯಿತು.

ನುಡಿನಮನ ಸಲ್ಲಿಸಿದ ಹಿರಿಯ ವಿದ್ವಾಂಸರು ಹಾಗೂ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ ಸಿ. ನಾಗಣ್ಣರವರು, ರಾಜೇಂದ್ರ ಶ್ರೀಗಳವರು ಈ ನಾಡಿನ ಸಂತ ಪರಂಪರೆಯಲ್ಲಿ ಮೇಲ್ಪಂಕ್ತಿಯಲ್ಲಿ ನಿಲ್ಲುತ್ತಾರೆ. ಪೂಜ್ಯರು ಮಾನವ ಕಲ್ಯಾಣಕ್ಕಾಗಿ ತಮ್ಮ ಬದುಕನ್ನು ಮುಡಿಪಿಟ್ಟವರು. ಗ್ರಾಮೀಣ ಪ್ರದೇಶದ ಬಡಮಕ್ಕಳು ಸಾಧಕರಾಗಬೇಕು. ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಕನಸು ಕಂಡು ಈ ನಿಟ್ಟಿನಲ್ಲಿ ಸಾಗಿದ ಮಹಾತ್ಮರು. ತಾವು ಸ್ಥಾಪಿಸಿದ ಪ್ರಸಾದ ನಿಲಯ ನಡೆಸಲು ಆರ್ಥಿಕ ಸಂಕಷ್ಟ ಉಂಟಾದ ಸಂದರ್ಭದಲ್ಲಿ ತಮ್ಮ ಕರಡಿಗೆ ಮತ್ತು ರುದ್ರಾಕ್ಷಿಯ ಚಿನ್ನದ ಕವಚವನ್ನು ಮಾರಿ ಮುನ್ನಡೆಸಿದ ನಿಸ್ವಾರ್ಥ ಸಂತ. ಇವರು ನಮ್ಮ ನಾಡಿನ ಭಾಗ್ಯವಾಗಿದ್ದರೆ ಎಂದರು.

ಚಾಮರಾಜ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಶ್ರೀ ಕೆ. ಹರೀಶ್ ಗೌಡ ರವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ, ಸ್ವಾತಂತ್ರ್ಯ ಪೂರ್ವದಲ್ಲಿ ಸಾಮಾನ್ಯ ವರ್ಗದವರು ಹಾಗೂ ಗ್ರಾಮೀಣ ಪ್ರದೇಶದವರಿಗೆ ಶಿಕ್ಷಣವೆನ್ನುವುದು ಗಗನ ಕುಸುಮವಾಗಿತ್ತು. ಇಂತಹ ಸಂದರ್ಭದಲ್ಲಿ ಪರಮಪೂಜ್ಯರು ಪ್ರಸಾದ ನಿಲಯಗಳು ಹಾಗೂ ಶಾಲೆಗಳನ್ನು ತೆರೆದರು. ಜನಸಾಮಾನ್ಯರು ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸಿದರು. ಮಹಾತ್ಯಾಗಿಗಳಾದ ಪರಮಪೂಜ್ಯರನ್ನು ಸೂರ್ಯ ಚಂದ್ರರು ಇರುವವರಿಗೂ ನಾವು ಸ್ಮರಿಸಿಕೊಳ್ಳಬೇಕಾಗಿದೆ. ಅದು ನಮ್ಮ ಕರ್ತವ್ಯ ಕೂಡ. ಪ್ರಸ್ತುತ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ರಾಜೇಂದ್ರ ಶ್ರೀಗಳವರ ಆಶಯದಂತೆ ಶ್ರೀಮಠದ ಸೇವಾ ಕಾರ್ಯವನ್ನು ಜಗದಗಲ ವಿಸ್ತರಿಸಿದ್ದಾರೆ. ಇದು ನಾವು ಹೆಮ್ಮೆ ಪಡಬೇಕಾದ ಸಂಗತಿಯಾಗಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಾಲೇಜಿನ ಹಿರಿಯ ವಿದ್ಯಾರ್ಥಿನಿ ಹಾಗೂ ಗಾಯಕರಾದ ಶ್ರೀಮತಿ ಪೃಥ್ವಿ ಎ




ದೀಕ್ಷಿತ್‌ರವರು ನನ್ನಲ್ಲಿದ್ದ ಸುಪ್ತಪ್ರತಿಭೆಗೆ ಜೆಎಸ್‌ಎಸ್ ಕಾಲೇಜು ಸಹಕಾರ ನೀಡಿದೆ. ವಿದ್ಯಾರ್ಥಿನಿಯರು ತಮ್ಮ ಓದಿನ ಜೊತೆಗೆ ತಮ್ಮೊಳಗಿನ ಪ್ರತಿಭೆಯನ್ನು ಅನಾವರಣಗೊಳಿಸಿಕೊಳ್ಳಲು ವೇದಿಕೆಗಳನ್ನು ಬಳಸಿಕೊಳ್ಳಬೇಕು. ಓದಿನೊಂದಿಗೆ ಕೌಶಲ್ಯ ಹೊಂದಿದ್ದರೆ ಉತ್ತಮ ಭವಿಷ್ಯ ನಿರ್ಮಾಣ ಮಾಡಿಕೊಳ್ಳಬಹುದು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜು ಶಿಕ್ಷಣ ಇಲಾಖೆಯ ಮೈಸೂರಿನ ಪ್ರಾದೇಶಿಕ ಜಂಟಿ ನಿರ್ದೇಶಕರಾದ ಡಾ. ಡಿ.ಎಸ್. ಪ್ರತಿಮಾರವರು, ಪರಮಪೂಜ್ಯರು ಸ್ಥಾಪಿಸಿದ ಈ ಸಂಸ್ಥೆಯಲ್ಲಿ ಶಿಕ್ಷಣ ಪಡೆದು ಶೈಕ್ಷಣಿಕ, ಸಾಮಾಜಿಕ, ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಧನೆ ಮಾಡಿರುವವರನ್ನು ಕಾಣಬಹುದು. ಇವರು ಇಂದಿನ ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಕಾಲೇಜಿನಲ್ಲಿ ಆಯೋಜಿಸಿದ್ದ ಅಂತರ ಕಾಲೇಜು ವಚನ ಗಾಯನ ಮತ್ತು ಪ್ರಬಂಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ದತ್ತಿ ಪುರಸ್ಕಾರ ನೀಡಲಾಯಿತು. ವೇದಿಕೆಯ ಮೇಲೆ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ರೇಚಣ್ಣ ರವರು, ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶ್ರೀಮತಿ ಎಂ. ಪಿ. ರಾಜೇಶ್ವರಿಯವರು ಸಂಚಾಲಕರಾದ ಶ್ರೀ ಆರ್. ಎಸ್. ಕುಮಾರ್, ಶ್ರೀ ಎಂ.ಎಸ್. ನಟರಾಜು ಉಪಸ್ಥಿತರಿದ್ದರು. ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಕು. ಧಾತ್ರಿ ಮತ್ತು ವೃಂದದವರು ಪ್ರಾರ್ಥಿಸಿದರು. ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ರೇಚಣ್ಣ ರವರು ಸ್ವಾಗತಿಸಿದರು. ಅಧ್ಯಾಪಕರಾದ ಶ್ರೀ ಎಂ ಎಸ್ ನಟರಾಜು ವಂದಿಸಿದರು. ಕಾರ್ಯಕ್ರಮವನ್ನು ಅಧ್ಯಾಪಕರಾದ ಶ್ರೀಮತಿ ಜೆ. ಪುಷ್ಪಲತಾ ನಿರೂಪಿಸಿದರು.

## ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಕೊಳ್ಳೇಗಾಲ

ಕೊಳ್ಳೇಗಾಲದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಮುಚ್ಛಯದಲ್ಲಿ ದಿನಾಂಕ 23.9.2025ರಂದು ಪರಮಪೂಜ್ಯ ಜಗದ್ಗುರು ಡಾ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೆಯ ಜಯಂತಿ ಮಹೋತ್ಸವ'ವನ್ನು ಆಯೋಜಿಸಲಾಗಿತ್ತು. ಬೆಳಗ್ಗೆ ಪೂಜ್ಯ ರಾಜೇಂದ್ರ ಶ್ರೀಗಳವರ ಭಾವಚಿತ್ರದ ಪಲ್ಲಕ್ಕಿ ಮೆರವಣಿಗೆಗೆ



ಹನೂರಿನ ಯುವ ಮುಖಂಡರು ಹಾಗೂ ಉದ್ಯಮಿಗಳಾದ ಶ್ರೀ ಎಸ್. ನಿಶಾಂತ್‌ರವರು ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು. ಶ್ರೀ ಮಠದ ಭಕ್ತರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ನಂದಿಧ್ವಜ, ವೀರಗಾಸೆ ಜನಪದ ಕಲಾ ತಂಡಗಳು ಭಾಗವಹಿಸಿದ್ದು ಕೊಳ್ಳೇಗಾಲದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಿತು.

ದೀಪ ಬೆಳಗಿಸುವ ಮೂಲಕ ಸಭಾ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದ ಮಾಜಿ ಶಾಸಕರಾದ ಶ್ರೀಮತಿ ಪರಿಮಳಾ ನಾಗಪ್ಪನವರು, ಪರಮಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಸದಾ ನಗುಮುಖದ ಕಾಂತಿವುಳ್ಳವರಾಗಿದ್ದರು. ಯಾವುದೇ ಸಮಸ್ಯೆಗಳಿಗೆ ಪರಿಹಾರ ತಿಳಿಸುವ ತಾಯಿ ಹೃದಯವುಳ್ಳವರಾಗಿದ್ದರು. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶ್ರಮದ ಫಲವಾಗಿ ಇಂದಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಜನ್ಮತಾಳಿವೆ. ಗ್ರಾಮೀಣ ಪ್ರದೇಶದ ಪ್ರತಿಭೆಗಳು ಅನಾವರಣಗೊಳ್ಳಲು ಶ್ರೀಗಳು ಕಾರಣಕರ್ತರಾಗಿದ್ದಾರೆ. ಶ್ರೀಗಳವರ ಆಶೀರ್ವಾದ ನಮ್ಮೆಲ್ಲರ ಮೇಲೆ ಇರಲಿ ಎಂದರು.

ಸಂಸ್ಕೃತಿ ಚಿಂತಕರು ಹಾಗೂ ನಿವೃತ್ತ ಮುಖ್ಯ ಅಭಿಯಂತರರಾದ ಶ್ರೀ ಶಂಕರ್ ದೇವನೂರುರವರು ಮಾತನಾಡಿ, ನಮ್ಮ ಬದುಕು ರಾಜೇಂದ್ರ ಶ್ರೀಗಳಂತಾಗಬೇಕು. ಹತ್ತೂರು ಸುತ್ತಿ ನೋಡೋ ಬದಲು ಸುತ್ತೂರು ನೋಡು ಎಂಬ ಮಾತಿದೆ. ಅದು ಕೇವಲ ಭೌಗೋಳಿಕವಾಗಿ ಮಾತ್ರವಲ್ಲ, ಆಧ್ಯಾತ್ಮಿಕವಾಗಿ, ಸಾಂಸ್ಕೃತಿಕವಾಗಿ ಅನನ್ಯವಾದುದು. ಶಿವರಾತ್ರೀಶ್ವರರ ಶಕ್ತಿ ಅನನ್ಯ. ಸುತ್ತೂರಿನ ಗುರು ಪರಂಪರೆಯ ಅರಿವು ವಿದ್ಯಾರ್ಥಿಗಳಿಗೆ ಅತ್ಯಗತ್ಯ. ಗುರು ಪರಂಪರೆಯ 23ನೇ ಗುರುಗಳಾಗಿ ಕಷ್ಟದ ಕುಲುಮೆಯಲ್ಲಿ ಬೆಂದ ಪೂಜ್ಯರ ಜೀವನ ವಿದ್ಯಾರ್ಥಿಗಳಿಗೆ ಆದರ್ಶವಾಗಬೇಕು. ನಾನಲ್ಲ ನಾವು ಎಂಬ ಮನೋಭಾವ ಮೂಡಬೇಕು. ಮನುಷ್ಯರಾಗಿ ಹುಟ್ಟಿಲ್ಲ; ಮನುಷ್ಯರಾಗಲು ಹುಟ್ಟಿದ್ದೇನೆ, ಅದಕ್ಕೆ ಸಂಸ್ಕಾರ ಅಗತ್ಯ. ಅದನ್ನು ರೂಪಿಸಿದವರು ರಾಜೇಂದ್ರ ಶ್ರೀಗಳು. ಕಲಿತವರಿಗಿಂತ ಕರಗುವವರು ಮುಖ್ಯ. ಅಹಂಕಾರ ಅಲಂಕಾರವಾಗಬಾರದು. ಪ್ರತಿಭೆಯನ್ನು ಗುರುತಿಸುವ ಯೋಗ್ಯತೆ ಕೂಡ ನಮ್ಮದಾಗಬೇಕು. ವೈಭವವಾಗಿ ಆಚರಿಸುವುದು ಜಯಂತಿಯಲ್ಲ. ನಡೆ–ನುಡಿ ಒಂದಾದ ಬದುಕು ನಮ್ಮದಾಗಬೇಕು. ಪ್ರಸ್ತುತ ಸಮಾಜಕ್ಕೆ ರಾಜೇಂದ್ರ ಶ್ರೀಯವರ ಚಿಂತನೆಗಳ ನೆನಪು ಅಗತ್ಯವಾಗಿದೆ. ನನ್ನ ಜೀವನದ ಬೆಳಕು ರಾಜೇಂದ್ರ ಶ್ರೀಗಳು. ಕಳ್ಳ ಕದಿಯಲಾಗದ ಏಕೈಕ ಸಂಪತ್ತು ಅಂದರೆ ಅದು ಶ್ರೀಗಳು ನೀಡಿದ ಶಿಕ್ಷಣವಾಗಿದೆ

ಎಂದರು.

ಚಾಮುಲ್ ಅಧ್ಯಕ್ಷ ಶ್ರೀ ಎಂ. ನಂಜುಂಡಸ್ವಾಮಿಯವರು ರಾಜೇಂದ್ರ ಶ್ರೀಗಳವರ ಶತೋತ್ತರ ದಶಮಾನೋತ್ಸವವು ಅದ್ದೂರಿಯಾಗಿ ನಡೆದಿದೆ. ರಾಜೇಂದ್ರ ಶ್ರಿಗಳು ಶಿಕ್ಷಣ ಕ್ರಾಂತಿ ಮಾಡಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಿ, ಸಾಮಾಜಿಕವಾಗಿ ಮುನ್ನೆಲೆಗೆ ತಂದಿದ್ದಾರೆ. ಅವರು ಹಾಕಿಕೊಟ್ಟ ದಾರಿಯಲ್ಲಿ ನಾವು ನಡೆಯಬೇಕು ಎಂದು ತಿಳಿಸಿದರು.

ಹನೂರಿನ ಯುವ ಮುಖಂಡರು ಹಾಗೂ ಉದ್ಯಮಿಗಳಾದ ಶ್ರೀ ಎಸ್. ನಿಶಾಂತ್‌ರವರು, ಗ್ರಾಮೀಣ ಪ್ರದೇಶಗಳಲ್ಲಿ ಶಾಲಾ ಕಾಲೇಜುಗಳನ್ನು ತೆರೆದು ಹೆಣ್ಣು ಮಕ್ಕಳ ಬಾಲ್ಯ ವಿವಾಹ ತಡೆಯುವಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಶ್ರಮಿಸಿದೆ. ಶಿಕ್ಷಣದಿಂದ ನಾಡಿನ ಪ್ರಗತಿ ಸಾಧ್ಯ. ಒಳ್ಳೆಯ ಸಂಸ್ಕಾರ ರೂಢಿಸಿಕೊಳ್ಳಬೇಕಾದರೆ ಶ್ರೀಗಳನ್ನು ಸ್ಮರಿಸಬೇಕು. ಅವರ ಹಾದಿಯಲ್ಲಿ ನಾವು ನಡೆಯಬೇಕು ಶ್ರೀಗಳಿಗೆ ನಾವೆಲ್ಲರೂ ಚಿರಋಣಿಗಳಾಗಿರಬೇಕು ಎಂದು ಹೇಳಿದರು.

ಶಾಸಕರಾದ ಶ್ರೀ ಎ.ಆರ್. ಕೃಷ್ಣಮೂರ್ತಿಯವರು ಮಾತನಾಡಿ ರಾಜೇಂದ್ರ ಶ್ರೀಗಳವರು ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ ಗಮನಾರ್ಹವಾದುದು. ಮೈಸೂರು ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ಶ್ರೀಗಳಿಗೆ ರಾಜಗುರುತಿಲಕ ಬಿರುದನ್ನು ಕೊಟ್ಟು ಗೌರವಿಸಿದ್ದಾರೆ. ರೈತರ ಬದುಕಿಗೆ ಬೆಳಕಾಗಿ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಶ್ರಮಿಸಿದ ಶ್ರೀಗಳ ವಿಚಾರ ಧಾರೆಗಳು ನಮ್ಮೆಲ್ಲರ ಬದುಕಿಗೆ ದಾರಿದೀಪವಾಗಲಿ ಎಂದು ತಿಳಿಸಿದರು.

ಶ್ರೀ ಸಾಲೂರು ಬೃಹನ್ಮಠದ ಡಾ. ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಜ್ಞಾನಾನ್ನ ದಾಸೋಹಿಗಳಾದ ರಾಜೇಂದ್ರ ಶ್ರೀಗಳವರ ಸೇವೆ ಅಪಾರವಾದದ್ದು. ಹೊಟ್ಟೆಯ ಹಸಿವಿಗಿಂತ, ಜ್ಞಾನದ ಹಸಿವು ದೊಡ್ಡದು. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಸುತ್ತೂರು ಶ್ರೀಗಳು ತೆರೆಯದ ಶಿಕ್ಷಣ ಸಂಸ್ಥೆಗಳಿಲ್ಲ. ಮನುಷ್ಯ ಸದಾ ಪ್ರಜ್ಞಾವಂತನಾಗಿ, ಸನ್ಮಾರ್ಗದಲ್ಲಿ ನಡೆಯಬೇಕಾದರೆ ಅದು ಶಿಕ್ಷಣದಿಂದ ಮಾತ್ರ ಸಾಧ್ಯ, ಶ್ರೀಗಳವರ ತತ್ವ ಬೋಧನೆಗಳು ನಮ್ಮಗೆಲ್ಲರಿಗೂ ಆದರ್ಶವಾಗಬೇಕೆಂದು ಹಾರೈಸಿದರು.

ಕಾರ್ಯಕ್ರಮದಲ್ಲಿ 2024–25 ಸಾಲಿನ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀ ಹೆಚ್.ಎಂ. ನಾಗಭೂಷಣರವರು ಪ್ರತಿಜ್ಞಾವಿಧಿ ಬೋಧಿಸಿದರು. ಕಾರ್ಯಕ್ರಮದಲ್ಲಿ ಪ್ರಾಚಾರ್ಯರಾದ ಡಾ. ಹೆಚ್.ಎಸ್. ಕೊಂಗಳಪ್ಪ, ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಎನ್. ಮಹದೇವಸ್ವಾಮಿ, ನರ್ಸಿಂಗ್ ಶಾಲೆಯ ಪ್ರಾಂಶುಪಾಲರಾದ ಶ್ರೀ ಹೇಮೇಶ ಮೂರ್ತಿ, ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಹಾಗೂ ಸಂಘ ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಶ್ರೀಮಠದ ಭಕ್ತರು ಉಪಸ್ಥಿತರಿದ್ದರು.

## ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆ, ಮೈಸೂರು

ಮೈಸೂರಿನ ಉದಯಗಿರಿಯಲ್ಲಿರುವ ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ, ಜೆಎಸ್‌ಎಸ್ ಶಿಶುನಾಳ ಶರೀಫ್ ಪ್ರೌಢಶಾಲೆ ಹಾಗೂ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು, ಇವರ ಸಂಯುಕ್ತಾಶ್ರಯದಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವ (110ನೇ ಜಯಂತಿ) ಕಾರ್ಯಕ್ರಮವನ್ನು ದಿನಾಂಕ 10.9.2025 ರಂದು ಆಚರಿಸಲಾಯಿತು.

ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಜೆಎಸ್‌ಎಸ್ ಶಿಶುನಾಳ ಶರೀಫ್ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಬಿ.ಪಿ. ಪ್ರಕಾಶ್‌ರವರು ಪ್ರಾಸ್ತಾವಿಕವಾಗಿ ಮಾತನಾಡಿ, ಪೂಜ್ಯ ಶ್ರೀ ರಾಜೇಂದ್ರ ಸ್ವಾಮಿಗಳವರು ತ್ರಿವಿಧ ದಾಸೋಹಿಗಳಾಗಿ ಶಿಕ್ಷಣ,



ಆರೋಗ್ಯ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಅಪಾರ ಸೇವೆ ಸಲ್ಲಿಸಿದರು. ಸುತ್ತೂರು ಮಠವನ್ನು ಭವ್ಯವಾಗಿ ಬೆಳೆಸಿ ಜೆಎಸ್‌ಎಸ್ ಸಂಸ್ಥೆಯನ್ನು ಸ್ಥಾಪಿಸಿದರು. ತಮ್ಮ ಜೀವಿತಾವಧಿಯಲ್ಲಿ ಸಾವಿರಾರು ಬಡವರಿಗೆ ಆಶ್ರಯ ನೀಡಿ, ಅನೇಕ ಶಾಲೆಗಳನ್ನು ಸ್ಥಾಪಿಸಿ, ಶೈಕ್ಷಣಿಕ ಕ್ರಾಂತಿಗೆ ನಾಂದಿ ಹಾಡಿದರು. ಇವರ ಕಾರ್ಯಗಳು ಇಂದಿಗೂ ಸ್ಮರಣೀಯವಾಗಿದೆ. ರಾಜಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು 1953 ರಲ್ಲಿ 'ರಾಜಗುರುತಿಲಕ' ಎಂಬ ಬಿರುದನ್ನು ನೀಡಿ ಗೌರವಿಸಿದರೆ, ಮೈಸೂರು ವಿಶ್ವವಿದ್ಯಾನಿಲಯವು 1989ರಲ್ಲಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ತಮ್ಮ ಜೀವನವನ್ನು ಸಮಾಜದ ಏಳಿಗೆಗಾಗಿ ಸಮರ್ಪಿಸಿದರು ಎಂದು ಸ್ಮರಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಮೈಸೂರಿನ ಎಸ್‌ಜೆಸಿಇ ಕಾಲೇಜಿನ ಕನ್ನಡ ಉಪನ್ಯಾಸಕರಾದ ಕು. ಅಂಬಿಕಾರವರು ನುಡಿ ನಮನ ಸಲ್ಲಿಸಿ ಮಾತನಾಡುತ್ತಾ, ವಿದ್ಯಾರ್ಥಿಗಳೇ ಭವಿಷ್ಯದ ನೇತಾರರು ಸಮಾಜದಲ್ಲಿ ಒಳಿತು ಕೆಡಕುಗಳಿವೆ, ದಾರಿ ತಪ್ಪುವಂತಹ ವಿಚಾರಗಳಿವೆ. 100ಕ್ಕೆ 90ರಷ್ಟು ಸಂತೃಪ್ತ ಜೀವನ ನಡೆಸುವವರಿದ್ದಾರೆ. ಅಜ್ಞಾನಕ್ಕೆ ದಾಹ ಹೆಚ್ಚು. ಶ್ರೀ ಜಿ.ಎಸ್. ಶಿವರುದ್ರಪ್ಪರವರು ಹೇಳುವಂತೆ ಹಣತೆ ಹಚ್ಚುತ್ತೇನೆ ನಾನು, ಕತ್ತಲೆಯನ್ನು ಗೆದ್ದೆಯೆಂಬ ಜಿದ್ದಿನಿಂದಲ್ಲ. ಲೆಕ್ಕವೆಯಿಲ್ಲದ ದೀಪಾವಳಿಯ ಹಡಗುಗಳೇ ಇದರಲ್ಲಿ ಮುಳುಗಿ ಕರಗಿರುವಾಗ, ನಾನು ಹಚ್ಚುವ ಹಣತೆ ಶಾಶ್ವತವೆಂಬ ಭ್ರಾಂತಿ ನನಗಿಲ್ಲ ಎಂಬ ಅರಿವು ನಮಗಿರಬೇಕು. ಹಣತೆ ಎಂದರೆ ಜ್ಞಾನ, ಬೆಳಕು, ಅರಿವು. ಕತ್ತಲೆಯಿಂದ ಬೆಳಕಿನೆಡೆಗೆ ಪ್ರಯಾಣ ನಡೆಸುವುದಾಗಿದೆ. ಯುಗ-ಯುಗದಲ್ಲೂ ವಚನಕಾರರು, ಪ್ರವಾದಿಗಳು, ಸಮಾಜ ಸುಧಾರಕರು, ಚಿಂತಕರು ಹುಟ್ಟಿ ಜ್ಞಾನದ ಬೆಳಕನ್ನು ಸಮಾಜಕ್ಕೆ ನೀಡುತ್ತಾ ಬಂದಿದ್ದಾರೆ. ಮಕ್ಕಳೇ ಹೊಂದಾಣಿಕೆಯಿಂದ ಬದುಕಿ, ಹಂಚಿ ತಿನ್ನಿ. ಸಮಾಜದಲ್ಲಿ ಎಲ್ಲ ಕ್ರೌರ್ಯಗಳಿಗಿಂತ ಹಸಿವು ದೊಡ್ಡ ಕ್ರೌರ್ಯ. ಮೊದಲು ನಿಮ್ಮ ಹೊಟ್ಟೆ ತುಂಬಬೇಕು. ಮುಖದಲ್ಲಿ ನಗು ಕಾಣಬೇಕು ಎಂದು ಬಯಸಿದವರು ರಾಜೇಂದ್ರ ಶ್ರೀಗಳು. ನಾವು ಅವರನ್ನು ಪ್ರತ್ಯಕ್ಷವಾಗಿ ನೋಡಿಲ್ಲವಾದರೂ ದೇವರ ಉಪಾಸನೆಯಲ್ಲಿ, ನಾವು ತಿನ್ನುವ ಅನ್ನದಲ್ಲಿ, ನಾವು ಯೋಚಿಸುವ ಚಿಂತನೆಯಲ್ಲಿ, ನಾವು ಬದುಕುವಂತಹ ಬದುಕಿನಲ್ಲಿ ಶ್ರೀಗಳಿದ್ದಾರೆ ಎಂದರು.

ನಿವೃತ್ತ ಉಪ ನಿರ್ದೇಶಕರಾದ ಶ್ರೀ ಹೆಚ್.ವಿ. ಶೇಷಗಿರಿರಾವ್‌ರವರು ಮಾತನಾಡುತ್ತಾ, ಡಾ. ಶ್ರೀ ರಾಜೇಂದ್ರ ಶ್ರೀಗಳು ಈ ಯುಗದಲ್ಲಿ ನಾವು ಕಂಡ ಮಹಾನ್ ದಾರ್ಶನಿಕರು. ಅವರ ಬದುಕೇ ನಮಗೆ

ಆದರ್ಶದಾಯಕವಾಗಿದೆ. ಬಡ ವಿದ್ಯಾರ್ಥಿಗಳಿಗೆ ಜ್ಞಾನ ದಾಸೋಹವನ್ನು ನೀಡಿದ್ದಾರೆ. ಆ ಮಕ್ಕಳೇ ಇಂದು ಸಮಾಜದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ರೇವಣ್ಣರವರು ಮಾತನಾಡುತ್ತಾ, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಶ್ರೀ ಸುತ್ತೂರು ಮಠ ಅಪಾರ ಸೇವೆ ಸಲ್ಲಿಸುತ್ತಿದೆ. ನಾನು ಕೂಡ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿ, ಪ್ರಸ್ತುತ ಶಿಕ್ಷಣಾಧಿಕಾರಿಯಾಗಿದ್ದೇನೆ. ಸಂಸ್ಥೆಯಲ್ಲಿ ಯಾವುದೇ ಜಾತಿ ಮತವಿಲ್ಲದೆ, ಎಲ್ಲರಿಗೂ ಸಮಾನ ಶಿಕ್ಷಣ ನೀಡಲಾಗುತ್ತದೆ. ಸಂಸ್ಕಾರ ಮತ್ತು ಒಳ್ಳೆಯ ಮೌಲ್ಯಗಳನ್ನು ಬೆಳೆಸಲು, ಇಂತಹ ಮಠಗಳಿಂದ ಸಾಧ್ಯ. ಪೂಜ್ಯ ಶ್ರೀಗಳು ಬಡ ಮಕ್ಕಳ ಶಿಕ್ಷಣಕ್ಕಾಗಿ ಅಪಾರವಾದ ಶ್ರಮವನ್ನು ವಹಿಸಿದ್ದಾರೆ. ಮಕ್ಕಳು ಮೊದಲು ಗುರು ಹಿರಿಯರನ್ನು ಗೌರವಿಸುವುದನ್ನು ಕಲಿಯಬೇಕು. ಒಳ್ಳೆಯ ರೀತಿಯಲ್ಲಿ ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಿ ಎಂದು ತಿಳಿಸಿದರು.

ದಂಡಿಕೆರೆಯ ಮಹಾಂತಸ್ವಾಮಿ ಪಟ್ಟದಮಠದ ಶ್ರೀ ಬಸವಲಿಂಗಸ್ವಾಮಿಗಳು ಮಾತನಾಡಿ, ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜಯಂತಿಯನ್ನು ಜೆಎಸ್‌ಎಸ್ ಸಂಸ್ಥೆಗಳಲ್ಲಿ, ನಾಡಿನಾದ್ಯಂತ, ದೇಶ–ವಿದೇಶಗಳಲ್ಲಿ ಆಚರಿಸಲಾಗುತ್ತಿದೆ. ಜಯಂತಿಗಳನ್ನು ಆಚರಿಸುವ ಉದ್ದೇಶ ಮಹನೀಯರು ನಡೆದು ಬಂದ ದಾರಿಯನ್ನು ಸ್ಮರಿಸುವುದಾಗಿದೆ. ಅವರ ಚಿಂತನೆಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಇರುವ ಮಾರ್ಗವಾಗಿದೆ. ಶ್ರೀಗಳು ಓದುವುದಕ್ಕಾಗಿ ಮೈಸೂರಿಗೆ ಬಂದಾಗ ಒಂದು ಸಣ್ಣ ಕೊಠಡಿಯಲ್ಲಿ ಇರುವ ಸಂದರ್ಭದಲ್ಲಿ ಅಲ್ಲಿದ್ದ ಬಡ ವಿದ್ಯಾರ್ಥಿಗಳನ್ನು ಗಮನಿಸಿ ಅವರಿಗೆ ಸಹಾಯ ಮಾಡಬೇಕೆಂದು ಮಂತ್ರ ಮಹರ್ಷಿಗಳಿಂದ ಹಣ ಪಡೆದು ಮಕ್ಕಳಿಗೆ ಓದಲು ಸಹಾಯ ಮಾಡಿದರು. ರಾಜೇಂದ್ರ ಶ್ರೀಗಳವರ ಈ ಕಾರ್ಯದಿಂದ ಪ್ರತಿಯೊಬ್ಬರಿಗೂ ವಿದ್ಯಾಭ್ಯಾಸ ದೊರೆಯಲು ಸಹಕಾರಿಯಾಯಿತು. ಅವರ ಶ್ರಮದಿಂದ ಜೆಎಸ್‌ಎಸ್ ಸಂಸ್ಥೆಯು ಹೆಮ್ಮರವಾಗಿ ಬೆಳೆದಿದೆ. ಇಂತಹ ಪುಣ್ಯ ಪುರುಷರ, ದಾರ್ಶನಿಕರ ಜಯಂತಿಯನ್ನು ಆಚರಿಸುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿಯಾಗಿದೆ. ಆದ್ದರಿಂದ ಮಕ್ಕಳೇ ವಿದ್ಯೆಯೆಂಬುದು ಅಮೂಲ್ಯವಾದ ವಸ್ತುವಾಗಿದ್ದು, ಅದನ್ನು ನಿಮ್ಮ ಬದುಕಿನ ದಾರಿ ದೀಪವಾಗುವಂತೆ ಅಳವಡಿಸಿಕೊಳ್ಳಬೇಕೆಂದು ಹೇಳಿದರು.

ಜೆಎಸ್‌ಎಸ್ ಶಿಶುನಾಳ ಶರೀಫ್ ಪ್ರೌಢಶಾಲೆಯ ವಿದ್ಯಾರ್ಥಿಗಳು ಭಕ್ತಿಗೀತೆ ಮತ್ತು ವಚನ ಗಾಯನ ನಡೆಸಿಕೊಟ್ಟರು. 2024–25 ರಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಶಾಲಾ ಮಟ್ಟದಲ್ಲಿ ಹಾಗೂ ವಲಯಮಟ್ಟದಲ್ಲಿ ಮತ್ತು ವಿವಿಧ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಶ್ರೀ ಸಿ. ರಮೇಶ, ಜೆಎಸ್‌ಎಸ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಜ್ಞಾನಮೂರ್ತಿ, ಜೆಎಸ್‌ಎಸ್ ಶಿಶುನಾಳ ಶರೀಫ್ ಪ್ರೌಢಶಾಲೆಯ ಮುಖ್ಯಶಿಕ್ಷಕರಾದ ಶ್ರೀ ಬಿ.ಪಿ. ಪ್ರಕಾಶ್, ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ಸಿಬ್ಬಂದಿ ವರ್ಗ ಹಾಗೂ ವೃತ್ತಿಬೋಧಕರು, ಉಪನ್ಯಾಸಕರು, ಶಾಲಾ ಸಹಶಿಕ್ಷಕರು, ಪೋಷಕರು, ಶಾಲಾ ಮತ್ತು ಕಾಲೇಜಿನ ವಿದ್ಯಾರ್ಥಿವೃಂದ ಹಾಗೂ ಬ್ಯೂಟಿಷಿಯನ್ ಕಲಿಕಾರ್ಥಿಗಳು ಭಾಗವಹಿಸಿದ್ದರು.

ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಶ್ರೀ ರಮೇಶ್‌ರವರು ಸ್ವಾಗತಿಸಿದರು.

## ಜೆಎಸ್‌ಎಸ್ ಪ್ರೌಢಶಾಲೆ, ಉಮ್ಮತ್ತೂರು



ಚಾಮರಾಜನಗರ ತಾಲ್ಲೂಕು ಉಮ್ಮತ್ತೂರಿನಲ್ಲಿ ದಿನಾಂಕ 20.09.2025ರಂದು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವವನ್ನು ಆಚರಿಸಲಾಯಿತು. ಬೆಳಗ್ಗೆ ಗ್ರಾಮದ ಮುಖಂಡರು ಮತ್ತು ಶಾಲಾ ವೃಂದದವರು ಶ್ರೀಗಳವರಿಗೆ ಪೂಜೆ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರದ ಮೆರವಣಿಗೆಯನ್ನು ಬೆಳ್ಳಿ ಪಲ್ಲಕ್ಕಿ ರಥದಲ್ಲಿ ಪ್ರಮುಖ ಬೀದಿಗಳಲ್ಲಿ ನಡೆಸಲಾಯಿತು. ಮೆರವಣಿಗೆಯಲ್ಲಿ ಶಾಲಾ ಮಕ್ಕಳ ಬ್ಯಾಂಡ್, ವೀರಗಾಸೆ ಕುಣಿತ, ವಾದ್ಯ ಕಲಾತಂಡಗಳು ಪಾಲ್ಗೊಂಡಿದ್ದವು.

ಸಭಾ ಕಾರ್ಯಕ್ರಮವನ್ನು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಉದ್ಘಾಟಿಸಲಾಯಿತು. ಸಹಶಿಕ್ಷಕಿಯಾದ ಬಿ. ಮಹದೇವಮ್ಮರವರು ಪ್ರಾರ್ಥನೆ ಸಲ್ಲಿಸಿದರು. ಕಬ್ಬಳ್ಳಿಯ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ ಮುಖ್ಯಶಿಕ್ಷಕರಾದ ಶ್ರೀ ಸಿದ್ಧರಾಜಪ್ಪರವರು ನುಡಿನಮನ ಸಲ್ಲಿಸಿ ಮಾತನಾಡಿ, ಶಿಕ್ಷಣದಿಂದಲೇ ನಾಡಿನ ಸರ್ವತೋಮುಖ ಅಭಿವೃದ್ಧಿ ಸಾಧ್ಯ, ಎಲ್ಲಾ ಸಮಸ್ಯೆಗಳಿಗೂ ಶಿಕ್ಷಣವೇ ಸಂಜೀವಿನಿ ಎಂಬುದು ಪೂಜ್ಯರ ಧ್ಯೇಯೋದ್ದೇಶವಾಗಿತ್ತು. ನಿಸ್ವಾರ್ಥ ಸಮಾಜ ಸೇವೆಯನ್ನು ಪ್ರತಿಯೊಬ್ಬ ನಾಗರಿಕರು ಕಿಂಚಿತ್ತಾದರೂ ಅಳವಡಿಸಿಕೊಂಡರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂಬುದಕ್ಕೆ ಪೂಜ್ಯಶ್ರೀ ಸಾಕ್ಷಿ ಎಂದರು. ಪೂಜ್ಯರ ಸಾಧನೆಗಳನ್ನು ಅರ್ಥಪೂರ್ಣ ನೈಜ ಉದಾಹರಣೆಗಳ ಮೂಲಕ ವಿವರಿಸಿದರು. ಚಾಮರಾಜನಗರದ ಶ್ರೀ ಸಿದ್ದಮಲ್ಲೇಶ್ವರ ವಿರಕ್ತಮಠದ ಶ್ರೀ ಚನ್ನಬಸವ ಸ್ವಾಮಿಗಳವರು ರಾಜೇಂದ್ರ ಮಹಾಸ್ವಾಮಿಗಳವರ ದಾಸೋಹ, ಶಿಕ್ಷಣ ಸೇವೆ, ದಿವ್ಯದೃಷ್ಟಿ ಮತ್ತು ಅವರ ಸಾಮಾಜಿಕ ಕಳಕಳಿ ಬಹಳ ಎತ್ತರವಾದುದು. ವೈದ್ಯಾಧಿಕಾರಿಗಳಾದ ಡಾ. ರವಿಕಿರಣ್‌ರವರು ನಿರಂತರ ಪರಿಸರ ಸ್ವಚ್ಛತೆಯಿಂದ ಪ್ರತಿಯೊಬ್ಬರು ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯ ಎಂದರು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ನಾಗೇಂದ್ರಸ್ವಾಮಿ, ಉಪಾಧ್ಯಕ್ಷರಾದ ಶ್ರೀ ನಂಜುಂಡಶೆಟ್ಟಿ, ಉಮ್ಮತ್ತೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶ್ರೀಮತಿ ರಾಜಮ್ಮ ಇವರುಗಳು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಿದರು. ಶಾಲೆಯ ಹಿರಿಯ ವಿದ್ಯಾರ್ಥಿ ಶ್ರೀ ಜಿ. ರವಿಶಂಕರ್‌ರವರು 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಾದ ಕು. ಎಂ. ಅನುಷ ಕು.

ಯಮುನ, ವಚನಶ್ರೀ, ಇವರುಗಳಿಗೆ ಹೆಚ್ಚು ಅಂಕ ಪಡೆದ ಮೂವರು ವಿದ್ಯಾಥಿಗಳಿಗೆ ಇವರ ತಂದೆ ದಿವಂಗತ ಎಂ. ಗುರುಮಲ್ಲಪ್ಪರವರ ಹೆಸರಿನಲ್ಲಿ 5,000 ರೂ. ಬಹುಮಾನ ನೀಡಿದರು. ಹಾಗೆಯೇ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಯಿಂದ 8,9 ಮತ್ತು 10ನೇ ತರಗತಿಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಮತ್ತು ಶಾಲೆಯಲ್ಲಿ ನಡೆದ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ನೀಡಲಾಯಿತು. ಮುಖ್ಯಶಿಕ್ಷಕರಾದ ಶ್ರೀ ಎಂ.ಎಂ. ಮಲ್ಲರಾಜು ಸ್ವಾಗತಿಸಿದರು. ಸಹಶಿಕ್ಷಕರಾದ ಶ್ರೀ ಶಿವಕುಮಾರ ಕಾರ್ಯಕ್ರಮ ನಿರೂಪಿಸಿದರು. ಸಹಶಿಕ್ಷಕರಾದ ಶ್ರೀ ಜಿ.ಕೆ. ಗುರುಸಿದ್ಧಾಚಾರಿ ವಂದನಾರ್ಪಣೆ ಮಾಡಿದರು.

□

## ಜೆಎಸ್‌ಎಸ್ ಆಂಗ್ಲ ಮಾಧ್ಯಮ ನರ್ಸರಿ, ಪ್ರಾಥಮಿಕ ಮತ್ತು ಪ್ರೌಢಶಾಲೆ (ಬಾಲಜಗತ್), ಮೈಸೂರು

ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವ ಮತ್ತು ಶಿಕ್ಷಕರ ದಿನಾಚರಣೆಯನ್ನು ದಿನಾಂಕ 20.09.2025 ರಂದು ಜೆಎಸ್‌ಎಸ್ ಆಂಗ್ಲಮಾಧ್ಯಮ ಶಾಲೆಯಲ್ಲಿ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿದ್ದ ಮೈಸೂರಿನ ಶರಣು ವಿಶ್ವವಚನ ಫೌಂಡೇಶನ್ನಿನ ಸಂಸ್ಥಾಪಕರಾದ ಶ್ರೀ ವಚನ ಕುಮಾರಸ್ವಾಮಿಯವರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿ, ವಸಂತಕಾಲವು ಮಾವಿನಮರ ಮತ್ತು ಕೋಗಿಲೆ ಎರಡನ್ನೂ ಒಂದು ಮಾಡುವ ಹಾಗೆ ಶ್ರೀಗಳ ಜಯಂತಿ ಮಹೋತ್ಸವವು ನಮ್ಮ ನಿಮ್ಮೆಲ್ಲರನ್ನು ಒಂದು ಮಾಡಿದೆ. ಹಾಗೂ ಬಾಲಜಗತ್ ಶಾಲೆಯು ಶ್ರೀಗಳವರು ನಡೆದಾಡಿದ ಸ್ಥಳವಾಗಿದೆ. 'ಮಂಡೆ ಮಾಸಿದರೆ ಮಹಾ ಮಜ್ಜನವ ಮಾಡುವರು ವಸ್ತ್ರ ಮಾಸಿದರೆ ಮಡಿವಾಳನಿಗೆ ಹಾಕುವರು ಮನದ ಮೈಲಿಗೆಯ ತೊಳೆಯಬೇಕಾದರೆ ಕೂಡಲಸಂಗನ ಶರಣರ ಅನುಭಾವವ ಮಾಡಬೇಕು' ಎಂಬ ಚನ್ನಬಸವಣ್ಣನ ಮಾತಿನಂತೆ ಇಂತಹ ಕಾರ್ಯಕ್ರಮವು ಮನದ ಮೈಲಿಗೆಯನ್ನು ಹೋಗಲಾಡಿಸಲು ದಾರಿದೀಪವಾಗಿದೆ. ರಾಜೇಂದ್ರ ಶ್ರೀಗಳು ತಮ್ಮ 12ನೇ ವಯಸ್ಸಿನಲ್ಲಿಯೇ ಜಗದ್ಗುರುಗಳಾದವರು. ವಿದ್ಯಾರ್ಥಿಯಾಗಿದ್ದಾಗಲೇ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಬಟ್ಟೆ, ಊಟವಿಲ್ಲದೆ ಕಷ್ಟಪಡುವುದನ್ನು ನೋಡಿ ವಿದ್ಯಾರ್ಥಿನಿಲಯವನ್ನು ತೆರೆದು ವಿದ್ಯಾರ್ಥಿಗಳ ಬದುಕಿಗೆ ದಾರಿದೀಪವಾದರು. ಇಂದು ಜೆಎಸ್‌ಎಸ್ ಸಂಸ್ಥೆಯು ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದು, ಲಕ್ಷಾಂತರ ಮಂದಿಯ ಬಾಳಿಗೆ ಬೆಳಕಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ಸಹ ನಿರ್ದೇಶಕರಾದ ಶ್ರೀ ಎಂ. ಶಿವಪ್ರಸಾದಪ್ಪರವರು ಮಾತನಾಡುತ್ತಾ, ರಾಜೇಂದ್ರ ಶ್ರೀಗಳಿಗೆ ಅವರ ಅಜ್ಜಿ ಚಿಕ್ಕಬಸಮ್ಮನವರು ಕಥೆಗಳನ್ನು ಹೇಳುತ್ತಾ ಬೆಳೆಸಿದ್ದರು. ಜಗತ್ತನ್ನು ಬೆಳೆಸಲು ಹೋಗುತ್ತಿದ್ದೀಯಾ, ಜಗತ್ತನ್ನು ಕುಟುಂಬವಾಗಿ ನೋಡು ಎಂದು ಹೇಳಿದ್ದರು. ಅದರಂತೆ ಶ್ರೀಗಳು ಕೊನೆಯವರೆಗೂ ಸಮಾಜ ಸೇವೆ ಮಾಡಿ ಅನರ್ಘ್ಯ ರತ್ನ ಎನಿಸಿಕೊಂಡರು. ವಿದ್ಯಾರ್ಥಿಗಳಾದ ನೀವೆಲ್ಲರೂ ಶ್ರೀಗಳವರ ಆಶೀರ್ವಾದದಿಂದ ಗಣ್ಯವ್ಯಕ್ತಿಗಳಾಗಿ ಎಂದು ಹಾರೈಸಿದರು.

ಇದೇ ಸಂದರ್ಭದಲ್ಲಿ 2024–25ನೇ ಸಾಲಿನ 10ನೇ ತರಗತಿಯಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಹಾಗೂ ತಾಲ್ಲೂಕು ಮಟ್ಟದ ಕ್ರೀಡೆಯಲ್ಲಿ ವಿಜೇತರಾದವರಿಗೆ ಬಹುಮಾನ ಮತ್ತು ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು. ಶ್ರೀ ಶಿವರಾತ್ರಿ ರಾಜೇಂದ್ರ ತಂಡದ ವಿದ್ಯಾರ್ಥಿಗಳು ರಾಜೇಂದ್ರ ಶ್ರೀಗಳವರ ವ್ಯಕ್ತಿತ್ವ ಮತ್ತು ಉದಾತ್ತ ಮನೋಭಾವ ಕುರಿತಾದ ನಾಟಕ ಪ್ರದರ್ಶಿಸಿದರು. ಮಂತ್ರ ಮಹರ್ಷಿ ತಂಡದ ವಿದ್ಯಾರ್ಥಿಗಳು ಗುರುಗಳ ಸ್ಮರಣೆಯ ಮಾಡೋಣ, ಗುರುರಾಜೇಂದ್ರರ ನೆನೆಯೋಣ ಎಂಬ ಭಕ್ತಿಗೀತೆಗೆ ನೃತ್ಯ



ಮಾಡಿದರು. ಆದಿಶಿವಯೋಗಿ ತಂಡದ ವಿದ್ಯಾರ್ಥಿಗಳು ಶ್ರೀಗಳನ್ನು ಕುರಿತು ಭಾಷಣ ಮಾಡಿದರು. ಘನಲಿಂಗ ಶಿವಯೋಗಿ ತಂಡದ ವಿದ್ಯಾರ್ಥಿಗಳು ಶಿವರಾತ್ರಿ ರಾಜೇಂದ್ರ ಶರಣು ಶರಣು ಎಂಬ ಸಮೂಹ ಗಾಯನವನ್ನು ಹಾಡಿದರು.

ಕಾರ್ಯಕ್ರಮದಲ್ಲಿ ಮುಖ್ಯಶಿಕ್ಷಕರಾದ ಶ್ರೀಮತಿ ಹೆಚ್.ಜಿ. ಮಂಜುಳರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಸಹ ಶಿಕ್ಷಕರಾದ ಎನ್. ಚಾಮರಾಜಪ್ಪ ಸ್ವಾಗತಿಸಿದರು.

---



ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ನಡೆದ 283ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ವಿದುಷಿ ಆದಿತಿ ಬಿ. ಪ್ರಹ್ಲಾದ್‌ರವರು ಗಾಯನ ಪ್ರಸ್ತುತಿಪಡಿಸಿದರು. ಪಕ್ಕವಾದ್ಯದಲ್ಲಿ ವಿದ್ವಾನ್ ಜಿ.ಎಸ್. ರಾಮಾನುಜಂ, ವಿದ್ವಾನ್ ವಿ.ಎಸ್. ರಮೇಶ್ ಹಾಗೂ ವಿದುಷಿ ಸಿ.ವಿ. ಶ್ರುತಿರವರುಗಳಿದ್ದಾರೆ (7 ಸೆಪ್ಟೆಂಬರ್ 2025)

## ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಮೈಸೂರು




ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110 ನೆಯ ಜಯಂತಿ ಮಹೋತ್ಸವವನ್ನು ದಿನಾಂಕ 26.9.2025ರಂದು ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ ಆವರಣದಲ್ಲಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರ ಮಠರವರು ಮಾತನಾಡಿ, ಶಿಕ್ಷಣದಿಂದ ಮಾತ್ರ ಸಮಾಜದ ಏಳ್ಗೆ ಸಾಧ್ಯ ಎಂದು ನಂಬಿದ್ದ ಪೂಜ್ಯರು, ದೀನ ದಲಿತರ, ಬಡವರ ಹಾಗೂ ಆರ್ಥಿಕವಾಗಿ ಹಿಂದುಳಿದ ಎಲ್ಲ ವರ್ಗದ ವಿದ್ಯಾರ್ಥಿಗಳಿಗೆ ಊಟ, ವಸತಿ ಹಾಗೂ ವಿದ್ಯಾಭ್ಯಾಸ ಕೊಟ್ಟು ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಕಾರಣೀಭೂತರಾದರೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಇನ್ನೋರ್ವ ಅತಿಥಿಗಳಾಗಿ ನುಡಿನಮನ ಸಲ್ಲಿಸಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಲೆಕ್ಕ ಪರಿಶೋಧನಾ ವಿಭಾಗದ ನಿರ್ದೇಶಕ ಶ್ರೀ ಕೆ.ಆರ್. ಸಂತಾನಂರವರು, ಸುತ್ತೂರು ಶ್ರೀಮಠ ಬೆಳೆದು ಬಂದ ಬಗ್ಗೆ, ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಅವಿಸ್ಮರಣೀಯ ಕೊಡುಗೆಯನ್ನು ನೆನೆಸಿಕೊಂಡರು. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಆದರ್ಶ, ಮೌಲ್ಯಯುತ ಜೀವನ, ಸಾಮಾಜಿಕ ಕಳಕಳಿ ಅನನ್ಯವಾದುದು. ಇಂದಿನ ಯುವಜನತೆ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳು, ಶ್ರೀಗಳ ಆದರ್ಶ, ದೂರದರ್ಶಿತ್ವ, ನಾಯಕತ್ವದ ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಪಾಲಿಸಬೇಕೆಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರಿನ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಸರ್‌ಬೇಶ್ವರ್‌ಕರ್‌ರವರು ಮಾತನಾಡಿ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ತತ್ವ ಆದರ್ಶಗಳನ್ನು ವಿದ್ಯಾರ್ಥಿಗಳು, ಬೋಧಕರು, ಅಧಿಕಾರಿ ವರ್ಗದವರು ಎಲ್ಲರೂ ಅಳವಡಿಸಿಕೊಂಡು ಪಾಲಿಸಿದಾಗ ಆರೋಗ್ಯಯುತ, ಮೌಲ್ಯಯುತ ಸಮಾಜದ ನಿರ್ಮಾಣ

ಸಾಧ್ಯ ಎಂದು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ ನಿವೃತ್ತ ವೈದ್ಯಕೀಯ ಅಧೀಕ್ಷಕರೂ ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಗೌರವ ಪ್ರಾಧ್ಯಾಪಕರಾದ ಡಾ. ಬಿ. ಗುರುಬಸವರಾಜರವರನ್ನು ಸನ್ಮಾನಿಸಲಾಯಿತು.

ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 110ನೇ ಜಯಂತ್ಯೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ವಿವಿಧ ಶೈಕ್ಷಣಿಕ, ಸಾಂಸ್ಕೃತಿಕ ಸ್ಪರ್ಧೆಗಳು ಹಾಗೂ ಚಟುವಟಿಕೆಗಳು, ವಿಚಾರ ಸಂಕಿರಣ, ರಕ್ತದಾನ ಶಿಬಿರ ಇವುಗಳ ಕುರಿತು ವಿವಿಧ ವಿಭಾಗಗಳ ಸಂಚಾಲಕರು ವರದಿಯನ್ನು ಮಂಡಿಸಿದರು.

ಇದೇ ಸಂದರ್ಭದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಕು. ಸುಮೇಧಾ ಭಟ್ ಹಾಗೂ ಕು. ಅಶ್ಮಿಕಾರವರು ಪ್ರಾರ್ಥಿಸಿದರು. ಉಪ ಪ್ರಾಂಶುಪಾಲರು ಹಾಗೂ ಪ್ರಾಧ್ಯಾಪಕರಾದ ಡಾ. ಶಿವಪ್ರಸಾದ್ ಹುಡೇದ ಸ್ವಾಗತಿಸಿದರು. ಪ್ರಾಧ್ಯಾಪಕರಾದ ಡಾ. ಡಿ.ಟಿ. ಉಷಾ ವಂದಿಸಿದರು. ಸಹ ಪ್ರಾಧ್ಯಾಪಕರಾದ ಡಾ. ಪಿ.ಪಿ. ಅಯ್ಯಣ್ಣ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಹೂವಿನ ಹಡಗಲಿ



ಹೂವಿನಹಡಗಲಿಯಲ್ಲಿರುವ ಜೆಎಸ್‌ಎಸ್ ಬಿ.ಇಡಿ. ಕಾಲೇಜು ಮತ್ತು ಪಬ್ಲಿಕ್ ಶಾಲೆ ಇವುಗಳ ಸಂಯುಕ್ತಾಶ್ರಯದಲ್ಲಿ ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವವನ್ನು ದಿನಾಂಕ 20.9.2025ರಂದು ಆಚರಿಸಲಾಯಿತು.

ಶ್ರೀ ಗವಿಸಿದ್ದೇಶ್ವರ ಶಾಖಾಮಠದ ಪೀಠಾಧಿಪತಿಗಳಾದ ನಿ.ಪ್ರ.ಸ್ವ. ಡಾ. ಶ್ರೀ ಹಿರಿಶಾಂತವೀರ ಸ್ವಾಮಿಗಳು ಸಮಾರಂಭವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಶ್ರೀಗಳವರು ತಮ್ಮ ಆಶೀರ್ವಚನದಲ್ಲಿ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಸಮಾಜದಲ್ಲಿ ಬಡವ, ಶ್ರೀಮಂತರೆನ್ನದೆ ಎಲ್ಲರಿಗೂ ಅನ್ನ

ಮತ್ತು ಅಕ್ಷರವನ್ನು ಧಾರೆಯೆರೆದರು. ಪೂಜ್ಯರು ಎಡಗೈಯಲ್ಲಿ ಲಿಂಗ ಬಲಗೈಯಲ್ಲಿ ದಾಸೋಹದ ಅನ್ನವನ್ನು ಹಿಡಿದು ಜೀವನದುದ್ದಕ್ಕೂ ಸಮಾಜ ಸೇವೆಗೆ ನಿಂತ ಮಹಾ ಸಂತರಾಗಿದ್ದಾರೆ. ತಮ್ಮ ಸಂಕಲ್ಪದಂತೆ ಸಮಾಜೋಪಯೋಗಿಯಾದ ಹತ್ತಾರು ಮಹತ್ಕಾರ್ಯಗಳನ್ನು ಪೂರೈಸಿದ ಕೀರ್ತಿ ಶ್ರೀ ರಾಜೇಂದ್ರ ಮಹಾಸ್ವಾಮಿಗಳವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹೊಳಗುಂದಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಶ್ರೀ ಅಂಚಿ ದಡಾರಪ್ಪರವರು, ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಗಳು ತಮ್ಮ ಜೀವಿತಾವಧಿಯ ಅನೇಕ ಕಷ್ಟಮಯ ಸನ್ನಿವೇಶಗಳಲ್ಲಿಯೂ ಆದರ್ಶವಾಗಿ ಬದುಕಿದವರು. ಅವರ ಆದರ್ಶ ಮಾರ್ಗವೇ ನಮಗೆಲ್ಲಾ ದಾರಿದೀಪವಾಗಿದೆ ಎಂದು ಹೇಳಿದರು.

ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಶ್ರೀ ಎನ್. ಗುರುಸ್ವಾಮಿಯವರು ಮಾತನಾಡಿ, ಗ್ರಾಮೀಣ ಪ್ರದೇಶದಿಂದ ಬಂದು ಪದವಿ ಶಿಕ್ಷಣಕ್ಕಾಗಿ ಮೈಸೂರಿನ ಜೆಎಸ್‌ಎಸ್ ಪದವಿ ಕಾಲೇಜಿಗೆ ಪ್ರವೇಶ ಪಡೆದಾಗ ರಾಜೇಂದ್ರ ಶ್ರೀಗಳ ಕೃಪೆಯಿಂದ ಜೆಎಸ್‌ಎಸ್ ಉಚಿತ ವಿದ್ಯಾರ್ಥಿ ನಿಲಯದಲ್ಲಿ ವಾಸ್ತವ್ಯ ಹೂಡಿ ವಿದ್ಯಾಭ್ಯಾಸ ಮುಂದುವರೆಸಲು ಸಾಧ್ಯವಾಯಿತು. ಇದೇ ರೀತಿ ಲಕ್ಷಾಂತರ ಗ್ರಾಮೀಣ ಮಕ್ಕಳಿಗೆ ಶ್ರೀಗಳು ಅನ್ನ ಮತ್ತು ವಸತಿ ನೀಡಿ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕೆ ನಾಂದಿ ಹಾಡಿದ್ದಾರೆ ಎಂದು ಹೇಳಿದರು.

ಪಬ್ಲಿಕ್ ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಸಹಾಯಕ ಪ್ರಾಧ್ಯಾಪಕರಾದ ಡಾ. ಅಶೋಕ್ ಈಡಿಗರ್ ಸ್ವಾಗತಿಸಿದರು. ವಿದ್ಯಾರ್ಥಿನಿ ಕೆ. ಭೂಮಿಕಾ ವಂದಿಸಿದರು. ಹಾಗೂ ಪಬ್ಲಿಕ್ ಶಾಲೆಯ ಕನ್ನಡ ಶಿಕ್ಷಕರಾದ ಶ್ರೀ ಎಂ. ಮಂಜುನಾಥ್ ಹಿರೇಮಠ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಧಾರವಾಡ

ಧಾರವಾಡದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ ದಿನಾಂಕ 19.9.2025ರಂದು ಶ್ರೀಮತ್ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಶ್ರೀಮನ್ಮಹಾರಾಜ 'ರಾಜಗುರುತಿಲಕ' ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವವನ್ನು ಆಚರಿಸಲಾಯಿತು.

ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರದ ಮೆರವಣಿಗೆಯನ್ನು ಕೆಸಿಡಿ ವೃತ್ತದ ಗಣಪತಿ ದೇವಸ್ಥಾನದಿಂದ ಜೆಎಸ್‌ಎಸ್ ಸಮೂಹ ಶಿಕ್ಷಣ ಸಂಸ್ಥೆಗಳ ಆವರಣದವರೆಗೆ ಹಮ್ಮಿಕೊಳ್ಳಲಾಯಿತು. ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಮಾನ್ಯ ಮಹಾಪೌರರಾದ ಶ್ರೀಮತಿ ಜ್ಯೋತಿ ಪಾಟೀಲರವರು ಮೆರವಣಿಗೆಗೆ ಚಾಲನೆ ನೀಡಿದರು. ಈ ಮೆರವಣಿಗೆಯಲ್ಲಿ ಕುಂಭಮೇಳ, ಜನಪದ ನೃತ್ಯಗಳು, ಜಗ್ಗಲಿಗಿ ಮೇಳ, ಡೊಳ್ಳುಕುಣಿತ ಮತ್ತು ಶಾಲಾ–ಕಾಲೇಜು ಮಕ್ಕಳ ಸಾಂಸ್ಕೃತಿಕ ನೃತ್ಯಗಳನ್ನು ಆಯೋಜಿಸಲಾಗಿತ್ತು.

ಸಂಸ್ಥೆಯ ಆವರಣದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ವಿಶ್ರಾಂತ ಪ್ರಾಧ್ಯಾಪಕರು ಮತ್ತು ಸಾಹಿತಿಗಳಾದ ಡಾ. ಸಂಗಮನಾಥ ಲೋಕಾಪೂರರವರು ಮಾತನಾಡಿ, ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಹಾಗೂ ಈಗಿರುವ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಮಠವನ್ನು ಬೆಳೆಸಲು ಪಟ್ಟ ಪರಿಶ್ರಮ ಮತ್ತು ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಮಾಡಿದ ತ್ಯಾಗ ಅಪರಿಮಿತವಾದುದು. ಕರ್ನಾಟಕದಲ್ಲಿ ಸ್ಥಾಪನೆಯಾದಂತಹ ಲಿಂಗಾಯತ




ಪ್ರಮುಖ ಮಠಗಳಿಂದ ಈ ನಾಡಿನಲ್ಲಿ ಹಲವು ಉನ್ನತ ಶಿಕ್ಷಣ ಸಂಸ್ಥೆಗಳು ಹುಟ್ಟಿಕೊಂಡವು. ಇದರಿಂದ ಅನೇಕ ಮಕ್ಕಳು ಉತ್ತಮ ಶಿಕ್ಷಣ ಪಡೆದು ದೇಶವಿದೇಶಗಳಲ್ಲಿ ತಮ್ಮದೇ ಆದ ನೆಲೆಯನ್ನು ಕಟ್ಟಿಕೊಂಡರು ಎಂದರು.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷರು ಹಾಗೂ ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ ಪುರಸ್ಕೃತರಾದ ಡಾ. ಎಂ. ಎಸ್. ಮೂರ್ತಿಯವರು ಮಾತನಾಡಿ, ಜಾತಿ, ಮತ, ಧರ್ಮ, ಪಂಗಡಗಳನ್ನು ಮೀರಿದ ಕಾಲಘಟ್ಟದಲ್ಲಿ ನಮ್ಮ ಪೂರ್ವಜರು ಆಚರಿಸಿದ ಜನಪದ ಸಂಪ್ರದಾಯವು ಮಹತ್ವವಾದುದು. ಸ್ವಾವಲಂಬಿ ಜೀವನವು ಅಂದಿನಿಂದಲೂ ನಮ್ಮಲ್ಲಿ ಪ್ರಚಲಿತವಿದೆ. ಇಂದಿನ ಆಧುನಿಕ ಪರಿಸ್ಥಿತಿಗನುಗುಣವಾಗಿ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು. ಯಾವ ಧರ್ಮ, ಮತ, ಪಂಗಡಗಳ ನಿರ್ಬಂಧವಿಲ್ಲದೇ ಎಲ್ಲರಲ್ಲಿಯೂ ಜ್ಞಾನದಾಸೋಹ ಮತ್ತು ಅನ್ನದಾಸೋಹವನ್ನು ಅನೇಕ ಬಡ ಮಕ್ಕಳಿಗೆ ನೀಡುತ್ತಿರುವ ಶ್ರೀಮತ್ಸುತ್ತೂರು ವೀರಸಿಂಹಾಸನ ಸಂಸ್ಥಾನ ಮಠದ ಕೊಡುಗೆ ಪವಿತ್ರವಾದುದು ಎಂದು ಹೇಳಿದರು.

ಜೆಎಸ್‌ಎಸ್ ಹಾಲಭಾವಿ ಕಲಾಶಾಲೆಯ ಮಕ್ಕಳು ರಚಿಸಿದ ಶಿಲ್ಪಗಳು ವೈವಿಧ್ಯಮಯವಾಗಿ ರೂಪುಗೊಂಡಿದ್ದು, ಧಾರ್ಮಿಕ, ಸಾಮಾಜಿಕ, ಜನಪದ ಅಂಶಗಳನ್ನು ಒಳಗೊಂಡಿವೆ ಎಂದರು.

ಜೆಎಸ್‌ಎಸ್ ಸಮೂಹ ಶಿಕ್ಷಣ ಸಂಸ್ಥೆಯ ಧಾರವಾಡ ವಿಭಾಗದ ಆಡಳಿತಾಧಿಕಾರಿಗಳಾದ ಶ್ರೀ ಎಸ್. ಜಿ. ಬಿರಾದಾರ ಮಾತನಾಡಿದರು. ಕಾರ್ಯಕ್ರಮದಲ್ಲಿ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಸದಸ್ಯರುಗಳಾದ ಶ್ರೀಮತಿ ಚಂದ್ರಕಲಾ ಕೊಟಬಾಗಿ ಹಾಗೂ ಶ್ರೀ ಶಿವು ಹಿರೇಮಠ ಪಾಲ್ಗೊಂಡಿದ್ದರು. ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ಪ್ರಾಚಾರ್ಯರಾದ ಡಾ. ಪಿ.ಎಂ. ಜೇಜೋ ವಂದಿಸಿದರು. ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಶಿಕ್ಷಕರುಗಳಾದ ಶ್ರೀ ಶಿವಕುಮಾರ ಜಮದಂಡಿ ಮತ್ತು ಶ್ರೀಮತಿ ಗೀತಾಂಜಲಿಯವರು ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಆಸ್ಪತ್ರೆ, ಮೈಸೂರು



ಜಾತಿ ಮತ ಧರ್ಮ ಭೇದವಿಲ್ಲದೆ ಜನ ಕಲ್ಯಾಣಕ್ಕೆ ದುಡಿದ ಮಠ ಶ್ರೀ ಸುತ್ತೂರು ಮಠ ಎಂದು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ಬಿ. ದಿನೇಶ್‌ರವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ದಿನಾಂಕ 27.9.2025 ರಂದು ನಡೆದ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೆಯ ಜಯಂತಿ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡುತ್ತಾ ಅವರು ತಿಳಿಸಿದರು. ಯಾರೇ ಮನೆಗೆ ಬಂದರು ಮೊದಲು ಊಟಮಾಡಿ ಎನ್ನುವುದು ನಮ್ಮ ಮೈಸೂರು ಭಾಗದ ಜನರ ಒಂದು ವಿಶೇಷ ಗುಣ. ಇದು ಈ ಭಾಗದ ಜನರ ಮಾತೃಹೃದಯ ಗುಣ. ಅದೇ ರೀತಿ ಜಾತಿ ಮತ ಭೇದವಿಲ್ಲದೆ ಎಲ್ಲರಿಗೂ ಅನ್ನ ದಾಸೋಹ ಅಕ್ಷರ ದಾಸೋಹ ನೀಡಿದ ಮಹಾನ್ ಸಂತ ಶ್ರೀ ರಾಜೇಂದ್ರ ಮಹಾಸ್ವಾಮಿಗಳು. ನನ್ನ ಮನಸ್ಸಿಗೆ ತುಂಬಾ ಆಳವಾಗಿ ಬೇರೂರಿದ ಒಂದು ಸಂದರ್ಭ ಎಂದರೆ ಪೂಜ್ಯ ಶ್ರೀಗಳು ತಮ್ಮ ಚಿನ್ನದ ಕರಡಿಗೆಯನ್ನು ಮಾರಿ ವಸತಿ ನಿಲಯದ ವಿದ್ಯಾರ್ಥಿಗಳಿಗೆ ಅನ್ನದಾಸೋಹ ಮಾಡಿದ್ದು. ಇದಕ್ಕಿಂತ ಹೃದಯವೈಶ್ಯಾಲತೆ ಬೇಕೆ.? ಕೋವಿಡ್ ಸಮಯದಲ್ಲಿ ಕೆಲವು ಆಸ್ಪತ್ರೆಗಳು – ಸಂಸ್ಥೆಗಳು ಉದ್ಯೋಗಿಗಳಿಗೆ ಸಂಬಳ ನೀಡದ ಪರಿಸ್ಥಿತಿಯಲ್ಲಿದ್ದಾಗ ಜೆಎಸ್‌ಎಸ್ ಸಂಸ್ಥೆ ಮಾತ್ರ ಎಲ್ಲಾ ಉದ್ಯೋಗಿಗಳಿಗೂ ಪ್ರತಿ ತಿಂಗಳು ನಿಗದಿತ ದಿನಾಂಕದಂದು ವೇತನವನ್ನು ನೀಡುತ್ತಿತ್ತು. ಪೂಜ್ಯ ಶ್ರೀಗಳು ಸಂಸ್ಥೆಯ ನೌಕರರನ್ನು ತಮ್ಮ ಮಕ್ಕಳಂತೆ ನೋಡಿಕೊಳ್ಳುತ್ತಿದ್ದಾರೆ. ಜೆಎಸ್‌ಎಸ್ ಸಂಸ್ಥೆ ಇಂದು ಸಾವಿರಾರು ಜನರಿಗೆ ಉದ್ಯೋಗ ನೀಡಿ ಅವರ ಕುಟುಂಬವರ್ಗದವರಿಗೆ ಸಹಕಾರಿಯಾಗಿದೆ ಎಂದು ತಿಳಿಸಿದರು.

ವೀರಶೈವ ಲಿಂಗಾಯತ ಮಹಾವೇದಿಕೆ ರಾಜ್ಯಾಧ್ಯಕ್ಷರಾದ ಶ್ರೀ ಪ್ರಶಾಂತ್ ಕಲ್ಲೂರ್‌ರವರು, ಶಿಕ್ಷಣದ ಬಗ್ಗೆ ಶ್ರೀಗಳಿಗೆ ಇದ್ದ ದೂರದೃಷ್ಟಿ ಶ್ಲಾಘನೀಯವಾದುದು. ಆ ಕಾಲದಲ್ಲೇ ಶ್ರೀಗಳು ಶಿಕ್ಷಣಕ್ಕೆ ಅಪಾರ ಪ್ರೋತ್ಸಾಹ ನೀಡಿದರು. ಪೂಜ್ಯರ ಸಾಧನೆಗಳು, ಆದರ್ಶಗಳನ್ನು

ಮುಂದಿನ ಪೀಳಿಗೆಗೆ ತಿಳಿಸಬೇಕು. ಮಹನೀಯರ ಚರಿತ್ರೆಯನ್ನು ಓದಿ ನಮ್ಮ ನಿತ್ಯ ಜೀವನದಲ್ಲಿ ಅವುಗಳನ್ನು ಅಳವಡಿಸಿಕೊಳ್ಳಬೇಕು. ಸಮಾಜಕ್ಕೆ ನಮ್ಮಿಂದಾಗುವ ಸೇವೆಯನ್ನು ಸಲ್ಲಿಸಬೇಕು. ಸುತ್ತೂರು ಶ್ರೀಮಠ ಕರ್ನಾಟಕದ ಕಿರೀಟವಾಗಿದೆ ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ತೋಟಗಾರಿಕೆ ವಿಭಾಗದ ನಿರ್ದೇಶಕ ಶ್ರೀ ಎನ್.ಎಂ ಶಿವಶಂಕರಪ್ಪನವರು ಪೂಜ್ಯ ಶ್ರೀಗಳು ಹಸಿದವರ, ದೀನ ದಲಿತರ, ಬಡವರ ಪಾಲಿಗೆ ದಾರಿದೀಪವಾಗಿದ್ದರು ಎಂದು ತಿಳಿಸಿದರು.

ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ.ಪಿ. ಮಧುರವರು, ಪೂಜ್ಯ ರಾಜೇಂದ್ರ ಶ್ರೀಗಳು ಲೋಕಕಲ್ಯಾಣಕ್ಕಾಗಿ ತಮ್ಮ ತಪಶ್ಶಕ್ತಿಯನ್ನು ಧಾರೆಯೆರೆದು ಲಕ್ಷಾಂತರ ಜನರಿಗೆ ಜ್ಞಾನಾನ್ನ ದಾಸೋಹ ನೀಡಿದ್ದಾರೆ. ಶ್ರೀಗಳು ತಮ್ಮ 70 ವರ್ಷದ ಜೀವಿತಾವಧಿಯನ್ನು ಶ್ರೀಗಂಧದಂತೆ ಸಮಾಜಕ್ಕೆ ಬಳಸಿದರು ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಗಣಕವಿಜ್ಞಾನ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ. ಡಿ.ಎಸ್. ಗುರು ಪೂಜ್ಯ ರಾಜೇಂದ್ರ ಶ್ರೀಗಳಿಗೆ ನುಡಿನಮನ ಸಲ್ಲಿಸುತ್ತಾ, ಪೂಜ್ಯ ರಾಜೇಂದ್ರ ಶ್ರೀಗಳು ಭವ್ಯ ಮತ್ತು ದಿವ್ಯಪೂರ್ಣ ಜೀವನ ನಡೆಸಿದವರು. ಕಷ್ಟದಲ್ಲಿ ಬೆಳೆದು ಸಾಧನೆಗೈದ ಮಹಾನ್ ತ್ಯಾಗಿಗಳು. ರಾಜೇಂದ್ರ ಶ್ರೀಗಳ ಸಮಾಜ ಸೇವೆ ಆಕಾಶದಷ್ಟು ಅಗಲ ಮತ್ತು ಸಮುದ್ರದಷ್ಟು ಆಳ. ಮೈಸೂರು ಭಾಗದ ಜನರಿಗೆ ಸೆಪ್ಟೆಂಬರ್ ತಿಂಗಳು ಬಂದರೆ ಹಬ್ಬದ ವಾತಾವರಣ, ಏಕೆಂದರೆ ಈ ತಿಂಗಳು ಗಣೇಶ ಹಬ್ಬ, ಶಿಕ್ಷಕರ ದಿನಾಚರಣೆ, ದಸರಾ ಹಬ್ಬ ಅದರ ಜೊತೆಗೆ ಪೂಜ್ಯ ರಾಜೇಂದ್ರ ಶ್ರೀಗಳ ಜನ್ಮ ದಿನೋತ್ಸವವನ್ನು ಹಬ್ಬದ ರೀತಿಯೇ ಆಚರಿಸುತ್ತಾರೆ. ಕ್ರಿ.ಶ. 1916 ಇಸವಿಯನ್ನು ಮೈಸೂರಿನ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡಬೇಕು. ಏಕೆಂದರೆ ಆ ವರ್ಷ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆ ಮತ್ತು ಪೂಜ್ಯ ರಾಜೇಂದ್ರ ಶ್ರೀಗಳು ಜನನವಾಗಿದೆ. ಇಂದು ಜೆಎಸ್‌ಎಸ್ ಸಂಸ್ಥೆ 4 ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲು ಸಾಧ್ಯವಾಗಿರುವುದು ಅಂದು ರಾಜೇಂದ್ರ ಶ್ರೀಗಳು ಹಾಕಿದ ಅಡಿಪಾಯದಿಂದ. ಪೂಜ್ಯ ರಾಜೇಂದ್ರ ಶ್ರೀಗಳು ಹುಟ್ಟಿನಿಂದಲೇ ಸನ್ಯಾಸಿಯಾದವರು, ಜಗದ್ಗುರುಗಳಾದವರು. ಅವರು ಕೇವಲ ಒಂದು ಜಾತಿಗೆ, ಧರ್ಮಕ್ಕೆ ಮಾತ್ರ ಶಿಕ್ಷಣ ಮತ್ತು ವಸತಿನಿಲಯಗಳನ್ನು ನೀಡದೇ ಸರ್ವರಿಗೂ ಸೌಲಭ್ಯವನ್ನು ನೀಡಿದವರು. ಸಮಸಮಾಜದ ನಿರ್ಮಾಣಕ್ಕೆ ಕಾರಣರಾದವರು. ಅಂದು ಅವರು ಮಾಡಿದ ಸೇವೆ ಮತ್ತು ಕಾಯಕದಿಂದ ಇಂದು ಜೆಎಸ್‌ಎಸ್ ಸಂಸ್ಥೆ ದೊಡ್ಡ ಆಲದ ಮರವಾಗಿ ಬೆಳೆದು ಲಕ್ಷಾಂತರ ಜನರ ಬದುಕಿಗೆ ಆಶ್ರಯವಾಗಿದೆ. ಅನಾಥರು, ಬಡವರೇ ಇವರಿಗೆ ದೇವರಾಗಿ ಕಂಡರು. ಬಡ ವಿದ್ಯಾರ್ಥಿಗಳ ಪರಿಸ್ಥಿತಿ ಮತ್ತು ಮನಸ್ಥಿತಿಯನ್ನು ಅರಿತು ಬಡವರು ವಿದ್ಯಾವಂತರಾಗಬೇಕು, ಹಸಿವನ್ನು ನೀಗಿಸಬೇಕು ಎಂದು ಅರಿತು ವಿದ್ಯಾರ್ಥಿನಿಲಯಗಳು ಮತ್ತು ಪ್ರಸಾದ ನಿಲಯಗಳನ್ನು ಸ್ಥಾಪಿಸಿ ಗ್ರಾಮೀಣ ಭಾಗದ ಜನರಿಗೆ ದಾರಿದೀಪವಾದರು. ವಿಚಾರದಲ್ಲಿ ಅಷ್ಟೇ ಅಲ್ಲದೆ ಆಚರಣೆಯಲ್ಲೂ ಸರ್ವರನ್ನೂ ಸಮನಾಗಿ ಕಂಡ 20ನೇ ಶತಮಾನದ ಮಹಾನ್ ಸಂತ ಪೂಜ್ಯ ರಾಜೇಂದ್ರ ಶ್ರೀಗಳು ಎಂದು ತಿಳಿಸಿದರು.

ಜಯಂತಿ ಮಹೋತ್ಸವದ ಅಂಗವಾಗಿ ಪ್ರತಿವರ್ಷದಂತೆ ವಿಶೇಷಚೇತನರಿಗೆ ಆಸರೆ ಗ್ರೂಪ್‌ವತಿಯಿಂದ ಉಚಿತವಾಗಿ ಕೃತಕಾಂಗಗಳನ್ನು ವಿತರಿಸಲಾಯಿತು. ಆಸರೆ ಗ್ರೂಪ್‌ನ ಶ್ರೀ ನಿತಿನ್, ಆಸ್ಪತ್ರೆಯ ಸಂದರ್ಶಕ ಸಮಿತಿ ಸದಸ್ಯರುಗಳು, ಜೆಎಸ್‌ಎಸ್ ಅಂಗಸಂಸ್ಥೆಗಳ ಅಧಿಕಾರಿಗಳು, ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯರುಗಳು ಹಾಗೂ ಸಿಬ್ಬಂದಿವರ್ಗದವರು ಪಾಲ್ಗೊಂಡಿದ್ದರು. ಶ್ರೀಮತಿ ಜಾನೆಟ್ ಮಥಾಯಿಸ್ ಕಾರ್ಯಕ್ರಮ ನಿರೂಪಿಸಿದರು.

□

## ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಅಕಾಡೆಮಿ, ಬೆಂಗಳೂರು

ಬೆಂಗಳೂರಿನ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಅಕಾಡೆಮಿಯಲ್ಲಿ ದಿನಾಂಕ 15.9.2025ರಂದು ಪರಮಪೂಜ್ಯ ಜಗದ್ಗುರು ಡಾ ಶ್ರೀ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವ ಹಾಗೂ ಅಭಿಯಂತರರ ದಿನಾಚರಣೆಯನ್ನು ಆಚರಿಸಲಾಯಿತು.

ಗಣ್ಯರು ಜ್ಯೋತಿ ಬೆಳಗಿಸಿ ಪರಮಪೂಜ್ಯ ಜಗದ್ಗುರು ಡಾ ಶ್ರೀ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಹಾಗೂ ಸರ್ ಎಂ. ವಿಶ್ವೇಶ್ವರಯ್ಯರವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಸಲ್ಲಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಗಣಕಯಂತ್ರ ವಿಜ್ಞಾನ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ. ಡಿ.ಎಸ್. ಗುರುರವರು ಸಮಾರಂಭವನ್ನು ಉದ್ಘಾಟಿಸಿ ಒಂದು ಸಣ್ಣ ವಿದ್ಯಾರ್ಥಿನಿಲಯದಿಂದ ಆರಂಭವಾದ ಜೆಎಸ್‌ಎಸ್ ವಿದ್ಯಾಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದು 350ಕ್ಕೂ ಹೆಚ್ಚು ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ಆ ಮೂಲಕ ಪ್ರತಿವರ್ಷ ಲಕ್ಷಾಂತರ ವಿದ್ಯಾರ್ಥಿಗಳು ಜೆಎಸ್‌ಎಸ್ ಮಹಾವಿದ್ಯಾಪೀಠದ ಅಡಿಯಲ್ಲಿ ಶಿಕ್ಷಣದ ವಿವಿಧ ರಂಗಗಳಲ್ಲಿ ಪದವಿ ಪಡೆದು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡುತ್ತಿದ್ದಾರೆ. ರಾಜೇಂದ್ರ ಮಹಾಸ್ವಾಮಿಗಳವರು ತಮ್ಮ ಉತ್ತರಾಧಿಕಾರಿಯಾಗಿ ಅತ್ಯಂತ ಸಮರ್ಥರಾದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರನ್ನು ಈ ನಾಡಿಗೆ ಬಹುದೊಡ್ಡ ಕೊಡುಗೆಯಾಗಿ ನೀಡಿದರು ಎಂದು ತಿಳಿಸಿದರು.

ಆಡಳಿತಾಧಿಕಾರಿಗಳಾದ ಶ್ರೀ ಸಿ.ಎಸ್ ವೀರೇಶ್, ಪ್ರಾಧ್ಯಾಪಕರಾದ ಡಾ. ಪಿ.ಎಂ. ರೇಖಾ ಮಾತನಾಡಿದರು. ಕು. ಸಹನಾ ಪ್ರಾರ್ಥಿಸಿದರು. ಶ್ರೀ ಡಿ. ಮಹೇಶ್‌ಕುಮಾರ್ ಸ್ವಾಗತಿಸಿದರು. ಡಾ. ಶಶಿಧರ್ ವಂದಿಸಿದರು. ಡಾ. ಎಂ. ಕವಿತಾ ಕಾರ್ಯಕ್ರಮ ನಿರೂಪಿಸಿದರು. ಡೀನ್‌ಗಳು, ವಿಭಾಗಗಳ ಮುಖ್ಯಸ್ಥರುಗಳು ಹಾಗೂ ಸಂಸ್ಥೆಯ ಎಲ್ಲ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ವಿಭಾಗ ಮಟ್ಟಕ್ಕೆ ಆಯ್ಕೆ



ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ಮೈಸೂರಿನ ಸ್ಕೌಟ್ಸ್ ಅಂಡ್ ಗೈಡ್ಸ್ ಭವನದಲ್ಲಿ ನಡೆದ ಜಿಲ್ಲಾಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಸುತ್ತೂರು ಶ್ರೀಮಠದ ವಸತಿ ಶಾಲೆಯ ಹನ್ನೆರಡು ಮಂದಿ ವಿದ್ಯಾರ್ಥಿಗಳು ಉಡುಪಿಯಲ್ಲಿ ನಡೆಯುವ ವಿಭಾಗ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಚಿತ್ರದಲ್ಲಿ ವಿದ್ಯಾರ್ಥಿಗಳೊಂದಿಗೆ ತರಬೇತಿ ನೀಡಿದ ಯೋಗ ಶಿಕ್ಷಕರು ಹಾಗೂ ದೈಹಿಕ ಶಿಕ್ಷಣ ಶಿಕ್ಷಕರುಗಳಿದ್ದಾರೆ.

## ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರ, ಮೇರಿಲ್ಯಾಂಡ್, ಅಮೆರಿಕ



ಅಮೆರಿಕದ ಮೇರಿಲ್ಯಾಂಡ್‌ನ ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರಕ್ಕೆ ಲೆಫ್ಟಿನೆಂಟ್ ಗವರ್ನರ್ ಶ್ರೀಮತಿ ಅರುಣಾ ಮಿಲ್ಲರ್‌ರವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದರ್ಶನ ಪಡೆದು ಮಿಷನ್ನಿನ ಸೇವಾಕಾರ್ಯಗಳನ್ನು ಮೆಚ್ಚಿ ಮೇರಿಲ್ಯಾಂಡ್ ರಾಜ್ಯಪಾಲರ ಪ್ರಶಂಸಾಪತ್ರವನ್ನು ನೀಡಿದರು. ಶ್ರೀಮತಿ ಪ್ರತಿಭಾ ಸೆಲ್ವ, ಶ್ರೀ ಸೆಲ್ವ ಜಯರಾಮನ್, ಶ್ರೀ ಡೇವಿಡ್ ಮಿಲ್ಲರ್, ಶ್ರೀ ಸುಭಾಷ್ ಮಲಗನ್, ಶ್ರೀ ಸಂಜಾತ್ ಸೂಲಕುಂಟೆ, ಶ್ರೀ ರಾಜೀವ್ ಮಹಾಜನ್ ಹಾಗೂ ಡಾ. ಬಿ. ಸುರೇಶ್ ಮೊದಲಾದವರಿದ್ದಾರೆ (21 ಸೆಪ್ಟೆಂಬರ್ 2025)

ಅಮೆರಿಕದ ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರಕ್ಕೆ ಮೇರಿಲ್ಯಾಂಡ್‌ನ ಲೆಫ್ಟಿನೆಂಟ್ ಗವರ್ನರ್ ಶ್ರೀಮತಿ ಅರುಣಾ ಮಿಲ್ಲರ್‌ರವರು ದಿನಾಂಕ 21.9.2025ರಂದು ಆಗಮಿಸಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರನ್ನು ಭೇಟಿ ಮಾಡಿದರು. ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರವು ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸುತ್ತಿರುವ ಸೇವೆಗಾಗಿ ಮೇರಿಲ್ಯಾಂಡ್ ರಾಜ್ಯಪಾಲರ ಪ್ರಶಂಸನಾ ಪತ್ರವನ್ನು ನೀಡಿದರು. ಶ್ರೀಮತಿ ಅರುಣಾ ಮಿಲ್ಲರ್‌ರವರು ಸಂಸ್ಥೆಯಿಂದ ಭಾರತ, ಅಮೆರಿಕ ಮತ್ತು ಇತರ ದೇಶಗಳಲ್ಲಿ ಕೈಗೊಂಡಿರುವ ಸಾಮಾಜಿಕ ಕಾರ್ಯಗಳನ್ನು ಶ್ಲಾಘಿಸಿದರು. ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರವು ಅಮೆರಿಕದಲ್ಲಿನ ಅನಿವಾಸಿ ಭಾರತೀಯರಿಗಾಗಿ ಕೈಗೊಂಡಿರುವ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಭಾರತದಲ್ಲಿನ ಜೆಎಸ್‌ಎಸ್ ಸಂಸ್ಥೆಗಳಿಗೆ ಭೇಟಿ ನೀಡಲು ಬಹಳ ಉತ್ಸುಕರಾಗಿರುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಶ್ರೀ ಡೇವಿಡ್ ಮಿಲ್ಲರ್, ಶ್ರೀ ಸೆಲ್ವ ಜಯರಾಮನ್, ಶ್ರೀ ಸುಭಾಷ್ ಮಲಗನ್, ಡಾ. ಬಿ. ಸುರೇಶ್, ಶ್ರೀ ಸಂಜಾತ್ ಸೂಲಕುಂಟೆ, ಶ್ರೀ ರಾಜೀವ್ ಮಹಾಜನ್, ಶ್ರೀ ಆರ್. ಮಹೇಶ್ ಮೊದಲಾದವರು ಉಪಸ್ಥಿತರಿದ್ದರು.

## ಸೋಲನ್ನು ಸವಾಲಾಗಿ ಸ್ವೀಕರಿಸಿ ಮುನ್ನಡೆಯಬೇಕು

ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ ಬೆಳೆಯುತ್ತದೆ. ಪ್ರಶಸ್ತಿ ಮತ್ತು ಬಹುಮಾನಗಳಿಗೆ ಮಾತ್ರವೇ ಸ್ಪರ್ಧೆಗಳಲ್ಲಿ ಭಾಗವಹಿಸಬಾರದು. ಸೋಲೂ ಕೂಡ ಸ್ವೀಕಾರಾರ್ಹವೇ ಆಗಿರುತ್ತದೆ. ಆದ್ದರಿಂದ ಸೋಲನ್ನು ಸವಾಲಾಗಿ ಸ್ವೀಕರಿಸಿ ಮುನ್ನಡೆಯಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತರವರು ತಿಳಿಸಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸ್ನಾತಕ ವಿಭಾಗದ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು. ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಸ್ವಯಂಪ್ರೇರಿತರಾಗಿ ಭಾಗವಹಿಸಬೇಕು. ಸಾಧ್ಯವಾದಷ್ಟು ಮೊಬೈಲ್ ಎಂಬ ಕೆಟ್ಟ ಸಂಸ್ಕೃತಿಯಿಂದ ಹೊರಬಂದು ಪುಸ್ತಕ ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕು. ಮಾರ್ಗದರ್ಶಕರ ಅಗತ್ಯತೆ ಇಂದಿನ ವಿದ್ಯಾರ್ಥಿಗಳಿಗೆ ಬೇಕಿದೆ. ಮಾರ್ಗದರ್ಶನವು ಇಂದಿನ ಪೀಳಿಗೆಯನ್ನು ಉತ್ತಮ ದಿಕ್ಕಿನೆಡೆಗೆ ಕೊಂಡೊಯ್ಯಬಲ್ಲದು. ಶರಣಾಗತಿಯು ವಿಕಸನಕ್ಕೆ ಸಹಾಯಕವಾಗುತ್ತದೆ. ಶಿಸ್ತು ಮತ್ತು ಶರಣಾಗತಿಯಿಂದ ಉತ್ತಮ ಭವಿಷ್ಯ ಸಾಧ್ಯ. ಸುಸಂಸ್ಕೃತಿಯಿಂದ ಸರಳವಾಗಿ ಬದುಕುವುದನ್ನು ಕಲಿಯಬೇಕು ಎಂದು ತಿಳಿಸಿದರು.

ಜಿಲ್ಲಾ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ಸಹಾಯಕ ತರಬೇತುದಾರರು ಮತ್ತು ರಾಜ್ಯಮಟ್ಟದ ಹಾಕಿ ಕ್ರೀಡಾಪಟು ಕು. ಎಸ್.ಪಿ. ಕೃತ್ತಿಕಾರವರು ಮಾತನಾಡಿ, ಶಿಸ್ತು, ಸಮರ್ಪಣೆ ಮತ್ತು ನಿರ್ಧಾರ ಈ ಸೂತ್ರಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕು. ಇವು ವಿದ್ಯಾರ್ಥಿಗಳನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢಗೊಳಿಸುತ್ತವೆ. ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳು ಬದುಕಿನ ಸೋಲುಗೆಲುವನ್ನು ಸಮಾನವಾಗಿ ಸ್ವೀಕರಿಸುವಂತೆ ಮಾಡುತ್ತವೆ ಎಂದರು.

ಪ್ರಾಂಶುಪಾಲರಾದ ಡಾ. ಎಂ. ಪ್ರಭುರವರು ಮಾತನಾಡಿ, ಕಲೆ, ಸಾಹಿತ್ಯ ಮತ್ತು ಮನರಂಜನಾ ಮಾಧ್ಯಮಗಳನ್ನು ಇಂತಹ ವೇದಿಕೆಗಳು ಸಂಸ್ಕೃತಿಗೆ ಅಭಿಮುಖವಾಗಿ ಬೆಳೆಸುವುದರ ಜೊತೆಗೆ ಯುವ ಪ್ರತಿಭೆಗಳನ್ನು ಸಮಾಜಕ್ಕೆ ಪರಿಚಯಿಸುತ್ತವೆ. ಕನ್ನಡ ಚಲನಚಿತ್ರರಂಗದ ಕಲಾವಿದರು ಕಲೆಯ ಮೂಲಕ ಕನ್ನಡ ಸಂಸ್ಕೃತಿಯನ್ನು ಉಳಿಸಿ ಬೆಳೆಸಿ ಹೋಗಿದ್ದಾರೆ. ಅಂತಹವರ ಬದುಕು ನಮಗೆ ಆದರ್ಶವಾಗಬೇಕು. ವಚನ ಸಾಹಿತ್ಯ, ನಮ್ಮ ಬದುಕಿನ ಭಾಗವಾಗಿದ್ದು ಅದನ್ನು ಅರ್ಥ ಮಾಡಿಕೊಂಡು ನೀವು ಬೆಳೆಯಬೇಕು ಎಂದರು.

ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಮಾತನಾಡಿ, ನಮ್ಮ ಕಾಲೇಜಿನಲ್ಲಿ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ಸಮಾನ ಅವಕಾಶಗಳನ್ನು ಕಲ್ಪಿಸಲಾಗಿದೆ. ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿಗಳಲ್ಲಿ ಸಂಘಟನಾ ಚತುರತೆ, ನಾಯಕತ್ವ ಗುಣ, ವಿಮರ್ಶಾತ್ಮಕ ದೃಷ್ಟಿಕೋನ, ವಾಕ್ಚಾತುರ್ಯ, ಧೈರ್ಯ, ಸ್ಥೈರ್ಯ, ನೈತಿಕತೆ ಮೊದಲಾದ ಉತ್ತಮ ಗುಣಗಳು ವೃದ್ಧಿ ಹೊಂದುತ್ತವೆ. ಕ್ರೀಡೆ ದೇಹವನ್ನು ಸದೃಢವಾಗಿಸುತ್ತದೆ ಮತ್ತು ಸೋಲನ್ನು ಸಮಾನವಾಗಿ ಸ್ವೀಕರಿಸುವ ಗುಣವನ್ನು ಬೆಳೆಸುತ್ತದೆ. ಆತ್ಮಗೌರವ ಮತ್ತು ಆತ್ಮವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಶಿಸ್ತನ್ನು ಬೆಳೆಸುತ್ತದೆ. ಬದುಕಿನಲ್ಲಿ ಗುರಿ ಇರಬೇಕು. ಗುರಿ ಮಹತ್ವದ್ದಾಗಿರಬೇಕು ಎಂದರು.

ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ವೇದಿಕೆ ಸಂಚಾಲಕರಾದ ಶ್ರೀ ವಿ. ಶಿವ, ಕ್ರೀಡಾ ವೇದಿಕೆ ಸಂಚಾಲಕರಾದ ಶ್ರೀ. ಎಂ. ಕಾರ್ತಿಕ್ ಉಪಸ್ಥಿತರಿದ್ದರು. ಕು. ಸಿ. ಪವಿತ್ರ ಮತ್ತು ಕು. ಎಚ್.ಕೆ. ಐಶು ಪ್ರಾರ್ಥಿಸಿದರು. ಕು. ಕೆ.ಎನ್. ಲೇಖನ ಸ್ವಾಗತಿಸಿದರು. ಕು. ಕೆ.ಕೆ. ಕುಸುಮ ವಂದನಾರ್ಪಣೆ ಮಾಡಿದರು. ಕು. ಡಿ.ಕೆ. ಸುಪ್ರಿಯ ಕಾರ್ಯಕ್ರಮ ನಿರೂಪಿಸಿದರು.

## ಸುತ್ತೂರು ಜೆಎಸ್‌ಎಸ್ ವಸತಿ ಶಾಲೆಯಲ್ಲಿ ರಕ್ತಚಂದ್ರಗ್ರಹಣ ಕುರಿತ ಕಾರ್ಯಕ್ರಮ

ಸುತ್ತೂರಿನ ಜೆಎಸ್‌ಎಸ್ ಶಾಲೆಯಲ್ಲಿ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ, ಜ್ಞಾನ ಸಂಪನ್ಮೂಲ ಕೇಂದ್ರದ ವತಿಯಿಂದ ದಿನಾಂಕ 7.9.2025ರಂದು ರಕ್ತಚಂದ್ರಗ್ರಹಣ ವೀಕ್ಷಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಗ್ರಾವಿಟಿ ಸೈನ್ಸ್ ಫೌಂಡೇಷನ್ನಿನ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎ.ಎಸ್ ಅಭಿಷೇಕ್‌ರವರು ಆಕಾಶ ಕಾಯಗಳು, ಗ್ರಹಗಳು, ನಕ್ಷತ್ರಗಳು, ನಕ್ಷತ್ರ ಪುಂಜಗಳು, ಉಪಗ್ರಹಗಳು, ಚಂದ್ರಗ್ರಹಣ, ಸೂರ್ಯಗ್ರಹಣ, ಖಗೋಳ ವಿಸ್ಮಯ ಹೀಗೆ ಹಲವಾರು ವಿಷಯಗಳ ಕುರಿತು ತಿಳಿಸಿ, ಮಕ್ಕಳ ಕುತೂಹಲದ ಪ್ರಶ್ನೆಗಳಿಗೆ ಉತ್ತರಿಸಿದರು. ನಂತರ ರಾತ್ರಿ 9.30 ಗಂಟೆಯಿಂದ 12.30ರವರೆಗೆ ಅಕ್ಕಮಹಾದೇವಿ ಬಾಲಕಿಯರ ವಿದ್ಯಾರ್ಥಿನಿಲಯದ ಮೇಲ್ಚಾವಣಿಯಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೂ ದೂರದರ್ಶಕದ ಸಹಾಯದಿಂದ ಸಂಪೂರ್ಣ ರಕ್ತ ಚಂದ್ರಗ್ರಹಣ ವೀಕ್ಷಿಸಲು ಅವಕಾಶ ಕಲ್ಪಿಸಿಕೊಡಲಾಗಿತ್ತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಕುತೂಹಲದಿಂದ ಭಾಗವಹಿಸಿ ಅನೇಕ ಸಂಶಯಗಳನ್ನು ಸಂಪನ್ಮೂಲ ವ್ಯಕ್ತಿಗಳಿಂದ ನಿವಾರಿಸಿಕೊಂಡರು ಕಾರ್ಯಕ್ರಮದಲ್ಲಿ ಸಹಾಯಕ ಸಂಯೋಜನಾಧಿಕಾರಿಗಳಾದ ಶ್ರೀ ವೀರಭದ್ರಯ್ಯರವರು, ಜ್ಞಾನ ಸಂಪನ್ಮೂಲ ಕೇಂದ್ರದ ಶಿಕ್ಷಕರುಗಳಾದ ಶ್ರೀ ವಿ. ವಿನೋದ್‌ಕುಮಾರ್, ಶ್ರೀ ಭರತ್, ಪ್ರೌಢಶಾಲಾ ಶಿಕ್ಷಕರು ವಿದ್ಯಾರ್ಥಿನಿಲಯಗಳ ನಿಲಯಪಾಲಕರುಗಳು ಉಪಸ್ಥಿತರಿದ್ದರು.

## ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಪೆಲ್ವಿಕ್ ಹೆಲ್ತ್ ಕ್ಲಿನಿಕ್ ಉದ್ಘಾಟನೆ

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಪೆಲ್ವಿಕ್ ಹೆಲ್ತ್ ಕ್ಲಿನಿಕನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಉದ್ಘಾಟಿಸಿ ಮಾತನಾಡುತ್ತ ಪುರುಷರು ಹಾಗೂ ಮಹಿಳೆಯರಲ್ಲಿ ಸಾಮಾನ್ಯವಾಗಿ ಕಂಡುಬರುವ ಪೆಲ್ವಿಕ್ ಫ್ಲೋರ್ ಸಮಸ್ಯೆಗಳಿಗೆ ಸೂಕ್ತ ಚಿಕಿತ್ಸೆ ಪಡೆಯುವುದು ಅಗತ್ಯ. ಮಹಿಳೆಯರಲ್ಲಿ ಗರ್ಭಧಾರಣೆ, ಹೆರಿಗೆ ಸಮಯದಲ್ಲಿ ಈ ಸ್ನಾಯುಗಳ ಮೇಲೆ ಹೆಚ್ಚು ಒತ್ತಡ ಬರುತ್ತದೆ ಹಾಗೂ ಪುರುಷರಲ್ಲಿ ವಯಸ್ಸಾದ ಮೇಲೆ ಅಥವಾ ಪ್ರೋಸ್ಟೇಟ್ ಶಸ್ತ್ರಚಿಕಿತ್ಸೆಯ ನಂತರ ಹೊಟ್ಟೆಯ ಕೆಳಭಾಗದಲ್ಲಿರುವ ಸ್ನಾಯುಗಳ ದುರ್ಬಲತೆಯಿಂದ ಕಂಡುಬರುವ ನೋವಿಗೆ ಫಿಜಿಯೋಥೆರಪಿ ಮೂಲಕ ಚಿಕಿತ್ಸೆ ನೀಡಲಾಗುತ್ತದೆ. ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಅತ್ಯುತ್ತಮ ವೈದ್ಯರುಗಳ ತಂಡವಿದ್ದು ಉತ್ತಮ ಚಿಕಿತ್ಸೆಯನ್ನು ಸಾರ್ವಜನಿಕರು ಪಡೆಯಬಹುದು ಎಂದು ತಿಳಿಸಿದರು.

ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್‌ರವರು, ಈ ದಿನ ವಿಶ್ವ ಫಿಜಿಯೋಥೆರಪಿ ದಿನಾಚರಣೆ ಇದೇ ದಿನ ವಿಶೇಷವಾಗಿ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಪೆಲ್ವಿಕ್ ಹೆಲ್ತ್ ಕ್ಲಿನಿಕ್ ಪ್ರಾರಂಭವಾಗಿದ್ದು ಇದು ಫಿಜಿಯೋಥೆರಪಿ ವಿಭಾಗದ ಜೊತೆಗೆ ಯುರಾಲಜಿ, ಪ್ರಸೂತಿ ಮತ್ತು ಸ್ತ್ರೀರೋಗ ಹಾಗೂ ರೇಡಿಯಾಲಜಿ ವಿಭಾಗದ ಸಹಭಾಗಿತ್ವದಲ್ಲಿ ನಡೆಯುವ ವಿಶೇಷ ಕ್ಲಿನಿಕ್ ಆಗಿದೆ. ಸ್ನಾಯುಗಳ ದೌರ್ಬಲ್ಯದಿಂದ ಅನಿಯಂತ್ರಿತ ಮಲ ಮತ್ತು ಮೂತ್ರ ವಿಸರ್ಜನೆಗೆ ಫಿಜಿಯೋಥೆರಪಿ ಮೂಲಕ ಚಿಕಿತ್ಸೆಯನ್ನು ನೀಡಲಾಗುತ್ತದೆ ಎಂದರು.

ಆಸ್ಪತ್ರೆಯ ನಿರ್ದೇಶಕರಾದ ಡಾ.ಸಿ.ಪಿ. ಮಧುರವರು ಪೆಲ್ವಿಕ್ ಫ್ಲೋರ್ ರಿಹ್ಯಾಬಿಲಿಟೇಷನ್ ಎಂಬ ಚಿಕಿತ್ಸೆಯನ್ನು ಪರಿಚಯಿಸಲಾಗಿದೆ. ಇದು ಪುರುಷರು ಮತ್ತು ಮಹಿಳೆಯರಲ್ಲಿ ಕಂಡುಬರುವ ವಿವಿಧ ಮೂತ್ರಜನಕಾಂಗ ಮತ್ತು ಅನಿಯಂತ್ರಿತ ಮೂತ್ರ ಸಂಬಂಧಿ ಸಮಸ್ಯೆಗಳಿಗೆ ಶಸ್ತ್ರಚಿಕಿತ್ಸೆಯಿಲ್ಲದ ಚಿಕಿತ್ಸೆಯನ್ನು ನೀಡುತ್ತದೆ. ಪೆಲ್ವಿಕ್ ಫ್ಲೋರ್‌ಗೆ ಸಂಬಂಧಿಸಿದ ಸಮಸ್ಯೆಗಳನ್ನು ಆರಂಭದಲ್ಲಿಯೇ ಗುರುತಿಸಿ ಚಿಕಿತ್ಸೆ ನೀಡಿದರೆ ಉತ್ತಮ ಫಲಿತಾಂಶಗಳನ್ನು ಪಡೆಯಬಹುದು ಎಂದರು. ಆಸ್ಪತ್ರೆಯ ಯುರಾಲಜಿ




ವಿಭಾಗದ ಮುಖ್ಯಸ್ಥರಾದ ಡಾ. ಅಮೃತ್‌ರಾಜ್ ಗೌಡ, ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದ ಮುಖ್ಯಸ್ಥರಾದ ಡಾ. ಎಸ್, ಮಮತಾ, ರೇಡಿಯಾಲಜಿ ವಿಭಾಗದ ಮುಖ್ಯಸ್ಥರಾದ ಡಾ. ಸುಧಾಕಿರಣ್‌ದಾಸ್ ಮತ್ತು ಫಿಜಿಯೋಥೆರಪಿ ವಿಭಾಗದ ಮುಖ್ಯಸ್ಥರಾದ ಡಾ. ವಿಜಯ್ ಸ್ಯಾಮ್ಯುಯೆಲ್ ಹಾಗೂ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು. □

## ಕ್ರೀಡಾಸಾಧನೆಯಲ್ಲಿ ಪೋಷಕರ ಪಾತ್ರವೂ ಮಹತ್ವದ್ದು

ವಿದ್ಯಾರ್ಥಿಗಳ ಬದುಕಿನಲ್ಲಿ ಕ್ರೀಡೆಯು ಮಹತ್ವದ ಪಾತ್ರವನ್ನು ವಹಿಸುತ್ತದೆ. ವಿದ್ಯಾರ್ಥಿಗಳು ವಿವಿಧ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವಂತಹ ಆಸಕ್ತಿಯನ್ನು ಮೂಡಿಸುವಲ್ಲಿ ದೈಹಿಕ ಶಿಕ್ಷಕರಷ್ಟೇ ಸಮವಾದ ಪ್ರಯತ್ನ ಮತ್ತು ಆಸಕ್ತಿ ಪೋಷಕರಿಗೆ ಇರಬೇಕು. ವಿದ್ಯಾರ್ಥಿಗಳ ಕ್ರೀಡಾ ಸಾಧನೆಯಲ್ಲಿ ಪೋಷಕರ ಪಾತ್ರವೂ ಮಹತ್ವದ್ದು ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಶ್ರೀ ಎಸ್. ಶಿವಕುಮಾರಸ್ವಾಮಿ ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸ್ಮರಣಾರ್ಥ ಅಂತರ ಕಾಲೇಜು ಪುರುಷರ ವಾಲಿಬಾಲ್, ಥ್ರೋಬಾಲ್ ಮತ್ತು ಬಾಲ್‌ಬ್ಯಾಡ್ಮಿಂಟನ್ ಹಾಗೂ ಮಹಿಳೆಯರ ಥ್ರೋಬಾಲ್ ಪಂದ್ಯಾವಳಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಓದು ಅಧ್ಯಯನ ಜೊತೆ ಜೊತೆಯಲ್ಲಿ ಕ್ರೀಡಾ ಚಟುವಟಿಕೆಗಳು ಇರಬೇಕು. ಗೆಲುವಿಗಾಗಿಯೇ ಕ್ರೀಡೆಯಲ್ಲ. ಕ್ರೀಡೆಯಲ್ಲಿ ಸೋಲು ಗೆಲುವು ಸಹಜ. ಕ್ರೀಡೆ ಗೆಲುವಿನಾಚೆಗೆ ದೈಹಿಕ, ಮಾನಸಿಕ ಆರೋಗ್ಯವನ್ನು ನೀಡುತ್ತದೆ. ಧೈರ್ಯ ಮತ್ತು ಆತ್ಮವಿಶ್ವಾಸವನ್ನು ಇಮ್ಮಡಿಸುತ್ತದೆ. ನಾಯಕತ್ವದ ಗುಣವನ್ನು ಬೆಳೆಸುತ್ತದೆ. ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಗುರುಗಳಿಗೂ ಕಾಲೇಜಿಗೂ ಮತ್ತು ಪೋಷಕರಿಗೂ ಕೀರ್ತಿಯನ್ನು ತರಬೇಕು ಎಂದರು.

ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲ ಡಾ. ಎಂ. ಪ್ರಭು, ದೈಹಿಕ ನಿರ್ದೇಶಕ ಶ್ರೀ ಎಂ. ಕಾರ್ತಿಕ್ ಉಪಸ್ಥಿತರಿದ್ದರು. ಸಹಾಯಕ ಪ್ರಾಧ್ಯಾಪಕ ಶ್ರೀ ಷಣ್ಮುಗಂ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಕಾಲೇಜುಗಳ ಕ್ರೀಡಾಪಟುಗಳು ಈ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದರು.

## ಅಂತರ ಕಾಲೇಜು ವಚನ ಗಾಯನ ಮತ್ತು ಪ್ರಬಂಧ ಸ್ಪರ್ಧೆ



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ದಿನಾಂಕ 15.9.2025 ರಂದು ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಯವರ (110ನೇ ಜಯಂತಿ) ಶತೋತ್ತರ ದಶಮಾನೋತ್ಸವ ಪ್ರಯುಕ್ತ ಅಂತರ ಕಾಲೇಜು ವಚನ ಗಾಯನ ಮತ್ತು ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಸ್ಪರ್ಧೆಗಳನ್ನು ಉದ್ಘಾಟಿಸಿದ ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ಪಂಚಾಕ್ಷರಿಸ್ವಾಮಿಯವರು ಮಾತನಾಡುತ್ತಾ, ವಿದ್ಯಾರ್ಥಿನಿಯರಿಗೆ ಕಲಿಕೆ ಎಂಬುದು ನಿರಂತರವಾಗಿರಬೇಕು. ಸಂಗೀತದ ಅಭ್ಯಾಸ ಮತ್ತು ತರಬೇತಿ ಅವಶ್ಯಕವಾಗಿದೆ. ತಮಗೆಲ್ಲರಿಗೂ ಸಾಹಿತ್ಯ ಮತ್ತು ತಾಳದ ಜ್ಞಾನವು ಮುಖ್ಯ ಎಂದರು.

ವಿದ್ವಾನ್ ಎಂ. ಜಿ. ಸುರೇಶರವರು ಮಾತನಾಡುತ್ತಾ, ತಾವೆಲ್ಲರೂ ವಚನ ಸಾಹಿತ್ಯದ ಕಡೆಗೆ ಗಮನಹರಿಸಿ, ಕಲಿಕೆ ಶ್ರದ್ಧೆಯನ್ನು ರೂಢಿಸಿಕೊಳ್ಳಿ ಎಂದರು. ವಿದ್ವಾನ್ ಎ.ವಿ. ದತ್ತಾತ್ರೇಯರವರು ಮಾತನಾಡುತ್ತಾ, ಸಂಗೀತ ಎಂಬುದು ಸಮುದ್ರವಿದ್ದಂತೆ, ಸಂಗೀತದ ಕಲಿಕೆಯಲ್ಲಿ ಶ್ರದ್ಧೆ ಮುಖ್ಯ. ತಾವೆಲ್ಲರೂ ಶ್ರುತಿ ಜ್ಞಾನವನ್ನು ರೂಢಿಸಿಕೊಂಡು ಮುನ್ನಡೆಯಿರಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ಡಾ. ರೇಚಣ್ಣರವರು ವಹಿಸಿದ್ದರು. ವಚನ ಗಾಯನ ಸ್ಪರ್ಧೆಗೆ 24 ವಿದ್ಯಾರ್ಥಿಗಳು ಹಾಗೂ ಪ್ರಬಂಧ ಸ್ಪರ್ಧೆಗೆ 31 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅಧ್ಯಾಪಕರು ಮತ್ತು ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವಚನಗಾಯನ ಸ್ಪರ್ಧೆಯಲ್ಲಿ ಶೇಷಾದ್ರಿಪುರಂ ಪದವಿ ಕಾಲೇಜಿನ ದ್ವಿತೀಯ ಬಿಬಿಎ ವಿದ್ಯಾರ್ಥಿನಿ ರುಚಿತಾ ರಾಜೇಶ್ ಪ್ರಥಮ, ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ, ತೃತೀಯ ಬಿಕಾಂ ವಿದ್ಯಾರ್ಥಿನಿ ತನುಶ್ರೀ ಭಟ್ ದ್ವಿತೀಯ, ಎನ್‌ಐಇ ಪ್ರಥಮ ದರ್ಜೆ ಕಾಲೇಜಿನ ತೃತೀಯ ಬಿಬಿಎ ವಿದ್ಯಾರ್ಥಿನಿ ಆರ್. ಕಾರ್ತಿಕ ತೃತೀಯ ಬಹುಮಾನ ಪಡೆದರು.

ವೇದಿಕೆಯಲ್ಲಿ ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಎಂ.ಪಿ. ರಾಜೇಶ್ವರಿ ಉಪಸ್ಥಿತರಿದ್ದರು. ಕು. ಧಾತ್ರಿ ಮತ್ತು ವೃಂದದವರು ಪ್ರಾರ್ಥಿಸಿದರು. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಹೆಚ್. ಎಸ್. ಸಿದ್ಧಮಲ್ಲಿಕಾರ್ಜುನಸ್ವಾಮಿ ಸ್ವಾಗತಿಸಿದರು. ಶ್ರೀ ಎನ್. ಎಂ. ಕೃಷ್ಣಪ್ಪ ವಂದಿಸಿದರು. ಶ್ರೀಮತಿ ಜೆ. ಪುಷ್ಪಲತಾ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಸ್ವಯಂಪ್ರೇರಿತ ನೇತ್ರದಾನ ಮತ್ತು ಜಾಗೃತಿ




ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನಡೆದ ರಾಷ್ಟ್ರೀಯ ನೇತ್ರದಾನ ಪಾಕ್ಷಿಕ ಮತ್ತು ಜಾಗೃತಿ ಕಾರ್ಯಕ್ರಮವನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಉದ್ಘಾಟಿಸಿ ಮಾತನಾಡುತ್ತ ದಾನಗಳಲ್ಲಿ ನೇತ್ರದಾನ ಪ್ರಮುಖವಾದದ್ದು, ನೇತ್ರದಾನಕ್ಕೆ ಯಾವುದೇ ವಯಸ್ಸಿನ ಮಿತಿಯಿಲ್ಲ. ಮರಣದ ನಂತರ ನೇತ್ರದಾನ ಮಾಡಬಹುದು. ನೇತ್ರದಾನದ ಬಗ್ಗೆ ಅರಿವು ಮತ್ತು ಜಾಗೃತಿ ಮೂಡಿಸುವ ಉದ್ದೇಶದಿಂದ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು ಇದರ ಮುಖಾಂತರ ಸಾರ್ವಜನಿಕರಿಗೆ ಹೆಚ್ಚಿನ ಮಾಹಿತಿ ಮತ್ತು ಪ್ರಚಾರ ಸಿಗುವಂತಾಗಲಿ ಎಂದರು.

ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಎಂ.ಎನ್ ಜಯಪ್ರಕಾಶ್‌ರವರು, ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಉತ್ತಮ ಕಣ್ಣಿನ ಚಿಕಿತ್ಸಾ ವಿಭಾಗ ಮತ್ತು ವೈದ್ಯರುಗಳ ತಂಡವಿದೆ. ಅವರು ರೋಗಿಗಳಿಗೆ ತತ್‌ಕ್ಷಣ ಸ್ಪಂದಿಸುತ್ತಾರೆ. ಮರಣ ನಂತರ ಕಣ್ಣಿನ ದಾನಿಗಳಿಗೆ ಕೇವಲ 2 ಗಂಟೆಗಳಲ್ಲಿ ಕಣ್ಣಿನ ದಾನದ ಪಕ್ರಿಯೆಯನ್ನು ಇಲ್ಲಿನ ವೈದ್ಯರು ಪೂರ್ಣಗೊಳಿಸಿದರು ಎಂದು ಜೆಎಸ್‌ಎಸ್ ಆಸ್ಪತ್ರೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.


ಮೈಸೂರು ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿಗಳಾದ ಡಾ. ಬೃಂದಾರವರು ನೇತ್ರದಾನ ಮಹಾದಾನವಾಗಿದ್ದು ಕನ್ನಡ ಚಿತ್ರರಂಗದ ನಾಯಕನಟ ದಿವಂಗತ ಶ್ರೀ ಪುನೀತ್ ರಾಜಕುಮಾರ್‌ರವರು ಕೂಡ ತಮ್ಮ ಕಣ್ಣುಗಳನ್ನು ದಾನಮಾಡಿ ಬೇರೆಯವರಿಗೆ ಮಾದರಿ ಮತ್ತು ಪ್ರೇರಣೆಯಾಗಿದ್ದಾರೆ. ಹೆಚ್‌ಐವಿ ಮತ್ತು ಕ್ಯಾನ್ಸರ್ ಖಾಯಿಲೆಗಳಿಂದ ಬಳಲುತ್ತಿರುವವರನ್ನು ಬಿಟ್ಟು ಯಾರು ಬೇಕಾದರು ನೇತ್ರದಾನವನ್ನು ಮಾಡಬಹುದು. ಮೈಸೂರಿನಲ್ಲಿ ಜೆಎಸ್‌ಎಸ್ ಆಸ್ಪತ್ರೆಯು ಸರ್ಕಾರದಿಂದ ಮಾನ್ಯತೆ ಪಡೆದ ನೇತ್ರಭಂಡಾರವನ್ನು ಹೊಂದಿದ್ದು ಇಲ್ಲಿಯೂ ಕೂಡ ಸಾರ್ವಜನಿಕರು ನೇರವಾಗಿ ಬಂದು ನೇತ್ರದಾನಕ್ಕೆ ನೋಂದಾಯಿಸಿಕೊಳ್ಳಬಹುದು. ಮೈಸೂರಿನಲ್ಲಿ 2024 ಮತ್ತು 2025ನೇ ಸಾಲಿನಲ್ಲಿ ಸುಮಾರು 174 ನೇತ್ರಗಳನ್ನು ಪಡೆದು ಅವಶ್ಯ ಇರುವವರಿಗೆ ನೀಡಲಾಗಿದೆ ಎಂದರು.

ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ.ಪಿ. ಮಧುರವರು ಭಾರತವು ಕಾರ್ನಿಯಲ್ ಅಂಧತ್ವದ ದೊಡ್ಡ ಹೊರೆಯನ್ನು ಎದುರಿಸುತ್ತಿದೆ ಮತ್ತು ಕಾರ್ನಿಯಲ್ ಕಸಿಗಾಗಿ ಕಾಯುತ್ತಿರುವ ಸಾವಿರಾರು ಜನರಿಗೆ ನೇತ್ರದಾನವು ಏಕೈಕ ಭರವಸೆಯಾಗಿ ಉಳಿದಿದೆ ಎಂದರು.

ಇದೇ ಸಂದರ್ಭದಲ್ಲಿ ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ.ಪಿ.ಮಧು ಮತ್ತು ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಡಿ. ನಾರಾಯಣಪ್ಪರವರು ತಮ್ಮ ನೇತ್ರದಾನಕ್ಕೆ ಅರ್ಜಿ ಭರ್ತಿ ಮಾಡುವ ಮೂಲಕ ನೋಂದಾಯಿಸಿಕೊಂಡರು. ಜೊತೆಗೆ ಆಸ್ಪತ್ರೆಯ ಹಲವು ಮಂದಿ ಮತ್ತು ಸಾರ್ವಜನಿಕರು ನೇತ್ರದಾನಕ್ಕೆ ನೋಂದಾಯಿಸಿಕೊಂಡರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್ ಮಹೇಶ್, ಉಪಪ್ರಾಂಶುಪಾಲರಾದ ಡಾ. ಮಾಂತಪ್ಪ, ಕಣ್ಣಿನ ವಿಭಾಗದ ಮುಖ್ಯಸ್ಥರಾದ ಡಾ. ಸೌಮ್ಯ ಹಾಗೂ ಪ್ರಾಧ್ಯಾಪಕರಾದ ಡಾ. ಪ್ರಭಾಕರ್‌ರವರು ಉಪಸ್ಥಿತರಿದ್ದರು.

## ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಗೆ ಕ್ರೀಡಾ ಸಮಗ್ರ ಪ್ರಶಸ್ತಿ



ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ನಂಜನಗೂಡಿನ ತಾಲ್ಲೂಕು ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ಸುತ್ತೂರು ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯ ಕ್ರೀಡಾಪಟುಗಳು ಆಟ–ಮೇಲಾಟಗಳಲ್ಲಿ ಭಾಗವಹಿಸಿ 97 ಅಂಕಗಳಿಸುವುದರೊಂದಿಗೆ ಸಮಗ್ರ ಪ್ರಶಸ್ತಿ ಪಡೆದಿರುತ್ತಾರೆ. ಬಾಲಕರ ವಿಭಾಗದ ಕಬಡ್ಡಿ ಪ್ರಥಮ ಸ್ಥಾನ; ಖೋಖೋ, ಬಾಲ್ ಬ್ಯಾಡ್ಮಿಂಟನ್, ಥ್ರೋಬಾಲ್ ಪಂದ್ಯಾವಳಿಗಳಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ. ಬಾಲಕಿಯರ ವಿಭಾಗದ ಖೋಖೋ ಪ್ರಥಮ ಸ್ಥಾನ; ಕಬ್ಬಡಿ ಪಂದ್ಯಾವಳಿಗಳಲ್ಲಿ ದ್ವಿತೀಯ ಸ್ಥಾನಗಳಿಸಿದ್ದಾರೆ. ಅಥ್ಲೆಟಿಕ್ಸ್ ವಿಭಾಗದಲ್ಲಿ ಮಹಾಂತೇಶ್ ನಾಯಕ 400 ಮೀ. ಓಟ, ಉದ್ದಜಿಗಿತದಲ್ಲಿ ಪ್ರಥಮ ಸ್ಥಾನ ಗಳಿಸುವ ಮೂಲಕ ವೈಯಕ್ತಿಕ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾನೆ. ಬಾಲಕರ ವಿಭಾಗದಲ್ಲಿ ಬೀಟಾರಾಜ್ – 100 ಮೀ. ಓಟ ಪ್ರಥಮ, ಗುಂಡು ಎಸೆತ, 400 ಮೀ. ಓಟದಲ್ಲಿ ತೃತೀಯ ಸ್ಥಾನ ಗಳಿಸಿದ್ದಾರೆ. ಉದ್ದ ಜಿಗಿತದಲ್ಲಿ ಧನಂಜಿತ್ – ತೃತೀಯ ಸ್ಥಾನ, 600 ಮೀ. ಓಟದಲ್ಲಿ ಗುರುಪ್ರಸಾದ್ ಪ್ರಥಮ, ಮೋಹಿತ್ ಕುಮಾರ್ ಮೆಹತೊ ತಟ್ಟೆ ಎಸೆತದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಹರ್ಷಿತ್ ಎತ್ತರ ಜಿಗಿತದಲ್ಲಿ ತೃತೀಯ ಸ್ಥಾನಗಳಿಸಿದ್ದಾರೆ. 4–100 ಮೀ. ರಿಲೇ ಬೀಟಾರಾಜ್ ಮತ್ತು ತಂಡ ಪ್ರಥಮ ಸ್ಥಾನ ಗಳಿಸಿ ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಬಾಲಕಿಯರ ವಿಭಾಗದಲ್ಲಿ ನಿಂಗ್‌ಸೀತ್ವೈ 100 ಮೀ. ಓಟದಲ್ಲಿ ದ್ವಿತೀಯ, 600 ಮೀ. ಓಟದಲ್ಲಿ ಅಮೃತಾ ದ್ವಿತೀಯ ಸ್ಥಾನ ಪಡೆದಿದ್ದಾರೆ. ಅಬನಾ ಲಿಂಗ್ಡೋ ತಟ್ಟೆ

ಎಸೆತದಲ್ಲಿ ಪ್ರಥಮ, ಗುಂಡು ಎಸೆತ ದ್ವಿತೀಯ ಸ್ಥಾನಗಳಿಸಿದರೆ, ಲೈಸಾರಾವ್ ಜೀನಲಕ್ಷ್ಮಿದೇವಿ ಎತ್ತರಜಿಗಿತದಲ್ಲಿ ಪ್ರಥಮ ಸ್ಥಾನ ಗಳಿಸಿ ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈ ವಿದ್ಯಾರ್ಥಿಗಳಿಗೆ ಸಂಸ್ಥೆಯ ಆಡಳಿತಾಧಿಕಾರಿಗಳು, ಸಂಯೋಜನಾಧಿಕಾರಿಗಳು, ಮುಖ್ಯೋಪಾಧ್ಯಾಯರುಗಳು ಹಾಗೂ ಶಿಕ್ಷಕ ವೃಂದದವರು ಅಭಿನಂದಿಸಿದ್ದಾರೆ.

## ಬಹುಮಾನಗಳನ್ನು ಗಳಿಸಿದ ಸುತ್ತೂರು ಜೆಎಸ್ಎಸ್ ಕ್ರೀಡಾಪಟುಗಳು



ನಂಜನಗೂಡಿನಲ್ಲಿ ದಿನಾಂಕ 9.9.2025 ಮತ್ತು 10.9.2025ರಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯೋಜಿಸಿದ್ದ ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ಸುತ್ತೂರು ಜೆಎಸ್ಎಸ್ ಪ್ರೌಢಶಾಲೆಯ ಕ್ರೀಡಾಪಟುಗಳು, ಆಟ–ಮೇಲಾಟಗಳಲ್ಲಿ ಭಾಗವಹಿಸಿ ಹಲವಾರು ಪ್ರಶಸ್ತಿಗಳನ್ನು ಪಡೆದಿರುತ್ತಾರೆ.

ಬಾಲಕ–ಬಾಲಕಿಯರ ಕಬಡ್ಡಿ ಮತ್ತು ಬಾಲಕಿಯರ ಥ್ರೋಬಾಲ್ ತಂಡಗಳು ಪ್ರಥಮ ಸ್ಥಾನ ಗಳಿಸುವ ಮೂಲಕ ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಬಾಲಕರ ವಿಭಾಗದಲ್ಲಿ ಎಂ. ಶರತ್‌ಪ್ರಸಾದ್ 200ಮೀ. ಓಟ ದ್ವಿತೀಯ, 100ಮೀ. ಓಟ ತೃತೀಯ; 4x100ಮೀ ರಿಲೇ ಓಟದಲ್ಲಿ ಎಂ. ಜೆ. ಗುಣಶೀತಲ್, ಬಿಪ್ಲಬ್‌ಕುಮಾರ್ ಮೆಹತೋ, ಶ್ರೀಶಾಂತ್, ಶರತ್‌ಪ್ರಸಾದ್ ದ್ವಿತೀಯ; 4x400ಮೀ ರಿಲೇ ಓಟದಲ್ಲಿ ಡಿ. ದಿಗಂತ್, ಕೆ.ಎನ್.ಸುಪ್ರಿತ್, ಎಂ. ಜೆ. ಗುಣಶೀತಲ್ ಹಾಗೂ ಎಸ್. ನಿತಿನ್ ದ್ವಿತೀಯ; ಎಂ. ಎಂ. ಪವನ್ 5000ಮೀ. ನಡಿಗೆ ಸ್ಪರ್ಧೆಯಲ್ಲಿ ದ್ವಿತೀಯ; ಸಂಗಮೇಶ್ ತೃತೀಯ, ಎ. ಆರ್. ಯಶ್ವಂತ್ ಎತ್ತರ ಜಿಗಿತ ದ್ವಿತೀಯ; ಎಸ್.ಆರ್. ಪವನ್‌ಕುಮಾರ್ ತಟ್ಟೆ ಎಸೆತ ತೃತೀಯ; ಹೆಚ್.ಎನ್. ಲಿಖಿತ್ 1500ಮೀ. ಓಟ ತೃತೀಯ, ತ್ರಿವಿಧ ಜಿಗಿತದಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ. ಬಾಲಕಿಯರ ವಿಭಾಗದಲ್ಲಿ ಯೋಗಿನಿ ಎತ್ತರ ಜಿಗಿತ ಪ್ರಥಮ, ತಟ್ಟೆ ಎಸೆತ ತೃತೀಯ, ರಕ್ಷಿತಾ ಉದ್ದಜಿಗಿತ ದ್ವಿತೀಯ; ಬೋರಮ್ಮ ತ್ರಿವಿಧ ಜಿಗಿತ ದ್ವಿತೀಯ, ಭರ್ಜಿ ಎಸೆತದಲ್ಲಿ ದ್ವಿತೀಯ ಸ್ಥಾನ ಪಡೆದು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. 4x100ಮೀ ರಿಲೇ ಓಟದಲ್ಲಿ ಯೋಗಿನಿ, ಬೋರಮ್ಮ, ಕೀರ್ತನ, ಸಿರಿ ಗಿರೀಶ್ ದ್ವಿತೀಯ; 4x400ಮೀ ರಿಲೇ ಓಟದಲ್ಲಿ ಬೋರಮ್ಮ, ಕೀರ್ತನ, ಲಕ್ಷ್ಮೀ, ಚಿನ್ಮಯಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ. ಈ ವಿದ್ಯಾರ್ಥಿಗಳಿಗೆ ಸಂಸ್ಥೆಯ ಆಡಳಿತಾಧಿಕಾರಿಗಳು, ಸಂಯೋಜನಾಧಿಕಾರಿಗಳು, ಮುಖ್ಯೋಪಾಧ್ಯಾಯರುಗಳು ಹಾಗೂ ಶಿಕ್ಷಕ ವೃಂದದವರು ಅಭಿನಂದಿಸಿದ್ದಾರೆ.

## ಥ್ರೋಬಾಲ್ ತಂಡಕ್ಕೆ ದ್ವಿತೀಯ ಬಹುಮಾನ



ಮೈಸೂರಿನಲ್ಲಿರುವ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ವಸತಿ ನಿಲಯದ ವತಿಯಿಂ ದ ಆಯೋಜಿಸಿದ್ದ 2025–26 ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟ ಮೈಸೂರು ನಗರ ಭಾಗದ ಮಹಿಳಾ ವಸತಿನಿಲಯಗಳ ಮಹಿಳೆಯರ ಥ್ರೋಬಾಲ್ ಸ್ಪರ್ಧೆಯಲ್ಲಿ ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಮಹಿಳಾ ವಿದ್ಯಾರ್ಥಿನಿಲಯದ ವಿದ್ಯಾರ್ಥಿನಿಯರು ದ್ವಿತೀಯ ಸ್ಥಾನ ಗಳಿಸಿರುತ್ತಾರೆ. ವಿಜೇತ ಕ್ರೀಡಾಪಟುಗಳನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲರಾದ ಡಾ. ಎಂ. ಪ್ರಭು, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್. ನಂಜುಂಡಸ್ವಾಮಿ, ದೈಹಿಕ ಶಿಕ್ಷಣ ನಿರ್ದೇಶಕರುಗಳಾದ ಶ್ರೀ ಎಂ. ಕಾರ್ತಿಕ್, ಶ್ರೀ ಸಿ.ಎಸ್. ನಿರಂಜನ್, ನಿಲಯಪಾಲಕರಾದ ಶ್ರೀಮತಿ ಬಿ.ಬಿ ಚೈತ್ರ ಹಾಗೂ ಬೋಧಕ/ಬೋಧಕೇತರರು ಅಭಿನಂದಿಸಿದ್ದಾರೆ.

## ಜೆಎಸ್‌ಎಸ್ ಕಾಲೇಜಿನಲ್ಲಿ ವಿಶ್ವವಿದ್ಯಾನಿಲಯ ಕ್ರೀಡಾಕೂಟ

2025–26ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ಅಂತರ ಕಾಲೇಜುಗಳ ಮಹಿಳೆಯರ ಬಾಲ್ ಬ್ಯಾಡ್ಮಿಂಟನ್, ಟೆನ್ನಿಕಾಯ್ಟ್ ಮತ್ತು ವಾಲಿಬಾಲ್ ಕ್ರೀಡಾಕೂಟವನ್ನು ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು. ಮಹಿಳೆಯರ ವಾಲಿಬಾಲ್ ಕ್ರೀಡೆಯಲ್ಲಿ ಪಿ.ಜಿ.ಎಸ್.ಸಿ ಕಾಲೇಜು ಪ್ರಥಮ, ಟೆರಿಷಿಯನ್ ಕಾಲೇಜು ದ್ವಿತೀಯ ಮತ್ತು ಮಹಾರಾಣಿ ವಾಣಿಜ್ಯ ಕಾಲೇಜು ತೃತೀಯ ಸ್ಥಾನ ಗಳಿಸಿರುತ್ತಾರೆ. ಮಹಿಳೆಯರ ಬಾಲ್‌ಬ್ಯಾಡ್ಮಿಂಟನ್‌ನಲ್ಲಿ ವಿವೇಕಾನಂದ ಪದವಿಪೂರ್ವ ಕಾಲೇಜು ಪ್ರಥಮ, ಜೆಎಸ್‌ಎಸ್ ಮಹಿಳಾ

ಕಾಲೇಜು ದ್ವಿತೀಯ ಮತ್ತು ಮಹಾರಾಣಿ ವಿಜ್ಞಾನ ಕಾಲೇಜು ತೃತೀಯ ಸ್ಥಾನ ಗಳಿಸಿರುತ್ತಾರೆ. ಮಹಿಳೆಯರ ಟೆನ್ನಿಕಾಯ್ಟ್ ಪಂದ್ಯದಲ್ಲಿ ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜು ಪ್ರಥಮ, ಜೆಎಸ್‌ಎಸ್ ಮಹಿಳಾ ಕಾಲೇಜು ದ್ವಿತೀಯ ಮತ್ತು ಪಿ.ಜಿ.ಎಸ್.ಸಿ. ತೃತೀಯ ಸ್ಥಾನವನ್ನು ಗಳಿಸಿರುತ್ತಾರೆ. ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲರಾದ ಡಾ. ಎಂ. ಪ್ರಭು ವಿಜೇತ ಕ್ರೀಡಾಪಟುಗಳಿಗೆ ಬಹುಮಾನ ನೀಡಿ ಗೌರವಿಸಿದರು. ದೈಹಿಕ ಶಿಕ್ಷಣ ನಿರ್ದೇಶಕರುಗಳಾದ ಶ್ರೀ ಎಂ. ಕಾರ್ತಿಕ್, ಶ್ರೀ ಸಿ.ಎಸ್. ನಿರಂಜನ್, ಹಾಗೂ ಬೋಧಕ ಮತ್ತು ಬೋಧಕೇತರರು ಉಪಸ್ಥಿತರಿದ್ದರು.

## ಬೀಜೋಪಚಾರ ಪ್ರಾತ್ಯಕ್ಷಿಕೆ

ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಐಟಿಸಿ ಮತ್ತು ಔಟ್ ರೀಚ್ ಸಂಸ್ಥೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಸಂಯುಕ್ತಾಶ್ರಯದಲ್ಲಿ ಹುಣಸೂರಿನ ಕರಣಕುಪ್ಪೆ ಗ್ರಾಮದಲ್ಲಿ ದಿನಾಂಕ 10.9.2025ರಂದು ಹೆಸರು ಕೆಕೆಎಂ–3 ಹಾಗು ಅಲಸಂದೆ ಕೆಬಿಸಿ –9 ಹೊಸ ತಳಿಗಳ ಬೀಜೋಪಚಾರ ಕುರಿತು ಪ್ರಾತ್ಯಕ್ಷಿಕೆ ಹಾಗು ಬೀಜೋತ್ಪಾದನೆ ಕುರಿತು ತರಬೇತಿಯನ್ನು ಆಯೋಜಿಸಲಾಗಿತ್ತು.

ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ಪಾಪಣ್ಣ ವಿವಿಧ ಇಲಾಖೆಗಳ ಮಾಹಿತಿ ಪಡೆದು, ಉತ್ತಮ ಬೆಳೆ ಬೆಳೆಯಲು ಸೂಚಿಸಿದರು. ಕಾರ್ಯಕ್ರಮ ಸಂಯೋಜಕರಾದ ಶ್ರೀ ನಂಜುಂಡಸ್ವಾಮಿ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣಾ ಯೋಜನೆ ಕುರಿತು ಸಂಕ್ಷಿಪ್ತವಾಗಿ ವಿವರಿಸಿದರು. ತೋಟಗಾರಿಕೆ ಅಧಿಕಾರಿಗಳಾದ ಶ್ರೀ ರವಿ ತೋಟಗಾರಿಕೆ ಇಲಾಖೆಗಳಲ್ಲಿನ ಹನಿನೀರಾವರಿ ಸೌಲಭ್ಯಗಳ ಕುರಿತು ತಿಳಿಸಿದರು. ಕೃಷಿ ಇಲಾಖೆ ಕೃಷಿ ಅಧಿಕಾರಿ ಶ್ರೀ ಜಯಕುಮಾರ್ ಇಲಾಖೆ ಸೌಲಭ್ಯಗಳು, ಕಿಸಾನ್ ಸಮ್ಮಾನ್, ಕ್ರಾಪ್ ಇನ್ಸೂರೆನ್ಸ್ ಕುರಿತು ತಿಳಿಸಿದರು.

ಕೆವಿಕೆಯ ಬೀಜ ತಂತ್ರಜ್ಞಾನ ವಿಭಾಗದ ವಿಷಯ ತಜ್ಞರಾದ ಶ್ರೀಮತಿ ಹೆಚ್.ವಿ. ದಿವ್ಯಾರವರು ಮಾತನಾಡಿ ಭತ್ತದ ಉತ್ತಮ ಇಳುವರಿಗೆ ಬೀಜೋಪಚಾರ ಮಾಡಬೇಕು. ನರ್ಸರಿ ಮಡಿಗಳಿಗೆ ನಾಟಿಗೆ ಮುನ್ನ ಸಿಂಪಡನೆ, ಮೊದಲ ಹಂತದಲ್ಲಿಯೇ ಸಾರಜನಕ, ರಂಜಕದ ಜೊತೆ ಪೊಟ್ಯಾಷ್, ಜಿಂಕ್ ಹಾಗು ಬೋರಾನ್ ಬಳಸಬೇಕು. ಉತ್ತಮ ಬೇಸಾಯ ಪದ್ಧತಿಯಲ್ಲಿ ಸಾಲು ಬಿತ್ತನೆ, ಕಳೆ ನಿರ್ವಹಣೆ, ಗೊಬ್ಬರ ನಿರ್ವಹಣೆ ಹಾಗು ಬೆರಕೆ ತೆಗೆದು ಉತ್ತಮವಾಗಿ ಬೀಜೋತ್ಪಾದನೆ ಮಾಡುವ ತಂತ್ರಜ್ಞಾನಗಳನ್ನು ರೈತರು ತಿಳಿದುಕೊಳ್ಳಬೇಕು. ಏಕದಳ ಧಾನ್ಯಕ್ಕೆ ಪ್ರತಿ ಕೆಜಿ ಬೀಜಕ್ಕೆ ಅಜಟೋಬ್ಯಾಕ್ಟರ್/ ಅಜೋಸ್ಪಿರಿಲ್ಲಮ್5–10ಗ್ರಾಂ, ದ್ವಿದಳ ಧಾನ್ಯದ ಬಿತ್ತನೆ ಬೀಜವನ್ನು ಜೈವಿಕ ಗೊಬ್ಬರವಾದ ರೈಜೋಬಿಯಂ 5–10ಗ್ರಾಂ, ಪಿಎಸ್‌ಬಿ–10ಗ್ರಾಂ, ಟ್ರೈಕೋಡರ್ಮ–10ಗ್ರಾಂನಿಂದ ಅಥವಾ ರಾಸಾಯನಿಕ ಕಾರ್ಬನ್ ಡೈಜಿಮ್ 4ಗ್ರಾಂನಿಂದ ಬೀಜೋಪಚಾರದ ಮಾಡಿ ಬಿತ್ತನೆ ಮಾಡಬೇಕು. ಸುರಕ್ಷಿತ ರಾಸಾಯನಿಕಗಳ ಬಳಕೆ ಕುರಿತು ತಿಳಿದುಕೊಳ್ಳಬೇಕು. ಕೃಷಿ ವಿಜ್ಞಾನ ಕೇಂದ್ರದಲ್ಲಿ ದ್ವಿದಳ ಬೀಜೋತ್ಪಾದನೆ ಯೋಜನೆಯಲ್ಲಿ ಉದ್ದು, ಅಲಸಂದೆ ಹಾಗು ಹೆಸರು ಕಾಳಿನ ಬೀಜೋತ್ಪಾದನೆಗೆ ಅವಕಾಶವಿದೆ, ರೈತರು ಗುಣಮಟ್ಟದ ಬಿತ್ತನೆ ಬೆಳೆದು ಆರ್ಥಿಕವಾಗಿ ಸದೃಢರಾಗಬಹುದು. ರೈತರು ಉತ್ತಮ ಬಿತ್ತನೆ ಬಳಸಬೇಕು. ಹೊಸ ತಳಿಗಳಾದ ಹೆಸರು ತಳಿ ಕೆಕೆಎಂ 3 ಹಳದಿ ಎಲೆ ರೋಗ, ಬೂದು ಮಾರಿ ಹಾಗು ಕಾಯಿಕೊರಕದ ಸಹಿಷ್ಣುತೆ ಹೊಂದಿದೆ. 60–65 ದಿನಕ್ಕೆ ಕಟಾವಿಗೆ ಬರುತ್ತದೆ. ಉತ್ತಮ ನಿರ್ವಹಣೆಯಲ್ಲಿ ಹೆಕ್ಟೇರಿಗೆ 7.5–8 ಕ್ವಿಂಟಲ್‌ನಷ್ಟು ಕಾಳಿನ ಇಳುವರಿ ಬರುತ್ತದೆ. ಅಲಸಂದೆ ತಳಿ ಕೆಬಿಸಿ – 12 ಹೊಸ ತಳಿಯಾಗಿದ್ದು 90–95ದಿನದಲ್ಲಿ ಕಟಾವಿಗೆ

ಬರುತ್ತದೆ. ಹಳದಿ ಎಲೆ ರೋಗದ ಸಹಿಷ್ಣುತೆ ಹೊಂದಿದೆ. ಉತ್ತಮ ನಿರ್ವಹಣೆಯಲ್ಲಿ ಎಕರೆಗೆ 10–11ಕ್ವಿಂಟಲ್‌ನಷ್ಟು ಇಳುವರಿ ಬರುತ್ತದೆ. ಬಿತ್ತನೆ ಸಮಯದಲ್ಲಿ ಪೊಟ್ಯಾಷ್ ಒಳಗೊಂಡ ಗೊಬ್ಬರ ಬಳಸಿ ಬೆರಕೆಯನ್ನು ತೆಗೆದು ಕಾಳನ್ನು ಚೆನ್ನಾಗಿ ಒಣಗಿಸಿ ಕೆವಿಕೆಗೆ ಬಿತ್ತನೆಯನ್ನು ತಲುಪಿಸಬೇಕು. ಕೆವಿಕೆಯಿಂದ ಬಿತ್ತನೆ ಪಡೆದು ಉತ್ತಮವಾಗಿ ಬೆಳೆದ, ಚೆನ್ನಾಗಿ ಒಣಗಿಸಿದ, ಬೀಜ ಸಂಸ್ಕರಣೆಯ ನಂತರ ಬಿತ್ತನೆಯನ್ನು ಮಾರುಕಟ್ಟೆ ಬೆಲೆಗಿಂತ ಶೇ 15ರಷ್ಟು ಹೆಚ್ಚಿನ ಬೆಲೆಗೆ ಕೆವಿಕೆ ಖರೀದಿಸಲು ಸಿದ್ಧವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಔಟ್ ರೀಚ್ ಸಂಸ್ಥೆಯ ಪ್ರೋಗ್ರಾಂ ಆಫಿಸರ್ ಶ್ರೀ ವಿಶ್ವಜಿತ್, ಕೆವಿಕೆಯ ತಾಂತ್ರಿಕ ಅಧಿಕಾರಿ ಶ್ರೀ ಅಕ್ಷಯ್, ಶ್ರೀ ಶಶಿಕುಮಾರ್, ಸ್ವಯಂ ಸೇವಕ ಶ್ರೀ ರಾಘವೇಂದ್ರ, ಪ್ರಗತಿಪರ ರೈತರಾದ ಶ್ರೀ ಕೆ.ಎಂ. ರಾಜು ಉಪಸ್ಥಿತರಿದ್ದರು. ಶ್ರೀ ಪ್ರಕಾಶ್‌ರವರು ಸ್ವಾಗತ ಕೋರಿ ನಿರೂಪಿಸಿದರು. ಕೃಷಿ ಸಖಿಯರು ಹಾಗು ಔಟ್ ರೀಚ್ ಸಿಬ್ಬಂದಿ ವರ್ಗದವರು, ರೈತರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ವಿದ್ಯಾರ್ಥಿಗಳಿಗೆ ಜೀವನದಲ್ಲಿ ಕೇಳ್ಮೆ, ತಾಳ್ಮೆ, ಜಾಣ್ಮೆ ತುಂಬಾ ಅಗತ್ಯ



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಪದವಿ ಮತ್ತು ಪದವಿ ಪೂರ್ವ ಕಾಲೇಜಿನ ಹಿಂದಿ ವಿಭಾಗದಿಂದ ಹಿಂದಿ ದಿನಾಚರಣೆ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮಹಾರಾಜ ಕಾಲೇಜಿನ ಹಿಂದಿ ವಿಭಾಗದ ಮುಖ್ಯಸ್ಥರಾದ ಡಾ. ಬಸವರಾಜ್ ಕೆ ಬಾರ್ಕರ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಾ, ಭಾರತದ ವೈವಿಧ್ಯಮಯ ಭಾಷಾ ಸಮುದಾಯಗಳನ್ನು ಹೊಂದಿದೆ. ಪ್ರತಿವರ್ಷವೂ ಸೆಪ್ಟೆಂಬರ್ 14 ಅನ್ನು ಹಿಂದಿ ದಿವಸ ಎಂದು ಆಚರಿಸಲಾಗುತ್ತಿದೆ. 1949ರಲ್ಲಿ ಹಿಂದಿ ಭಾರತದ ಅಧಿಕೃತ ಭಾಷೆಯಾಗಿ ಅಂಗೀಕರಿಸಲ್ಪಟ್ಟಿತ್ತು. ಹಿಂದಿ ಭಾಷಾ ಸಂವಹನ ಮತ್ತು ಸಾಂಸ್ಕೃತಿಕ ಗುರುತನ್ನು ಬಲಪಡಿಸುವ ಸದುದ್ದೇಶದಿಂದ ಈ ಆಚರಣೆಯನ್ನು ಮಾಡಲಾಗುತ್ತದೆ. ಈ ಹಿಂದಿ ದಿವಸವೂ ನಮ್ಮಗಳ ಗುರುತರ ಪಾತ್ರವನ್ನು

ನೆನಪಿಸುತ್ತದೆ. ಇದು ಪರಸ್ಪರ ರಾಜ್ಯಗಳ ನಡುವೆ ಸಂವಹನ ಸಂಪರ್ಕ ಕಲ್ಪಿಸುವಂತೆ ಕಾರ್ಯನಿರ್ವಹಿಸುತ್ತದೆ. ಭಾಷೆಯು ಸಹಬಾಳ್ವೆ, ಸ್ಥಳೀಯ ಸಂಸ್ಕೃತಿ ಸಂಪ್ರದಾಯಗಳು ಮತ್ತು ವೈಯಕ್ತಿಕ ಗುರುತನ್ನು ಸಾಧಿಸುವ ಕಾರಣ ಮೌಲ್ಯಯುತವಾಗಿದೆ. ಹಿಂದಿ ಭಾಷೆಯು ರಾಷ್ಟ್ರೀಯ ಮಟ್ಟದಲ್ಲಿ ಸಂಪರ್ಕಗೊಂಡಂತೆ ನಮ್ಮಲ್ಲೂ ಬೇರೂರಿದೆ. ಅನುವಾದ ಮತ್ತು ವ್ಯಾಖ್ಯಾನ ವ್ಯಾಪ್ತಿಯಲ್ಲಿ ಹಿಂದಿ ಭಾಷೆಯು ಪ್ರಮುಖ ಪಾತ್ರವಹಿಸುತ್ತದೆ. ಪ್ರಪಂಚದೊಂದಿಗೆ ಭಾರತವು ವ್ಯವಹಾರ ಚಟುವಟಿಕೆಗಳನ್ನು ಹೆಚ್ಚಿಸಿಕೊಳ್ಳುತ್ತಿರುವ ಕಾರಣ, ಈ ಸಂದರ್ಭದಲ್ಲಿ ಹಿಂದಿ ಮತ್ತು ಪ್ರಾದೇಶಿಕ ಭಾಷೆಗಳು, ವಿದೇಶಿ ಭಾಷೆಗಳ ನಡುವೆ ಸಂವಹನ ಬೆಳೆಸಲು ಭಾಷಾಂತರಕಾರರಿಗೆ ಬೇಡಿಕೆಯಿದೆ. ಈ ಅನುವಾದ ಕ್ಷೇತ್ರವು ಹೆಚ್ಚಿನ ಹಣವನ್ನು ಗಳಿಸುವ ಸಾಮರ್ಥ್ಯವನ್ನು ನೀಡುತ್ತದೆ. ಸರ್ಕಾರದ ರಾಜತಂತ್ರಗಾರಿಕೆಗೆ ಶಿಕ್ಷಣ, ಸಾಹಿತ್ಯ, ಪ್ರವಾಸೋದ್ಯಮಗಳ ವ್ಯವಹಾರ ಸುಗಮವಾಗಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಲು ಅನುವಾದವು ಅಗತ್ಯವಾಗಿರುತ್ತದೆ. ಹೀಗಾಗಿ, ಹಿಂದಿ ಕಲಿಕೆ ಸಾಂಸ್ಕೃತಿಕ ಸಂಬಂಧಗಳನ್ನು ಬಲಪಡಿಸುವುದರ ಜೊತೆಗೆ ಲಾಭದಾಯಕ ವೃತ್ತಿ ಅವಕಾಶಗಳನ್ನು ಸಹ ತೆರೆಯುತ್ತದೆ. ಅಂತಿಮವಾಗಿ, ಹಿಂದಿ ಕಲಿಕೆ ನಮ್ಮ ಭಾಷಾ ಅರಿವನ್ನು ಸುಧಾರಿಸುತ್ತದೆ ಎಂದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ರೇಚಣ್ಣ ಪ್ರಸ್ತುತ ಸಂದರ್ಭದಲ್ಲಿ ಹಿಂದಿ ಭಾಷೆಯು ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮುಖ್ಯವಾಗಿದೆ ಎಂದು ತಿಳಿಸಿದರು. ಕು. ಸುಖಿತಾ ಕಾರ್ಯಕ್ರಮ ನಿರೂಪಿಸಿದರು. ಕು. ಅರ್ಚಿತ ಸ್ವಾಗತಿಸಿದರು ಹಾಗೂ ಕು. ನಾಗರತ್ನ ವಂದಿಸಿದರು.

## ವಿದ್ಯಾರ್ಥಿಗಳಿಗೆ ಜೀವನದಲ್ಲಿ ಕೌಶಲ್ಯಗಳು ತುಂಬಾ ಅವಶ್ಯಕ

ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ವೃತ್ತಿ ಮಾರ್ಗದರ್ಶನ ಮತ್ತು ಉದ್ಯೋಗಕೋಶದ ವತಿಯಿಂದ ನಡೆದ ಮೃದು ಕೌಶಲ್ಯ ಮತ್ತು ಉದ್ಯೋಗ ಸಾಮರ್ಥ್ಯ ಕುರಿತ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ. ಜಿ. ಬೆಟಸೂರಮಠರವರು, ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಉದ್ಯೋಗ ಪಡೆಯಲು ಕೇವಲ ಪುಸ್ತಕದ ಜ್ಞಾನವೊಂದೇ ಸಾಕಾಗುವುದಿಲ್ಲ, ಉದ್ಯೋಗಾಕಾಂಕ್ಷಿಗಳಿಗೆ ಮೃದು ಕೌಶಲಗಳೂ ಬೇಕು. ಸೃಜನಶೀಲತೆ, ನಾವೀನ್ಯತೆ, ಸಂವಾದ, ಸಂವಹನ ಮತ್ತು ಸಹಕಾರವು ಈಗಿನ ಅಗತ್ಯವಾಗಿದೆ. ಆಧುನಿಕ ಜಗತ್ತಿನ ಸವಾಲುಗಳನ್ನು ಎದುರಿಸಲು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕಾದ ವಿಷಯಗಳ ಬಗ್ಗೆ ಸ್ಪಷ್ಟತೆ ಹೊಂದಿರಬೇಕು ಎಂದು ಅಭಿಪ್ರಾಯಪಟ್ಟರು.

ಬಯೋಕಾನ್ ಫಾರ್ಮ್ಯಾಟಿಕ್ಸ್ ಪ್ರೈ. ಲಿಮಿಟೆಡ್‌ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳೂ ಮುಖ್ಯ ವಿಜ್ಞಾನಿಗಳೂ ಆದ ಡಾ. ಧರ್ಮ ಪ್ರಸಾದ್ ಮಾತನಾಡಿ, ಇಂದಿನ ವಿದ್ಯಾರ್ಥಿಗಳು ಸ್ಪಷ್ಟ ಗುರಿಗಳನ್ನು ಹೊಂದಿರುವುದು. ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದು ಮತ್ತು ಕಾರ್ಯಪ್ರವೃತ್ತರಾಗಿರುವುದು ಬಹು ಮುಖ್ಯ. ಗುರಿಗಳನ್ನು ನಿಗದಿಪಡಿಸಿಕೊಂಡು ಪರಿಣಾಮಕಾರಿ ಸಂವಹನ ಮತ್ತು ನಿರ್ವಹಣೆಯ ಕೌಶಲ್ಯಗಳನ್ನು ರೂಢಿಸಿಕೊಂಡು ಮುನ್ನುಗ್ಗುವುದರ ಮೂಲಕ ಗುರಿ ಸಾಧಿಸಿ. ಜೀವನದಲ್ಲಿ ಕನಸು ಕಾಣಬೇಕು. ಸತತ ಪರಿಶ್ರಮದಿಂದ ಮಾತ್ರ ಕಂಡ ಕನಸನ್ನು ನನಸಾಗಿಸುವುದಕ್ಕೆ ಸಾಧ್ಯ ಎಂದರು.

ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಬಿ.ಎನ್. ಸಂತೋಷ್ ಕುಮಾರ್‌ರವರು ಮಾತನಾಡಿ, ಮೃದು ಕೌಶಲ್ಯಗಳ ಮೂರು ಆಯಾಮಗಳಾದ ವೈಯಕ್ತಿಕ




ಕೌಶಲ್ಯಗಳು, ಸಾಮಾಜಿಕ ಕೌಶಲ್ಯಗಳು ಮತ್ತು ವರ್ತನೆಯ ಅಂಶಗಳ ಬಗ್ಗೆ ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು. ಉದ್ಯೋಗದ ಯಶಸ್ವಿನಲ್ಲಿ ಮೃದು ಕೌಶಲ್ಯಗಳಿಂದ ಗರಿಷ್ಠ ಪ್ರಮಾಣದಲ್ಲಿ ಯಶಸ್ಸು ಸಿಗಲಿದೆ. ವಿದ್ಯಾರ್ಥಿಗಳಿಗೆ ಸಮಸ್ಯೆ ಪರಿಹಾರ, ವಿಮರ್ಶಾತ್ಮಕ ಚಿಂತನೆ ಮತ್ತು ಸಹಕಾರವು ಯಶಸ್ಸಿನ ಕೀಲಿಗಳು, ತಮಗೆ ಜೀವನದಲ್ಲಿ ತೊಂದರೆಗಳು ಎದುರಾದಾಗ ಧೈರ್ಯದಿಂದ ಎದುರಿಸಿ, ಉತ್ತಮ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಿ ಎಂದರು.

ಪ್ರಾಂಶುಪಾಲರಾದ ಡಾ. ರೇಚಣ್ಣ ಮತ್ತು ಉದ್ಯೋಗಾಧಿಕಾರಿಗಳಾದ ಶ್ರೀ ವಿ. ಉಮೇಶ್ ಉಪಸ್ಥಿತರಿದ್ದರು. ಕಾಲೇಜಿನ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಉತ್ತಮ ಉದ್ಯೋಗ ನಿಯೋಜನೆಗಾಗಿ ಮೃದು ಕೌಶಲ್ಯಗಳು ವಿಷಯ ಕುರಿತಂತೆ ಮೈಸೂರು ರಚನಾ ಇಂಡಸ್ಟ್ರೀಸ್ ವುಮೆನ್‌ಕ್ಯಾನ್ ಚಾರಿಟೇಬಲ್ ಟ್ರಸ್ಟ್‌ನ ಸಂಸ್ಥಾಪಕರೂ ವ್ಯವಸ್ಥಾಪಕ ನಿರ್ದೇಶಕರೂ ಆದ ಡಾ. ರಚನಾ ಮಹೇಶ್ ವಿಷಯ ಮಂಡಿಸಿದರು. ಎಐ ಯುಗದಲ್ಲಿ ಭವಿಷ್ಯದ ಉದ್ಯೋಗ ಸಾಮರ್ಥ್ಯ ವಿಷಯ ಕುರಿತಂತೆ ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ಲಿಮಿಟೆಡ್ ಕಾರ್ಯಾಚರಣೆಯ ಮುಖ್ಯಸ್ಥರಾದ ಡಾ. ಆರ್. ದತ್ತಕುಮಾರ್ ತರಬೇತಿ ನೀಡಿದರು. ಉದ್ಯೋಗ ಸಾಮರ್ಥ್ಯ – ಪದವಿಗಳ ಆಚೆಗೆ ವಿಷಯ ಕುರಿತಂತೆ ಜಾನ್ ಜಿಲ್ಸ್ ವೆಕಡತ್ ವಿಷಯ ಮಂಡಿಸಿದರು. ಕು. ಧಾತ್ರಿ ಮತ್ತು ವೃಂದದವರು ಪ್ರಾರ್ಥಿಸಿದರು. ಕು. ಎಸ್. ಅಪರಂಜಿ ಸ್ವಾಗತಿಸಿದರು. ಕು. ಎನ್. ಚಂದನಾ ವಂದಿಸಿದರು. ಕು. ಎಂ. ಪುಣ್ಯ ಕಾರ್ಯಕ್ರಮ ನಿರೂಪಿಸಿದರು. □

## ಶಿಕ್ಷಣವು ಜಗತ್ತನ್ನು ಬದಲಾಯಿಸಲು ಬಳಸಬಹುದಾದ ಅತ್ಯಂತ ಶಕ್ತಿಶಾಲಿ ಅಸ್ತ್ರ

ಮೈಸೂರಿನ ಜೆಎಸ್‌ಎಸ್ ಸ್ಕೂಲ್‌ಆಫ್ ನರ್ಸಿಂಗ್ ವತಿಯಿಂದ ದಿನಾಂಕ 15.9.2025ರಿಂದ 19.9.2025ರವರೆಗೆ ಮೃದು ಕೌಶಲ್ಯ ತರಬೇತಿ ಕಾರ್ಯಾಗಾರವನ್ನು ಡಾ. ಶ್ರೀ ರಾಜೇಂದ್ರ ಭವನದಲ್ಲಿ

2025–26ರ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿತ್ತು. ದಿನಾಂಕ 15.9.2025ರಂದು ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಡಿ.ಎನ್. ರೇಣುಕಾದೇವಿರವರು ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, ಸಂವಹನ ಮತ್ತು ಪರಸ್ಪರ ಕೌಶಲ್ಯಗಳನ್ನು ಸುಧಾರಿಸಿಕೊಳ್ಳಬೇಕು. ರೋಗಿಗಳನ್ನು ಸಹೋದ್ಯೋಗಿಗಳನ್ನು ನಿರ್ವಹಿಸಲು, ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಲು, ತಂಡದ ಕೆಲಸ ಮತ್ತು ನಾಯಕತ್ವದ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳಲು ಹಾಗೂ ಭಾವನಾತ್ಮಕ ಬುದ್ಧಿವಂತಿಕೆ ಮತ್ತು ಒತ್ತಡ ನಿವಾರಣೆ ಮಾಡಿಕೊಳ್ಳಲು ಯೋಗಾಭ್ಯಾಸವು ಸಹಕಾರಿಯಾದುದು. ಶುಶ್ರೂಷಕ ವಿದ್ಯಾರ್ಥಿಗಳು ತಮ್ಮ ದಿನನಿತ್ಯದ ಕಾರ್ಯವೈಖರಿಗಳಲ್ಲಿ ಉತ್ತಮ ಸಂಭಾಷಣಾ ಕ್ರಿಯೆಗಳನ್ನು ಅಳವಡಿಸಿಕೊಳ್ಳಬೇಕು. ಸಕಾರಾತ್ಮಕ ಆಲೋಚನೆಗಳೊಂದಿಗೆ ಉತ್ತಮ ಸೇವೆಯನ್ನು ನೀಡಬಹುದೆಂದು ಹೇಳಿದರು.

ಶ್ರೀ ಟಿ.ಎ. ಪ್ರಕಾಶ್‌ರವರು ಕೆಲವೊಂದು ಯೋಗಭಂಗಿಗಳನ್ನು ಪ್ರದರ್ಶಿಸಿದರು. ಅವರು ಪ್ರದರ್ಶಿಸಿದ ಯೋಗಭಂಗಿಗಳನ್ನು ಶ್ರೀ ಕೆ.ಎಸ್. ಮುಕುಂದನ್‌ರವರು ವಿವರಿಸಿದರು. ಶ್ರೀ ಕೆ.ಎಸ್. ಮುಕುಂದನ್‌ರವರು ಶಿಕ್ಷಣವು ಬೌದ್ಧಿಕ ಮತ್ತು ವೈಯಕ್ತಿಕ ಸಬಲೀಕರಣದ ಅಸ್ತ್ರವಾಗಿದೆ. ವೈಯಕ್ತಿಕ ಮಟ್ಟದಲ್ಲಿ ಈ ರೀತಿಯ ತರಬೇತಿಯು ಮಿತಿಗಳನ್ನು ಮೀರಿ ಮೇಲೇರಲು ಅಜ್ಞಾನದ ಅಡೆತಡೆಗಳನ್ನು ಒಡೆಯಲು ಮತ್ತು ತಮ್ಮ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ಸಹಾಯ ಮಾಡುತ್ತದೆ. ಈ ರೀತಿಯ ತರಬೇತಿಗಳು ಕೇವಲ ವೆಚ್ಚವಲ್ಲ, ಇವು ದೀರ್ಘಾವಧಿಯ ಬೆಳವಣಿಗೆಗೆ ಹೂಡಿಕೆಯಾಗಿದೆ. ಈ ಮಾದರಿಯ ಶಿಕ್ಷಣವು ಜಗತ್ತನ್ನು ಬದಲಾಯಿಸಲು ನೀವು ಬಳಸಬಹುದಾದ ಅತ್ಯಂತ ಶಕ್ತಿಶಾಲಿ ಅಸ್ತ್ರವಾಗಿದೆ ಎಂದು ತಿಳಿಸಿದರು.


ದಿನಾಂಕ 16.9.2025ರಂದು ಮೈಸೂರಿನ ಸ್ವಸ್ಥ್ಯ ಕೇಂದ್ರದ ಯೋಗಚಿಕಿತ್ಸೆ ತಜ್ಞರಾದ ಕು. ಬಿ.ಎಸ್. ಸೀಮಾರವರು ಯೋಗ ಮಾಡುವ ಮೂಲಕ ಒತ್ತಡಗಳನ್ನು ನಿರ್ವಹಣೆ ಮಾಡುವ ಬಗ್ಗೆ ದಿನಾಂಕ 17.9.2025ರಂದು ಮೈಸೂರಿನ ಯೋಗ ವೃತ್ತಿಪರರು ಹಾಗೂ ಧ್ಯಾನ ಬೋಧಕರಾದ ಡಾ. ಮನುರುದ್ರೇಶ್‌ರವರು ವ್ಯಕ್ತಿತ್ವ ವಿಕಸನ ಹಾಗೂ ಯಶಸ್ಸಿನ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು. ದಿನಾಂಕ 18.9.2025ರಂದು ಕು. ನಮ್ರತಾ ಭಾರದ್ವಾಜ್‌ರವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು.

ದಿನಾಂಕ 19.9.2025ರಂದು ಕಾರ್ಯಕ್ರಮಕ್ಕೆ ಆಗಮಿಸಿದ್ದ ಮೈಸೂರಿನ ಹೆಸರಾಂತ ಸಾಫ್ಟ್‌ಸ್ಕಿಲ್ ತರಬೇತುದಾರರಾದ ಶ್ರೀ ಶಿವಶಂಕರ್ ಎಮ್.ಬಿ. ಬೆಳ್ಳಿಯುಪ್ಪರವರು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬಹುದಾದ ಶಿಸ್ತು ಬದ್ಧವಾದ ಜೀವನ ಶೈಲಿಗಳ ಬಗ್ಗೆ ವಿವರಿಸಿದರು.

ಸಮಾರೋಪ ಸಮಾರಂಭದಲ್ಲಿ ಪ್ರಾಂಶುಪಾಲರಾದ ಶ್ರೀಮತಿ ಡಿ.ಎನ್. ರೇಣುಕಾದೇವಿರವರು, ಈ ಐದು ದಿನದ ಸಾಫ್ಟ್ ಸ್ಕಿಲ್ ತರಬೇತಿಯಿಂದ ಬೋಧಕರಿಗೂ ಹಾಗೂ ವಿದ್ಯಾರ್ಥಿಗಳಿಗೂ ಬಹಳ ಉಪಯೋಗವಾಗಿದೆ. ಇದನ್ನು ಎಲ್ಲರೂ ತಮ್ಮ ದಿನನಿತ್ಯದ ಕಾರ್ಯವೈಖರಿಗಳಲ್ಲಿ ಅಳವಡಿಸಿಕೊಳ್ಳಬೇಕು. ಇದರ ಜೊತೆಗೆ ವಿದ್ಯಾರ್ಥಿಗಳು ಪ್ರತಿನಿತ್ಯವೂ ಪುನರಾವರ್ತನೆ, ಪರಿಷ್ಕರಣೆಯಲ್ಲಿ ತೊಡಗಿಸಿಕೊಳ್ಳಬೇಕು. ಆಗ ಪಠ್ಯ ಹಾಗೂ ಸಹಪಠ್ಯಗಳಲ್ಲಿ ತೇರ್ಗಡೆ ಹೊಂದಬಹುದೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಹಿರಿಯ ನರ್ಸಿಂಗ್ ಟ್ಯೂಟರ್‌ರಾದ ಶ್ರೀ ಆರ್.ಕೆ. ಮಹದೇವಸ್ವಾಮಿರವರು, ಬೋಧಕ ವರ್ಗದವರು ಹಾಗೂ ಪ್ರಥಮ ವರ್ಷದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

□

## ಪೂಜ್ಯ ರಾಜೇಂದ್ರ ಶ್ರೀಗಳು ಬಹುಮುಖ ಸೇವೆಗಳ ಸುಧಾರಕರು




ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಶಿವಾನುಭವ ದಾಸೋಹ ಹಾಗೂ ಕೃತಿಗಳ ಬಿಡುಗಡೆ ಸಮಾರಂಭದಲ್ಲಿ "ಪೂಜ್ಯ ರಾಜೇಂದ್ರ ಶ್ರೀಗಳವರ ದಿವ್ಯ ವ್ಯಕ್ತಿತ್ವ" ವಿಷಯ ಕುರಿತು ಮೈಸೂರಿನ ವಿಶ್ರಾಂತ ಕನ್ನಡ ಪ್ರಾಧ್ಯಾಪಕರಾದ ಡಾ. ಕೆ. ಅನಂತರಾಮುರವರು ಮಾತನಾಡಿದರು (27 ಸೆಪ್ಟೆಂಬರ್ 2025)

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಶಿವಾನುಭವ ದಾಸೋಹ ಹಾಗೂ ಕೃತಿಗಳ ಬಿಡುಗಡೆ ಸಮಾರಂಭದಲ್ಲಿ "ಪೂಜ್ಯ ರಾಜೇಂದ್ರ ಶ್ರೀಗಳವರ ದಿವ್ಯ ವ್ಯಕ್ತಿತ್ವ" ವಿಷಯ ಕುರಿತು ಮೈಸೂರಿನ ವಿಶ್ರಾಂತ ಕನ್ನಡ ಪ್ರಾಧ್ಯಾಪಕರಾದ ಡಾ. ಕೆ. ಅನಂತರಾಮುರವರು ಮಾತನಾಡಿದರು. ನಾವಿಂದು ಕೆಲವು ಕೃತಿಗಳನ್ನು ಕೈತೊಳೆದು ಮುಟ್ಟಬೇಕು, ಇನ್ನೂ ಕೆಲವು ಕೃತಿಗಳನ್ನು ಮುಟ್ಟಿದ ನಂತರ ಕೈತೊಳೆದುಕೊಳ್ಳಬೇಕಾದ ಸನ್ನಿವೇಶದಲ್ಲಿ ಇದ್ದೇವೆ. ಇವು ಉತ್ತಮವಾದ ಕೃತಿಗಳಾಗಿವೆ. ಸುಗೀತ ಕೃತಿಯು ಪೂಜ್ಯ ರಾಜೇಂದ್ರ ಶ್ರೀಗಳವರನ್ನು ಮತ್ತು ಪೂಜ್ಯ ಸಿದ್ಧೇಶ್ವರ ಶ್ರೀಗಳವರನ್ನು ಕುರಿತಾದ ಪದ್ಯಗಳನ್ನು ಒಳಗೊಂಡಿದೆ. ಶಿವಶರಣೆಯರ ದರ್ಶನ ಕೃತಿಯು 48 ಜನ ಶರಣೆಯರನ್ನು ಕುರಿತ ಪ್ರಶ್ನೋತ್ತರಗಳನ್ನು ಒಳಗೊಂಡ ಕೃತಿಯಾಗಿದೆ. ಅದಕ್ಕಾಗಿ ಲೇಖಕರಾದ ಶರಣೆ ನೀಲಾಂಬಿಕ ಅವರನ್ನು ಅಭಿನಂದಿಸುತ್ತೇನೆ. ಪೂಜ್ಯ ರಾಜೇಂದ್ರ ಶ್ರೀಗಳು ಅನ್ನ ದಾಸೋಹ, ಜ್ಞಾನದಾಸೋಹ, ಧರ್ಮದಾಸೋಹ, ಆರೋಗ್ಯ ದಾಸೋಹ, ಆತ್ಮ ದಾಸೋಹವನ್ನು ಮಾಡಿ ಸಮಾಜದಲ್ಲಿ ಸ್ಥಿರಸ್ಥಾಯಿಯಾಗಿದ್ದಾರೆ. ಬಹುಮುಖ ಸೇವೆಯಿಂದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳ ಪ್ರಗತಿಗೆ ಕಾರಣೀಭೂತರಾಗಿದ್ದಾರೆ. ಪೂಜ್ಯರ ಸೇವೆ ಅನನ್ಯವಾದದ್ದು, ಅವರು ಇದ್ದ ಅವಧಿಯಲ್ಲಿ ನಾವೆಲ್ಲರೂ ಇದ್ದುದು ನಮ್ಮ ಪುಣ್ಯವೇ ಸರಿ ಎಂದು ತಿಳಿಸಿದರು. ಬಿಡುಗಲು ಶ್ರೀ ಪಡುವಲು ಮಠದ ಪೂಜ್ಯ ಶ್ರೀ ಮಹದೇವ ಸ್ವಾಮಿಗಳವರು ಆಶೀರ್ವಾದವನ್ನು ದಯಪಾಲಿಸಿದರು.

ಅಧ್ಯಕ್ಷತೆ ವಹಿಸಿದ್ದ ಮೈಸೂರು ನಗರ ಘಟಕ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ

ಎಂ. ಚಿನ್ನಸ್ವಾಮಿಯವರು ಹಾಗೂ ಕೃತಿಗಳ ಲೇಖಕರು ಮತ್ತು ಕಾರ್ಯಕ್ರಮದ ಪ್ರಾಯೋಜಕರಾದ ಶರಣೆ ಎಂ.ಎ. ನೀಲಾಂಬಿಕಾ ಅವರುಗಳು ಕಾರ್ಯಕ್ರಮದಲ್ಲಿ ಮಾತನಾಡಿದರು. ಕುಮಾರಿಎನ್. ಚೂಡಾಮಣಿಯವರು ವಚನ ಗಾಯನ ಹಾಗೂ ಪ್ರಾರ್ಥನೆಯನ್ನು ಮಾಡಿದರು. ಶ್ರೀ ನಗರ್ಲೆ ಶಿವಕುಮಾರ ಸ್ವಾಗತಿಸಿದರು. ಶ್ರೀಮತಿ ಗೀತಾ ರಾಜಶೇಖರ್ ನಿರೂಪಿಸಿದರು. ಶ್ರೀ ನಂದೀಶ್ ವಂದನಾರ್ಪಣೆಯನ್ನು ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ನಾಗರಿಕರು, ಜಿಜ್ಞಾಸುಗಳು, ವಿದ್ಯಾರ್ಥಿಗಳು, ಶರಣ ಸಾಹಿತ್ಯ ಪರಿಷತ್ತು ಕದಳಿ ಮಹಿಳಾ ವೇದಿಕೆ, ಶ್ರೀ ಶಿವರಾತ್ರೀಶ್ವರ ಅಕ್ಕನ ಬಳಗದ ಸದಸ್ಯರುಗಳು ಪಾಲ್ಗೊಂಡಿದ್ದರು.

---

## ಪತ್ರಕರ್ತ ಶ್ರೀ ಟಿ.ಜೆ.ಎಸ್. ಜಾರ್ಜ್‌ರವರ ನಿಧನಕ್ಕೆ ಸಂತಾಪ

ಪ್ರಖರ ಚಿಂತನೆ, ನೇರ ಮಾತು, ನಿಷ್ಠುರ ನಿಲುವು, ಸ್ಪಷ್ಟ ರಾಜಕೀಯ ಒಲುವು ಮತ್ತು ಪ್ರಜಾಪ್ರಭುತ್ವದ ಮೇಲೆ ಗಾಢ ನಂಬಿಕೆ ಹೊಂದಿದ್ದ ಪತ್ರಕರ್ತ, ಸಂಪಾದಕ, ಲೇಖಕ, ಜೀವನಚರಿತ್ರೆಕಾರ, ಪ್ರಬಂಧಕಾರ ಶ್ರೀ ಟಿ.ಜೆ.ಎಸ್. ಜಾರ್ಜ್‌ರವರ ಅಗಲುವಿಕೆಯಿಂದ ಭಾರತೀಯ ಪತ್ರಿಕೋದ್ಯಮಕ್ಕೆ ತುಂಬಲಾರದ ನಷ್ಟ ಎಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ತಮ್ಮ ಸಂತಾಪ ಸಂದೇಶದಲ್ಲಿ ತಿಳಿಸಿದ್ದಾರೆ.

ಶ್ರೀ ಟಿ.ಜೆ.ಎಸ್. ಜಾರ್ಜ್‌ರವರು ಮೊದಲಿಗೆ ಫ್ರೀ ಪ್ರೆಸ್ ಜರ್ನಲ್ ಪತ್ರಿಕೆಯಲ್ಲಿ ಕೆಲಸ ಪ್ರಾರಂಭಿಸಿದ್ದರು. ಅನಂತರ ಅವರು ಇಂಟರ್‌ನ್ಯಾಷನಲ್ ಪ್ರೆಸ್ ಇನ್‌ಸ್ಟಿಟ್ಯೂಟ್ ಮತ್ತು ದಿ ಸರ್ಚ್‌ಲೈಟ್ ಫಾರ್ ಈಸ್ಟರ್ನ್ ಎಕನಾಮಿಕ್ಸ್ ರಿವ್ಯೂ ಪತ್ರಿಕೆಗಳಲ್ಲಿ ಕೆಲಸ ಮಾಡಿ, ಮುಂದೆ ಹಾಂಗ್‌ಕಾಂಗ್‌ನಲ್ಲಿ ಏಷಿಯಾ ವೀಕ್ ಪತ್ರಿಕೆಯ ಸಂಸ್ಥಾಪಕ ಸಂಪಾದಕರಾಗಿದ್ದರು. ಆಧುನಿಕ ಪತ್ರಿಕೋದ್ಯಮದ ಹರಿಕಾರ ಎಂದೇ ಹೆಸರಾಗಿದ್ದ ಅವರ "ಪಾಯಿಂಟ್ ಆಫ್ ವ್ಯೂ" ಅಂಕಣ ಅಪಾರ ಜನಪ್ರಿಯತೆ ಗಳಿಸಿತ್ತು. ಆ ದಿನಮಾನದ ಬಹುಮುಖ್ಯ ರಾಜಕೀಯ ವಿಶ್ಲೇಷಕರು ಎಂದು ಪ್ರಸಿದ್ಧರಾಗಿದ್ದರು. ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಸಂಪಾದಕೀಯ ಸಲಹೆಗಾರರಾಗಿದ್ದರು. ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಅವರು ಭಾರತದ ಸಾಕ್ಷೀಪ್ರಜ್ಞೆಯಂತಿದ್ದರು. ಪತ್ರಕರ್ತರಿಗೆ ಇರಬೇಕಾದ ಶಿಸ್ತು, ಸಂಯಮವನ್ನು ನಡೆನುಡಿಯ ಮೂಲಕ ತೋರಿಸಿಕೊಟ್ಟವರು.

ಪತ್ರಿಕೋದ್ಯಮ ಜೀವನದಲ್ಲಿ ಅವರು 1,300ಕ್ಕೂ ಹೆಚ್ಚು ಅಂಕಣಗಳನ್ನು ನಿರಂತರವಾಗಿ ಬರೆದು ವಿಶಿಷ್ಟ ಸಾಧನೆಯನ್ನೇ ನಿರ್ಮಿಸಿದ್ದವರು. ಭ್ರಷ್ಟ ರಾಜಕಾರಣಿಗಳ ಪಾಲಿಗೆ ಸಿಂಹಸ್ವಪ್ನವಾಗಿದ್ದವರು. ನಿರ್ಭೀತ ಪತ್ರಿಕೋದ್ಯಮಕ್ಕೆ ಉದಾಹರಣೆಯಂತಿದ್ದರು.

ರಾಷ್ಟ್ರದ ಉನ್ನತ ನಾಗರಿಕ ಸೇವಾಪ್ರಶಸ್ತಿಯಾದ ಪದ್ಮಭೂಷಣ ಪುರಸ್ಕಾರವಲ್ಲದೆ, ಸ್ವದೇಶಾಭಿಮಾನಿ ಕೇಸರಿ ಪ್ರಶಸ್ತಿ, ಬಶೀರ್ ಪ್ರಶಸ್ತಿ, ಕಮಲಾ ಸೂರ್ಯ ಪ್ರಶಸ್ತಿ, ಕೇಸರಿ ಮೀಡಿಯಾ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಶ್ರೀ ಜಾರ್ಜ್‌ರವರ ಅಗಲುವಿಕೆಯಿಂದ ದೇಶದ ಪತ್ರಿಕೋದ್ಯಮ ಮಂಕಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ಅವರ ಆತ್ಮಕ್ಕೆ ಶಾಂತಿಯನ್ನು, ಅವರ ಕುಟುಂಬವರ್ಗದವರು ಮತ್ತು ಲಕ್ಷಾಂತರ ಅಭಿಮಾನಿಗಳಿಗೆ ಈ ಅಗಲುವಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಹಾರೈಸುತ್ತೇವೆ ಎಂದು ಶ್ರೀಗಳು ಅಭಿಪ್ರಾಯ ವ್ಯಕ್ತಪಡಿಸಿದರು.

## ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್, ಮೈಸೂರು




ಮೈಸೂರಿನ ಜೆ.ಎಸ್.ಎಸ್ ಮಹಿಳಾ ಪಾಲಿಟೆಕ್ನಿಕ್‌ನಲ್ಲಿ ದಿನಾಂಕ 31.08.2025 ರಂದು 20ನೇ ಹಿರಿಯ ವಿದ್ಯಾರ್ಥಿನಿಯರ ಸಮಾವೇಶ ಹಾಗೂ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೇ ಜಯಂತಿ ಮಹೋತ್ಸವ ನೆರವೇರಿತು. ಪೂಜ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಮುಖ್ಯ ಅತಿಥಿಗಳಾದ ಶ್ರೀಮತಿ ಎಂ.ಎ. ನೀಲಾಂಬಿಕಾರವರು ಪೂಜ್ಯ ಸ್ವಾಮೀಜಿಯವರ ಮಾತೃಸಹಜ ಸ್ವಭಾವ, ಮಹಿಳಾ ಶಿಕ್ಷಣ ಕ್ಷೇತ್ರಕ್ಕೆ ಅವರ ಮಹತ್ವದ ಕೊಡುಗೆಯ ಬಗ್ಗೆ ತಿಳಿಸಿಕೊಟ್ಟರು.

ಸಂಘದ ವತಿಯಿಂದ 2024–25ನೇ ಶೈಕ್ಷಣಿಕ ಸಾಲಿನ ಎಲ್ಲಾ ವಿಭಾಗಗಳ ಹಾಗೂ ಡಿಸಿಇಟಿ ಶ್ರೇಷ್ಠ ವಿದ್ಯಾರ್ಥಿನಿಯರನ್ನು ಅವರ ಅತ್ಯುತ್ತಮ ಸಾಧನೆಗಾಗಿ ಗೌರವಿಸಲಾಯಿತು.

ಕಾಲೇಜಿನ ಪ್ರಾಂಶುಪಾಲರು ಹಾಗೂ ಸಂಘದ ಅಧ್ಯಕ್ಷರು ಆದ ಶ್ರೀ ವಿ.ಬಿ. ಲೋಕೇಶರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಹಿರಿಯ ವಿದ್ಯಾರ್ಥಿನಿಯರ ಹಾಗೂ ಕಾಲೇಜಿನ ಬಾಂಧವ್ಯ ಮುಖ್ಯವಾದುದು. ಪ್ರಸ್ತುತ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಹಿರಿಯ ವಿದ್ಯಾರ್ಥಿಗಳ ಅನುಭವ, ಪರಿಣಿತಿ ಮತ್ತು ತಾಂತ್ರಿಕ ಮಾರ್ಗದರ್ಶನದ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಹಿರಿಯ ವಿದ್ಯಾರ್ಥಿನಿಯರು ತಮ್ಮ ಹಳೆಯ ನೆನಪುಗಳನ್ನು ಮೆಲುಕುಹಾಕುವ ಮೂಲಕ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡು, ಕಾರ್ಯಕ್ರಮದ ಆಯೋಜನೆ ಬಗ್ಗೆ ಸಂತಸ ವ್ಯಕ್ತಪಡಿಸಿದರು.

ಸಂಘದ ಪದಾಧಿಕಾರಿಗಳು, ಕಾಲೇಜಿನ ನಿವೃತ್ತ ನೌಕರರು ಮತ್ತು ಸಿಬ್ಬಂದಿವರ್ಗದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸಂಘದ ಕಾರ್ಯದರ್ಶಿಯವರು ವಾರ್ಷಿಕ ವರದಿಯನ್ನು ಮಂಡಿಸಿದರು,

□

## ಟಿಎಸ್‌ಪಿ ಯೋಜನೆಯಡಿಯಲ್ಲಿ ಪೌಷ್ಟಿಕ ಕೈತೋಟದ ಕಿಟ್‌ಗಳ ವಿತರಣೆ ಹಾಗೂ ತರಬೇತಿ ಕಾರ್ಯಕ್ರಮ

ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ದಿನಾಂಕ 10.9.2025 ರಂದು ನಂಜನಗೂಡಿನ ಧಾನ್ ಫೌಂಡೇಶನ್, ಸಹಯೋಗದೊಂದಿಗೆ ಟಿಎಸ್‌ಪಿ ಯೋಜನೆಯಡಿಯಲ್ಲಿ ರೈತ ಮಹಿಳೆಯರ ಪೌಷ್ಟಿಕ ಭದ್ರತೆಗಾಗಿ ಕೈ ತೋಟದ ನಿರ್ಮಾಣ ಮತ್ತು ನಿರ್ವಹಣೆ ತರಬೇತಿ ಹಾಗೂ ಸೀಡ್ ಕಿಟ್ಸ್ ವಿತರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ. ಬಿ.ಎನ್. ಫಣೇಶ್ ರವರು ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತನಾಡಿ, ಪೌಷ್ಟಿಕ ಭದ್ರತೆಗಾಗಿ ಮಹಿಳೆಯರು ಕೈ ತೋಟ ಮಾಡಿಕೋಳ್ಳುವುದು ಬಹಳ ಮುಖ್ಯ. ಹಾಗೆಯೆ ದಿನನಿತ್ಯದ ಆಹಾರದಲ್ಲಿ ತರಕಾರಿಗಳ ಸೇವನೆ ಮಾಡುವುದರಿಂದ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಧಾನ್ ಫೌಂಡೇಶನ್ನಿನ ನಿರ್ದೇಶಕರಾದ ಶ್ರೀ ಪ್ರಕಾಶ್ ರವರು ಕಾರ್ಯಕ್ರಮವನ್ನು ಕುರಿತು ಮಾತನಾಡಿ, ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ವಿವಿಧ ತರಬೇತಿಗಳನ್ನು ಆಯೋಜಿಲಾಗುತ್ತಿದ್ದು ರೈತರು ಹಾಗೂ ರೈತ ಮಹಿಳೆಯರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು. ಮತ್ತೋರ್ವ ಮುಖ್ಯ ಅತಿಥಿಗಳಾದ ಶ್ರೀಮತಿ ದಮಯಂತಿಯವರು, ಪೌಷ್ಟಿಕ ಕೈ ತೋಟ ಮಾಡುವುದರಿಂದ ನಾವು ವಿಷಮುಕ್ತ ತರಕಾರಿಗಳನ್ನು ಸೇವಿಸಲು ಸಾಧ್ಯವೆಂದು ತಿಳಿಸಿದರು.

ಕೆವಿಕೆಯ ತೋಟಗಾರಿಕೆ ವಿಜ್ಞಾನಿ ಡಾ. ಜಿ.ಎನ್. ವಿನಯ್‌ರವರು ಪೌಷ್ಟಿಕ ಕೈ ತೋಟದ ರಚನೆ, ಕೈತೋಟದಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ, ಭೂಮಿ ಸಿದ್ಧತೆ, ಬಿತ್ತನೆ ಬಗ್ಗೆ ಸಮಗ್ರವಾಗಿ ಮಾಹಿತಿ ನೀಡಿದರು. ಕೆವಿಕೆಯ ಸಸ್ಯ ಸಂರಕ್ಷಣೆ ವಿಜ್ಞಾನಿ ಡಾ. ವೈ.ಪಿ. ಪ್ರಸಾದ್‌ರವರು ಕೈತೋಟದಲ್ಲಿ ಬರುವ ಕೀಟ ಮತ್ತು ರೋಗಗಳ ಸಾವಯವ ನಿರ್ವಹಣಾ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಶ್ರೀಮತಿ ಎಚ್.ವಿ. ದಿವ್ಯಾ ರವರು ನಗರಗಳಲ್ಲಿ ಟೆರಸ್ ಗಾರ್ಡನ್ ಹಾಗೂ ಅದರ ಪ್ರಾಮುಖ್ಯತೆ ಮತ್ತು ನಿರ್ವಹಣೆ ಕುರಿತು ಮಾತನಾಡಿದರು. ಕೆವಿಕೆಯ ಗೃಹ ವಿಜ್ಞಾನಿ ಡಾ. ದೀಪಕರವರು ಪೌಷ್ಟಿಕ ಕೈ ತೋಟದಲ್ಲಿ ಬೆಳೆದ ತರಕಾರಿಗಳ ಹಾಗೂ ದಿನನಿತ್ಯದ ಆಹಾರದಲ್ಲಿ ವಿವಿಧ ತರಕಾರಿಗಳ ಬಳಕೆ, ಜೀವನ ಶೈಲಿ, ರೋಗಗಳ ನಿವಾರಣೆ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಡಾ. ದೀಪಕ ಸ್ವಾಗತಿಸಿದರು. ಶ್ರೀಮತಿ ಎಚ್.ವಿ. ದಿವ್ಯಾ ರವರು ನಿರೂಪಿಸಿದರು. ಡಾ. ಎಂ.ಎಸ್. ರಕ್ಷಿತ್ ರಾಜ್ ವಂದಿಸಿದರು. ಕಾರ್ಯಕ್ರಮದಲ್ಲಿ 60 ಕ್ಕೂ ಹೆಚ್ಚು ರೈತ ಮಹಿಳೆಯರು ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು. ಹಾಗೆಯೆ ರೈತ ಮಹಿಳೆಯರಿಗೆ ಪೌಷ್ಟಿಕ ಕೈತೋಟದ ಕಿಟ್ ಹಾಗೂ ಸಸಿಗಳನ್ನು ವಿತರಿಸಲಾಯಿತು.

ಸಾರ ಸಜ್ಜನರ ಸಂಗವ ಮಾಡುವುದು
ದೂರ ದುರ್ಜನರ ಸಂಗ ಬೇಡವಯ್ಯಾ
ಆವ ಹಾವಾದಡೇನು, ವಿಷವೊಂದೆ ಅಂತವರ ಸಂಗ ಬೇಡವಯ್ಯಾ
ಅಂತರಂಗ ಶುದ್ಧವಿಲ್ಲದವರ ಸಂಗ
ಸಿಂಗ ಕಾಳಕೂಟ ವಿಷವೊ
ಕೂಡಲಸಂಗಮದೇವಾ

– ಬಸವಣ್ಣ

## ನಿಪ್ಪಾಣಿವಾಡೆಯ ಭಿತ್ತಿಚಿತ್ರಕಲೆ – ಗ್ರಂಥದ ಲೋಕಾರ್ಪಣೆ

ಜೆಎಸ್‌ಎಸ್ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಬಿ. ಎಂ. ಪಾಟೀಲರವರ 'ನಿಪ್ಪಾಣಿವಾಡೆಯ ಭಿತ್ತಿಚಿತ್ರಕಲೆ' ಗ್ರಂಥದ ಲೋಕಾರ್ಪಣಾ ಕಾರ್ಯಕ್ರಮವನ್ನು ದಿನಾಂಕ 18.9.2025ರಂದು ಆಯೋಜಿಸಲಾಗಿತ್ತು.

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಎಸ್.ಸಿ. ಪಾಟೀಲರವರು ಮಾತನಾಡಿ, 2006ನೇ ಇಸವಿಯಲ್ಲಿ ಈ ಪ್ರಬಂಧವು ನನ್ನ ಮಾರ್ಗದರ್ಶನದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಕೆಯಾಗಿತ್ತು. ಇಂದು ಗ್ರಂಥರೂಪ ಕಾಣುತ್ತಿರುವುದು ಸಂತೋಷದ ಸಂಗತಿ. ಕರ್ನಾಟಕದ ಐತಿಹಾಸಿಕವನ್ನು ಹೊಂದಿರುವ ಈ ನಿಪ್ಪಾಣಿವಾಡೆಯಲ್ಲಿ ರಚನೆಯಾಗಿರುವ ಭಿತ್ತಿಚಿತ್ರಕಲೆಯು ಕರ್ನಾಟಕದ ಚಿತ್ರಕಲಾ ಪರಂಪರೆಗೆ ಇನ್ನಷ್ಟು ಪುಷ್ಟಿ ನೀಡುವ ನೆಲೆಯಲ್ಲಿ ಪ್ರಸ್ತುತ ಗ್ರಂಥವು ರಚನೆಯಾಗಿದೆ. ನನ್ನ ಮಾರ್ಗದರ್ಶನದಲ್ಲಿ ಡಾ. ಬಿ.ಎಂ. ಪಾಟೀಲರು ತಮ್ಮ ಪಿಹೆಚ್.ಡಿ ಪದವಿಗಾಗಿ ಸಲ್ಲಿಸಿದ "ಕರ್ನಾಟಕದ ವೀರಶೈವ ಪರಂಪರೆಯ ಚಿತ್ರಕಲೆ" ಮಹಾಪ್ರಬಂಧವನ್ನೂ ಸಹ ಮುದ್ರಿಸಲೇಬೇಕು. ನಿಪ್ಪಾಣಿವಾಡೆಯ ಭಿತ್ತಿಚಿತ್ರಗಳು ಇಂದು ಬಹಳಷ್ಟು ನಶಿಸಿ ಹೋಗಿವೆ. ಆದರೆ ಡಾ. ಬಿ. ಎಂ. ಪಾಟೀಲರವರು ತಮ್ಮ ಅಧ್ಯಯನದ ಅವಧಿಯಲ್ಲಿ ವಿಡಿಯೋ ಚಿತ್ರೀಕರಣ ಹಾಗೂ ಛಾಯಾಚಿತ್ರಣ ಮಾಡಿಕೊಂಡು ಪ್ರಸ್ತುತ ಗ್ರಂಥದಲ್ಲಿ ಬಳಸಿಕೊಂಡಿರುವುದರಿಂದ ಅವುಗಳನ್ನು ದಾಖಲೀಕರಿಸಿ ಜನಸಾಮಾನ್ಯರಿಗೆ ಅವುಗಳನ್ನು ತಲುಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಈ ನಿಟ್ಟಿನಲ್ಲಿ ಅವರ ಕಾರ್ಯ ಅಭಿನಂದನಾರ್ಹವಾದುದು. ಸಂಶೋಧನಾ ಗ್ರಂಥಕ್ಕೆ ಅದರದೇ ಆದ ಭಾಷೆ ಇದೆ. ಆ ಹಿನ್ನೆಲೆಯಲ್ಲಿ ಡಾ. ಪಾಟೀಲರ ಅಧ್ಯಯನಶೀಲತೆ, ವಿಷಯವನ್ನು ಆಳವಾಗಿ ಅಧ್ಯಯನ ಮಾಡುವುದು, ಅವರ ತಾಳ್ಮೆ, ಪರಿಶ್ರಮ, ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಆಕರಗಳನ್ನು ಇಟ್ಟುಕೊಂಡು ಹೇಳುವ ಸ್ವಭಾವ ಹೀಗೆ ಒಬ್ಬ ಪರಿಪೂರ್ಣ ಸಂಶೋಧಕನಿಗಿರಬೇಕಾದ ಅರ್ಹತೆಗಳು ಅವರಿಗಿದೆ. ವಿಶೇಷವೆಂದರೆ ಒಂದು ಸಂಶೋಧನಾ ಗ್ರಂಥದ ಬಿಡುಗಡೆಗೆ ಯೋಗ್ಯವ್ಯಕ್ತಿಗಳಾದ ಡಾ. ಎಂ.ಎಸ್. ಮೂರ್ತಿಯವರಿಂದ ಬಿಡುಗಡೆ ಮಾಡಿಸುತ್ತಿರುವುದು ಔಚಿತ್ಯಪೂರ್ಣ ಎಂದು ಹೇಳಿದರು.

ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಡಾ. ಎಂ.ಎಸ್. ಮೂರ್ತಿಯವರು ದೃಶ್ಯಕಲಾ ಪರಂಪರೆಯ ಮಹತ್ವ ಮತ್ತು ವ್ಯಾಪ್ತಿಯ ಹಿನ್ನೆಲೆಯನ್ನು ತಿಳಿಸುತ್ತ, ಜೆಎಸ್‌ಎಸ್ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನ ಪ್ರಾಚಾರ್ಯರಾದ ಡಾ. ಬಿ.ಎಂ. ಪಾಟೀಲರು ಬರೆದ ನಿಪ್ಪಾಣಿವಾಡೆಯ ಭಿತ್ತಿಚಿತ್ರಕಲೆ ಗ್ರಂಥದಿಂದ ಹಲವು ವಿಷಯಗಳನ್ನು ಹೊಸದಾಗಿ ನಾನು ತಿಳಿದುಕೊಂಡೆ. ಅಲ್ಲದೇ ನಾನು ಅಕಾಡೆಮಿಯ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಈ ಕೃತಿ ನನ್ನ ಗಮನಕ್ಕೆ ಬಂದಿದ್ದರೆ, ಈ ಗ್ರಂಥ ಲೇಖಕರಿಗೆ ಲಲಿತಕಲಾ ಅಕಾಡೆಮಿಯ ಫೆಲೋಶಿಪ್ ನೀಡಿ ಇದರ ಕುರಿತು ಇನ್ನಷ್ಟು ಹೆಚ್ಚಿನ ಅಧ್ಯಯನದ ಜೊತೆಗೆ ಮುಂದಿನ ಸಂಶೋಧನೆಗೆ ಪ್ರಾಶಸ್ತ್ಯ ನೀಡಲು ಅವಕಾಶ ದೊರೆಯುತ್ತಿತ್ತು. ನಶಿಸಿ ಹೋಗುತ್ತಿರುವ ಸಂಶೋಧನೆಗಳನ್ನು ಬೆಳಕಿಗೆ ತರಬೇಕು. ಕಲೆಯ ಕುರಿತು ಸಂಶೋಧನೆ ಮಾಡಿ, ಗ್ರಂಥ ರಚಿಸಿ, ಅದನ್ನು ಬಿಡುಗಡೆ ಮಾಡುವ ಕಾರ್ಯ ಅಷ್ಟು ಸುಲಭವಾದುದಲ್ಲ. ಇದು ಯಶಸ್ವಿಯಾಗಿದ್ದು ಸಂತೋಷಪಡುವ ವಿಚಾರವಾಗಿದೆ. ಆತ್ಮೀಯ ಸ್ನೇಹಿತರಾದ ಡಾ. ಬಿ.ಎಂ. ಪಾಟೀಲರನ್ನು ವಿಶೇಷವಾಗಿ ಅಭಿನಂದಿಸುವೆ. ಇಂದು ಸಾಂಸ್ಕೃತಿಕ ರಂಗದಲ್ಲಿ ಕೊನೆಯ ಭಾಗದಲ್ಲಿರುವ ದೃಶ್ಯಕಲಾ ಸಮುದಾಯ ಅಕ್ಷರಕ್ಕೆ ಜನ್ಮಕೊಟ್ಟ ಮಾಧ್ಯಮ. ತನ್ನ ಬದುಕಿನ ಸಂವೇದನೆಯನ್ನು ವ್ಯಕ್ತಪಡಿಸಿರುವ ಅಜಂತಾ, ಎಲ್ಲೋರಾದ ರೇಖಾ ಮತ್ತು ವರ್ಣಚಿತ್ರಗಳು ಇತಿಹಾಸವನ್ನು ಹೇಳುತ್ತಿವೆ. ಸ್ನೇಹಿತರಾದ ಡಾ. ಬಿ.ಎಂ. ಪಾಟೀಲರಿಗೆ ಭಾಷೆಯ ಪ್ರಭುತ್ವವಿದೆ. ಅವರು ದೃಶ್ಯಕಲೆಯ ಬರವಣಿಗೆಯನ್ನು ಮುಂದುವರೆಸಬೇಕು. ಅವರ ಗ್ರಂಥ ಬಿಡುಗಡೆ ಮಾಡಲು ಹೆಮ್ಮೆಪಡುವೆ. ಮುಂದಿನ

ದಿನಮಾನಗಳಲ್ಲಿ ಇಂತಹ ಇನ್ನಷ್ಟು ಮೌಲಿಕ ಕೃತಿಗಳು ಅವರಿಂದ ಈ ಸಾರಸ್ವತ ಲೋಕದ ಕೈಸೇರಲಿ. ವಿಶೇಷವಾಗಿ ಜೆಎಸ್‌ಎಸ್ ಹಾಲಭಾವಿ ಕಲಾಮಹಾವಿದ್ಯಾಲಯದ ವಾತಾವರಣ, ವಿದ್ಯಾರ್ಥಿಗಳ ಕಲಾಕೃತಿಗಳನ್ನು ಕಂಡು ಸಂತೋಷಪಟ್ಟಿದ್ದೇನೆ. ಇನ್ನಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಇಂತಹ ವಿಚಾರ ಸಂಕಿರಣ, ಕಲಾ ಕಾರ್ಯಾಗಾರ, ಕಲಾ ಶಿಬಿರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಿ ಎಂದು ತಿಳಿಸಿದರು.

ಧಾರವಾಡ ವಿಭಾಗದ ಆಡಳಿತಾಧಿಕಾರಿಗಳಾದ ಶ್ರೀ ಎಸ್. ಜಿ. ಬಿರಾದಾರರವರು ಮಾತನಾಡಿ, ಬದುಕನ್ನು ಕಟ್ಟಿಕೊಡುವ ನಿಟ್ಟಿನಲ್ಲಿ ಕಲಾಬರಹಗಾರರು, ಕಲಾವಿದ್ಯಾರ್ಥಿಗಳು ಹಾಗೂ ಕಲಾವಿದರು ಕಲೆಯೊಂದಿಗೆ ಸಾಗಬೇಕು. 90 ದಶಕಗಳನ್ನು ಪೂರೈಸಿರುವ ಜೆಎಸ್‌ಎಸ್ ಹಾಲಭಾವಿ ಕಲಾಮಹಾವಿದ್ಯಾಲಯದ ಬೆಳವಣಿಗೆಗೆ ಸಂಬಂಧಿಸಿದಂತೆ ಅನೇಕ ಕಾರ್ಯಗಳನ್ನು ಕೈಗೊಳ್ಳಬೇಕಿದೆ. ಸದರಿ ಮಹಾವಿದ್ಯಾಲಯವನ್ನು ರಾಜ್ಯ ಹಾಗೂ ರಾಷ್ಟ್ರ ಮಟ್ಟಕ್ಕೆ ಉನ್ನತೀಕರಿಸುವ ನಿಟ್ಟಿನಲ್ಲಿ ನಾವೆಲ್ಲರೂ ಕೂಡಿ ಕಾರ್ಯ ನಿರ್ವಹಿಸೋಣ ಎಂದರು.

ಜೆಎಸ್‌ಎಸ್ ಹಾಲಭಾವಿ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಬಿ.ಎಂ. ಪಾಟೀಲ ಸ್ವಾಗತಿಸಿದರು. ಕು. ಮಡಿವಾಳಯ್ಯ ಶಂ. ಹಿರೇಮಠ ಪ್ರಾರ್ಥಿಸಿದರು. ಶ್ರೀ ಆರ್.ಎಸ್. ಯುವರಾಜ ವಂದಿಸಿದರು. ಪ್ರಾಚಾರ್ಯರಾದ ಶ್ರೀ ರಾಜಶೇಖರಪ್ಪಗೌಡ ಕಾರ್ಯಕ್ರಮದ ನಿರೂಪಿಸಿದರು.

---



ಮೈಸೂರಿನ ಅರ್ಬನ್ ಹಾತ್‌ನಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಗಾಂಧಿ ಶಿಲ್ಪ ಬಜಾರ್ ಮೇಳಕ್ಕೆ ಕೃಷ್ಣರಾಜ ಕ್ಷೇತ್ರದ ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸರವರು ಚಾಲನೆ ನೀಡಿದರು. ಚಿತ್ರದಲ್ಲಿ ಚೆನ್ನೈನ ಜವಳಿ ಮಂತ್ರಾಲಯ ಇಲಾಖೆಯ ಅಭಿವೃದ್ಧಿ ಆಯುಕ್ತರ ಕಚೇರಿಯ ಉಪನಿರ್ದೇಶಕರಾದ ಶ್ರೀ ಕೆ ಧನರಾಜನ್‌ರವರು, ಅರ್ಬನ್ ಹಾತ್‌ನ ಯೋಜನಾಧಿಕಾರಿಗಳಾದ ಶ್ರೀ ಎಂ. ಶಿವನಂಜಸ್ವಾಮಿಯವರು, ಮೈಸೂರಿನ ಕರಕುಶಲ ಸೇವಾ ಕೇಂದ್ರದ ಶ್ರೀಮತಿ ಸಾಬೀರ ಮತ್ತು ಶ್ರೀ ಸ್ವದೇಶಗಾರ ಮೊದಲಾದವರಿದ್ದಾರೆ. (13 ಸೆಪ್ಟೆಂಬರ್ 2025)

## ಜೆಎಸ್‌ಎಸ್ ಕೆವಿಕೆಯಲ್ಲಿ ಕೃಷಿ ಬೆಳೆ ಸಂಸ್ಕರಣೆ ಮೌಲ್ಯವರ್ಧನೆ

ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ, ಓಡಿಪಿ ಹಾಗೂ ಮಾದಾಪುರದ ಚಂದ್ರಮೌಳೇಶ್ವರ ಮಹಿಳಾ ಉತ್ಪಾದಕರ ಸಂಘ, ಇವರುಗಳ ಸಹಯೋಗದೊಂದಿಗೆ ಟಿಎಸ್‌ಪಿ ಯೋಜನೆಯಡಿಯಲ್ಲಿ ರೈತ ಮಹಿಳೆಯರಿಗೆ ಕೃಷಿ ಬೆಳೆಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಹಾಗೂ ಪಿಎಮ್‌ಎಫ್‌ಎಮ್‌ಇ ಯೋಜನೆಯಡಿ ಉದ್ಯಮಶೀಲತೆ ಅವಕಾಶಗಳ ಕುರಿತು ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ. ಜ್ಞಾನೇಶ್‌ರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಕೃಷಿ ಹಾಗೂ ತೋಟಗಾರಿಕೆ ಬೆಳೆಗಳ ಮೌಲ್ಯವರ್ಧನೆ ಮಾಡುವುದರ ಮೂಲಕ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಸದುಪಯೋಗ ಪಡೆದುಕೊಂಡು ಉದ್ಯಮಶೀಲತೆಯಿಂದ ರೈತ ಮಹಿಳೆಯರು ತಮ್ಮ ಆದಾಯವನ್ನು ದ್ವಿಗುಣ ಮಾಡಿಕೊಳ್ಳಬಹುದೆಂದು ತಿಳಿಸಿದರು.

ಓಡಿಪಿ ಸಂಯೋಜಕರಾದ ಶ್ರೀಮತಿ ಲಲಿತಾರವರು ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕೃಷಿ ಹಾಗೂ ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದ ವಿವಿಧ ಆಹಾರ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ತರಬೇತಿಗಳನ್ನು ಆಯೋಜಿಸಲಾಗುತ್ತಿದ್ದು ರೈತ ಮಹಿಳೆಯರು ಮತ್ತು ಸ್ವಸಹಾಯ ಸಂಘದ ಸದಸ್ಯರು ತರಬೇತಿಯನ್ನು ಪಡೆದುಕೊಂಡು ತಮ್ಮ ಉದ್ಯಮವನ್ನು ಉನ್ನತ ಮಟ್ಟಕ್ಕೆ ಬೆಳೆಸಿಕೊಳ್ಳಬೇಕೆಂದು ತಿಳಿಸಿದರು.

ಮಾದಾಪುರ ಚಂದ್ರಮೌಳೇಶ್ವರ ಮಹಿಳಾ ಉತ್ಪಾದಕರ ಸಂಘದ ಶ್ರೀಮತಿ ಲಾವಣ್ಯ ಮಾತನಾಡಿ, ಮಹಿಳೆಯರು ಉದ್ಯಮಶೀಲತೆಯಿಂದ ಸ್ವಾವಲಂಬಿಯಾಗಬೇಕೆಂದು ಪ್ರೋತ್ಸಾಹಿಸಿದರು. ಕೆವಿಕೆಯ ಗೃಹವಿಜ್ಞಾನ ವಿಷಯತಜ್ಞರಾದ ಡಾ. ದೀಪಕ್‌ರವರು ರೈತ ಮಹಿಳೆಯರಿಗೆ ಮತ್ತು ಸ್ವಸಹಾಯ ಸಂಘದ ಸದಸ್ಯರುಗಳಿಗೆ ತಾಂತ್ರಿಕವಾಗಿ ಸಿರಿಧಾನ್ಯಗಳ ಕುಕ್ಕಿಸ್, ಬ್ರೇಡ್, ಬನ್ಸ್, ಪಾಸ್ತಾ, ನೂಡಲ್ಸ್ ಹಾಗೂ ವಿವಿಧ ಬೇಕರಿ ಉತ್ಪನ್ನಗಳ ಹಾಗೂ ಸಂಪ್ರದಾಯಿಕ ಆಹಾರಗಳಾದ ರಾಗಿ ಹಪ್ಪಳ, ಸಿರಿಧಾನ್ಯಗಳ ಮಾಲ್ಟ್, ರಾಗಿ ಉಂಡೆ, ರಾಗಿ ಮಿಕ್ಸ್‌ಚರ್, ಸಂಡಿಗೆ ಮುಂತಾದ ವಿವಿಧ ಉತ್ಪನ್ನಗಳ ಕುರಿತು ತಾಂತ್ರಿಕವಾಗಿ ಮಾಹಿತಿ ನೀಡಿದರು. ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆಯಡಿಯಲ್ಲಿ ಕಿರು ಆಹಾರ ಉದ್ಯಮಗಳ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ದೊರೆಯುವ ಸಹಾಯಧನದ ಬಗ್ಗೆ ಮಾಹಿತಿ ನೀಡಿದರು. ಅದೇ ರೀತಿ ಈ ಯೋಜನೆಯಡಿ ಸ್ಥಾಪಿಸಬಹುದಾದ ಆಹಾರ ಸಂಸ್ಕರಣಾ ಘಟಕಗಳ ಬಗ್ಗೆಯೂ ತಿಳಿಸಿದರು. ಕೆವಿಕೆಯ ಆಹಾರ ಸಂಸ್ಕರಣಾ ಘಟಕದಲ್ಲಿ ಪ್ರಾಯೋಗಿಕವಾಗಿ ವಿವಿಧ ಆಹಾರ ಮೌಲ್ಯವರ್ಧಿತ ಉತ್ಪನ್ನಗಳಾದ ರಾಗಿ ಕುಕ್ಕಿಸ್, ರಾಗಿ ಮಿಕ್ಸ್‌ಚರ್, ರಾಗಿ ಹಪ್ಪಳ ಹಾಗೂ ವಿವಿಧ ತಿನಿಸುಗಳ ತಯಾರಿಕೆಯ ಪ್ರಾತ್ಯಕ್ಷಿಕೆ ನೀಡಲಾಯಿತು.

ಡಾ. ಜಿ.ಎಂ. ವಿನಯ್ ಸ್ವಾಗತಿಸಿದರು. ಶ್ರೀಮತಿ ಎಚ್.ವಿ. ದಿವ್ಯಾ ನಿರೂಪಿಸಿದರು. ಡಾ. ವೈ.ಪಿ. ಪ್ರಸಾದ್ ವಂದಿಸಿದರು. ಕಾರ್ಯಕ್ರಮದಲ್ಲಿ 35ಕ್ಕೂ ಹೆಚ್ಚು ರೈತ ಮಹಿಳೆಯರು ಹಾಗೂ ಸ್ವಸಹಾಯ ಸಂಘಗಳ ಸದಸ್ಯರು ಭಾಗವಹಿಸಿದ್ದರು.

**ಮಾಸಿಕ ಸಾಮೂಹಿಕ ವಿವಾಹ 2025**
**ಸುತ್ತೂರು ಶ್ರೀಕ್ಷೇತ್ರ**
**ಡಿಸೆಂಬರ್ 18 ಗುರುವಾರ**
ವಿವರಗಳಿಗೆ ಸಂಪರ್ಕಿಸಿ
ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಸಂಸ್ಥೆಗಳು
ಸುತ್ತೂರು
ದೂರವಾಣಿ : 08221–232223, 232224

## JSS AHER stands 21st in NIRF Rankings

JSS Academy of Higher Education and Research, Mysuru, has consistently been securing good rank in the National Institutional Ranking Framework for the last ten years, since its inception in 2016. The Academy is being ranked in the top 25 slot in the country for the last two years. The rankings for the year 2025 were released by the Union Education Minister, Sri Dharmendra Pradhan, on 4.9.2025 at New Delhi. A total of 14,163 Higher Education Institutions in the country participated for rankings under 17 different categories. Under the University Category, JSS Academy has improved its position by three ranks over the last year, and, scaled to 21st place.

The university's constituent colleges have also improved their rankings in a similar manner. JSS Pharmacy College, Ooty, is among the top 10 Pharmacy Colleges in the country, retaining its 4th position, while JSS Pharmacy College, Mysuru has secured 7th position. JSS Dental College and JSS Medical College Mysuru, have moved up by two places, viz., 10th and 37th respectively. This ranking reflects the high quality of education imparted by the Academy and its constituent institutions. In the newly introduced SDG Institutions Rank, JSS AHER features in the Rank Band 11-50.

JSS AHER has made significant strides in research as well through its 15000+ publication with the H-Index of 133 and 250+ Patents, which have attracted research funding of more than Rs.100 crores during the last five years.

JSS AHER is one among the first few universities to implement NEP-2020. It has implemented six BSc (Hons) courses under the Faculty of Life Sciences. In the upcoming Varuna Global campus, which is under construction, it aims to further diversify the activities by introducing new programs.

## Grandparents' Day Celebrated

**JSS Public School, JSS TIS' Campus, Mysuru,** celebrated Grandparents' Day with great joy and enthusiasm, to honour the grandparents with unconditional love, and seek their blessings. The program was attended by the Principal, parents, teachers, students, and most importantly, the grandparents, whose presence made the day really special.

The event began with a warm welcome to the grandparents, and with a devotional note, a prayer song was




sung. Lighting of the lamp was done by the Principal and the senior-most grandparents, symbolising the triumph of light over darkness.

Ms. Shaanvi of Grade 3 performed a graceful invocation dance. Smt. Shweta led the gathering through lively aerobics steps and laugh therapy, which created an atmosphere of joy and enthusiasm. The highlight of the day was the cultural program by the students to showcase their love towards their grandparents, through songs, dances, and heart-touching quotes. The audience enjoyed every performance, which reflected the children's affection and respect.

The Principal later addressed the gathering with her inspiring words. She appreciated the active participation of grandparents and emphasised the strong bond between generations.

After a short refreshment break, the program continued with fun-filled games, activities, and a talent show organised by Smt. Brenda George and Smt. K. Reshma, exclusively for grandparents. Their enthusiastic participation brought cheer to everyone present and proved that age is no barrier to fun.

Winners of the games and activities were honoured, adding excitement and pride to the event.

The program concluded with vote of thanks by Smt. Vinutha. After the National Anthem, the programme came to an end.

## JSS Dental College & Hospital, Mysuru
## Oral Cel Anabel DS Released



Dr. S. Meenakshi, Reader, Department of Prosthodontics and Crown & Bridge and her team, JSS Dental College & Hospital, Mysuru, launched the Anabel D.S. Gel, a unique polyherbal formulation developed over five years of dedicated research, in collaboration with Group Pharmaceuticals. It is a product under 'Make in India' and 'Made in India' which will benefit to the general public. The gel is designed to provide multiple benefits for oral health, specifically addressing fungal infections in denture-wearers and mouth ulcers, with enhanced efficacy and a refreshing fragrance, making it more patient-friendly.

The launch was presided over by Dr. H. Basavanagowdappa, Vice-Chancellor, JSS Academy of Higher Education & Research who was the Chief Guest. The Guest of Honour was Sri Sunil Attavar, Chairman, and Smt. Ann Attavar, Technical Director, Group Pharmaceuticals. The event was attended by many eminent dignitaries that included Dr. B. Manjunatha, Registrar, JSS AHER and Sri Nikhil Kaushik, CEO, Group Pharmaceuticals.

Sri H. Srinivas, Managing Director, Venkat Pharma & Naturearoma; Dr. Sunil S. Chiplunkar, Vice-President (Business Development), Group Pharmaceuticals; Sri L.P. Sugandhi, Vice-President (Marketing), Dental Division, Group Pharmaceuticals; and Dr. Kaushik Devaraju, President, KRPA; Mysuru, Group Pharmaceuticals, were present on the occasion.

Dr. S. Meenakshi, Reader, Department of Prosthodontics and Crown & Bridge, the inventor of Anabel D.S. Gel, addressed the audience and shared her insights into the research process and the collaborative efforts she had with Group Pharmaceuticals that led to this invention.

Dr. H. Basavanagowdappa emphasized the significant potential of medicinal herbs being made available in a gel form. He highlighted that such innovations can greatly benefit the general public by providing accessible and effective natural remedies. He also noted that the institution is the first of its kind to initiate an industry-academia collaboration focusing on herbal formulations. This pioneering step marks a milestone in bridging traditional knowledge with modern pharmaceutical practices for the betterment of healthcare initiatives.

## Jayanthi Celebrated

The 110th Jayanthi of His Holiness Jagadguru Dr. Sri Shivarathri Rajendra Mahaswamiji, was celebrated with a sense of devotion and enthusiasm, at JSS Public School, Mandya on 6.9. 2025.

The programme began with an invocation by the school choir, followed by lighting the ceremonial lamp by the principal, staff, and student representatives. A floral tribute was offered to the portrait of Mahaswamiji, recalling his selfless service to the society through Jnana Dasoha, Anna Dasoha and Arogya Dasoha.

Students delivered speeches in English and Kannada, highlighting Mahaswamiji's life, achievements and his vision on education, equality and social service. A special cultural programme, including devotional songs, skits, and dance performances, showcased the values and teachings of Mahaswamiji.

Smt. Nisha Manigandan, Principal, in her address, reminded the gathering about Swamiji's noble mission of service, compassion, and knowledge, and urged the students to imbibe these values in their lives.

The programme concluded with a vote of thanks and the distribution of sweets to the gathering.

## Onam Celebrated



**JSS Public School,Mandya,** The School celebrated Onam festival on 11.9.2025 with great enthusiasm and cultural spirit. The campus was beautifully decorated with traditional floral buntings, creating a vibrant festive look.

The programme began with a prayer, followed by a speech highlighting the significance of Onam, which marks the homecoming of King Mahabali and is celebrated as a harvest festival throughout Kerala. Students presented cultural programmes including traditional songs and dances that reflected the rich heritage of Kerala. The highlight of the celebration was the Thiruvathira Dance, performed gracefully by the students, which enthralled the audience.

Various fun activities like Onam Games and a demonstration of traditional art forms were organized. The teachers and students actively participated in the event making it more lively and memorable. The celebration concluded with a message of unity, prosperity, and harmony, which is the true essence of Onam.

Smt. Nisha Manigandan, Principal, appreciated the efforts of students and teachers in organizing such a meaningful programme and encouraged everyone to uphold the cultural values that appreciated unity in diversity.

## Differently Abled Students Shine at Sports Volleyball Championship




The students of JSS Polytechnic for the Differently Abled, Mysuru brought laurels to the institution by securing the 1st Prize in the 10th National Deaf Junior Volleyball Championship, jointly organized by the All-India Sports Council of the Deaf and the All Gujarat Council of the Deaf, held at the Marida Bhagol Nadiad Sports Complex, Gujarat, from 29th August to 1st September 2025.

The achievement is a testament to the talent, dedication, and spirit of the differently abled individuals, who continue to excel in every sphere, including sports and games. The championship saw participation from teams across the country, making the victory even more commendable.



ಶ್ರೀಮತ್ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಸಂಸ್ಥಾಪನಾಚಾರ್ಯ

**ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ**

**1066ನೆಯ ಜಯಂತಿ ಮಹೋತ್ಸವ**

**18–24 ಡಿಸೆಂಬರ್ 2025**

**ಮಳವಳ್ಳಿ, ಮಂಡ್ಯ ಜಿಲ್ಲೆ**



ಚಾಮರಾಜನಗರದಲ್ಲಿ ಆಯೋಜಿಸಿದ್ದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಜಗದೀಶ್ ಶೆಟ್ಟರ್‌ರವರು ಉದ್ಘಾಟಿಸಿದರು. ಶ್ರೀ ಹೆಚ್.ವಿ. ಚಂದ್ರು, ಶ್ರೀ ಎಸ್. ಸುರೇಶ್, ಪ್ರೊ. ಎಂ. ಕೃಷ್ಣೇಗೌಡ, ಶ್ರೀ ಸಿ. ಪುಟ್ಟರಂಗಶೆಟ್ಟಿ, ಶ್ರೀಮತಿ ಕುಮುದ ಕೇಶವಮೂರ್ತಿ, ಶ್ರೀ ಪಿ. ಮರಿಸ್ವಾಮಿ, ಶ್ರೀ ಮಹಮ್ಮದ್ ಅಸ್ಗರ್, ಶ್ರೀ ಎಂ. ನಂಜುಡಸ್ವಾಮಿಯವರುಗಳಿದ್ದಾರೆ (28 ಅಕ್ಟೋಬರ್ 2025)



ಗುಂಡ್ಲುಪೇಟೆಯಲ್ಲಿ ಆಯೋಜಿಸಿದ್ದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವಕ್ಕೆ ಪರಮಪೂಜ್ಯ ಜಗದ್ಗುರುಗಳವರು ಜ್ಯೋತಿ ಬೆಳಗಿಸಿ ಚಾಲನೆ ನೀಡಿದರು. ಚಿತ್ರದಲ್ಲಿ ಶ್ರೀ ನಾಗೇಂದ್ರ, ಶ್ರೀ ರವಿ ಕಮರಹಳ್ಳಿ, ಶಾಸಕರಾದ ಶ್ರೀ ಎಚ್.ಎಂ. ಗಣೇಶ್ ಪ್ರಸಾದ್, ಶ್ರೀ ಪಿ. ಶಶಿಧರ್, ಡಾ. ಎಂ.ಎನ್. ನಂದೀಶ್ ಹಂಚೆಯವರುಗಳಿದ್ದಾರೆ. (9 ಅಕ್ಟೋಬರ್ 2025)

**Registered with the Registrar of Newspapers for India No. KARBIL/2014/66470**
**'JSS Varthapathra' Monthly, Vol. 10, Issue No. 10, October 2025**



ನವದೆಹಲಿಯ ಉಪರಾಷ್ಟ್ರಪತಿ ಭವನದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಗೌರವಾನ್ವಿತ ಉಪರಾಷ್ಟ್ರಪತಿಗಳಾದ ಶ್ರೀ ಸಿ.ಪಿ. ರಾಧಾಕೃಷ್ಣನ್‌ರವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಗೌರವಿಸಿ ಅಭಿನಂದಿಸಿದರು. (28 ಸೆಪ್ಟೆಂಬರ್ 2025)




ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ವಿಜಯದಶಮಿಯಂದು ಪರಮಪೂಜ್ಯ ಜಗದ್ಗುರುಗಳವರು ಹಾಗೂ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋತ್‌ರವರು 'ಏಕ್ ಪೇಡ್ ಮಾ ಕೀ ನಾಮ್' ಅಭಿಯಾನದ ಅಂಗವಾಗಿ ಸಸಿಯನ್ನು ನೆಟ್ಟು ನೀರೆರೆಯುತ್ತಿರುವುದು. (2 ಅಕ್ಟೋಬರ್ 2025)

ಸಂಪಾದಕ: **ಡಾ. ಬಿ. ಪ್ರಭುಸ್ವಾಮಿ ಕಟ್ನವಾಡಿ** ನೆರವು: **ಆರ್.ಎಸ್. ಪೂರ್ಣಾನಂದ** ಸಹ ಸಂಪಾದಕ: **ಮ.ಗು. ಬಸವಣ್ಣ**
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 0821–2548212 Extn. 223 e-mail: varthapathra@jssonline.org website: www.jssonline.org
ಮುದ್ರಣ: ಜೆಎಸ್‌ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು
**ಬಿಡಿ ಪ್ರತಿ 10 ರೂ.**